# ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೫ - ೯ - ೪೯

★

ಬೆಲೆ ಎರಡಾಣೆ



ಮಧುರೆಯ ಮೀನಾಕ್ಷೀ ದೇವಾಲಯದ ಗೋಪುರ

Karmaveer KANNADA ILLUSTRATED WEEKLY HUB

ಸಂಪುಟ ೨೧ ಸಂಚಿಕೆ ೨೧

# ಕರ್ಮವೀರ

ಸೋಮವಾರ ಭಾದ್ರಪದ ಶು.೧೩

ತಾರೀಖು ೫—೯—೧೯೪೯

## ಮುಖಪತ್ರದಲ್ಲಿ

ದಕ್ಷಿಣ ಭಾರತದ ಮತ್ತು ಉತ್ತರ ಭಾರತದ ವಾಸ್ತು ಶಿಲ್ಪಕಲೆಗಳಲ್ಲಿರುವ ಮುಖ್ಯ ಭೇದ ಎಲ್ಲ ಕಲಾ ವಿಭಾಗಗಳಲ್ಲಿಯೂ ಅವೆರಡು ಪದ್ಧತಿಗಳಲ್ಲಿರುವ ಅಂತರವಂತೆಯೇ ಇದೆ. ಉತ್ತರದ ಕಲೆಯ ಮೇಲೆ- ಶಿಲ್ಪ, ಚಿತ್ರ, ಸಂಗೀತ ಇವೆಲ್ಲ ಶಾಖೆಗಳಲ್ಲಿಯೂ- ಪರ್ಶಿಯನ್ ಪದ್ಧತಿಯ ಪರಿಣಾಮವಾಗಿದೆ. ಉತ್ತರದ ಹಿಂದೂ ದೇವಾಲಯಗಳಲ್ಲಿ ಕೂಡ ಸರಳವಾದ ಸೌಂದರ್ಯವನ್ನು ಕಾಣುತ್ತೇವೆ. ಅಲ್ಲಿ ಪರ್ಗಲಗಳಿಗೆ ಹೆಚ್ಚು ಮಹತ್ವ, ಗೋಪುರಗಳಲ್ಲಿಯೂ ಶಿಖರಗಳಲ್ಲಿಯೂ ವೃತ್ತದ ವಿನ್ಯಾಸವನ್ನೇ ಹೆಚ್ಚಾಗಿ ನೋಡಬಹುದು. ಆದರೆ ದಾಕ್ಷಿಣಾತ್ಯರಲ್ಲಿ ಸೂಕ್ಷ್ಮವಾದ ಕೆಲಸಕ್ಕೆ ಹೆಚ್ಚು ಮಹತ್ವ. ಗಗನಚುಂಬಿಯಾದ ಗೋಪುರಗಳನ್ನು ನಿರ್ಮಿಸಿದರೂ ದಾಕ್ಷಿಣಾತ್ಯ ಶಿಲ್ಪಿಗಳು ಅದರ ತುಂಬೆಲ್ಲ ಸೂಕ್ಷ್ಮವಾದ, ಚಿತ್ತಾರದ, ಬೊಂಬೆಗಳ ಕೆಲಸವನ್ನು ಮಾಡಿರುತ್ತಾರೆ. ಅವರು ಗರ್ಭಗುಡಿಯೊಳಗಿನ ಮೂರ್ತಿಯನ್ನು ಕಡೆಯುವಲ್ಲಿ ಎಷ್ಟು ಎಚ್ಚರಿಕೆ ವಹಿಸುವರೋ ಅಷ್ಟೇ ಎಚ್ಚರಿಕೆಯನ್ನು ಕಂಬಗಳ ಚಿತ್ತಾರದಲ್ಲಿಯೂ ದ್ವಾರಪಾಲಕರಲ್ಲಿಯೂ ಗೋಪುರದ ಕೆತ್ತನೆಗಳಲ್ಲಿಯೂ ವಹಿಸುವರು. ಆ ದೇವಾಲಯಗಳಲ್ಲಿ ಪೂಜಾ ವಿಧಿಯೂ ಔತ್ತರೇಯ ಗುಡಿಗಳಲ್ಲಿರುವುದಕ್ಕಿಂತ ಬಿನ್ನವೂ ಹೆಚ್ಚು ತಾಂತ್ರಿಕವೂ ಆಗಿರುತ್ತದೆ. ಆಗಮದ ಪದ್ಧತಿಯದು. ಮೂರ್ತಿಗೆ ವಿಧಿವಿಧಾನ, ತಂತ್ರವಿನ್ಯಾಸಗಳೆಲ್ಲವೂ ನಿರ್ದಿಷ್ಟವೂ ನಿಷ್ಠುರವೂ ಆಗಿರುತ್ತದೆ. ಈ ಬಾರಿಯ ಮುಖಪತ್ರದಲ್ಲಿ ಕಾಣಿಸುವ ಮಧುರೆಯ ಮೀನಾಕ್ಷೀ ದೇವಿಯ ಗುಡಿಯಾದರೂ ಇಂಥ ಶೈವಾಗಮದ ದೇವಾಲಯಗಳಲ್ಲೊಂದು ಕಂಚಿ ಚಿದಂಬರ ರಾಮೇಶ್ವರಗಳಷ್ಟೇ ಪ್ರಸಿದ್ಧವೂ ಪವಿತ್ರವೂ ಆದ ಈ ಪ್ರಾಚೀನ ದೇವಾಲಯ ವರ್ಷವರ್ಷವೂ ಲಕ್ಷಾಂತರ ಯಾತ್ರಿಕರನ್ನಾಕರ್ಷಿಸುವ ಶಿಲ್ಪಕಲೆಯ ಬೀಡಾಗಿದೆ.

## ಕರ್ಮವೀರ

**ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ**

ಸಂಸ್ಥಾಪಕರು :

**ಶ್ರೀ. ರಂ. ರಾ. ದಿವಾಕರ**

ಸಂಪಾದಕರು :

**ಶ್ರೀ. ಹ. ರಾ. ಪುರೋಹಿತ**

**ಹೊಸ ವರ್ಗಣಿ ವಿವರಗಳು :**

| | |
|---|---|
| ೧ ವರ್ಷಕ್ಕೆ | ರೂ. ೬—೧೨—೦ |
| ೬ ತಿಂಗಳಿಗೆ | ರೂ. ೩—೮—೦ |
| ೩ ,, | ರೂ. ೨—೦—೦ |

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

**ಚಂದಾದಾರರು :** ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಸಾವಿರಗಟ್ಟಳೆ ಚಂದಾದಾರರಲ್ಲಿ ನಿಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

ಒಮ್ಮೆ ಚಂದಾದಾರರಾದವರಿಗೆ ಅವರ ಅವಧಿ ಮುಗಿಯುವ ೧೫ ದಿನ ಮುಂಚಿತವೇ ವ್ಹಿ. ಪಿ. ಮಾಡಲಾಗುವದು. ಬೇಡಾದವರು ಮೊದಲೇ ತಿಳಿಸಬೇಕು. ಚಂದಾ ಹಣ ಮುಂಗಡ.

**ಲೇಖಕರು:** "ಕರ್ಮವೀರ" ದಲ್ಲಿ ಪ್ರಕಟನೆಗಾಗಿ ಕಳಿಸುವ ಲೇಖ, ಕತೆ, ಕವಿತೆ ಮೊದಲಾದವುಗಳು ಅಸ್ವೀಕೃತವಾದಲ್ಲಿ ತಿರುಗಿ ಪಡೆಯಲಪೇಕ್ಷಿಸುತ್ತಿದ್ದರೆ ಲೇಖದ ಸಂಗಡಲೇ ಅವಶ್ಯವಿದ್ದಷ್ಟು ಅಂಚೆ ತಿಕೀಟುಗಳನ್ನು ಕಳಿಸಿರಬೇಕು. ಹಾಗೆ ಮಾಡದೆ ಮುಂದೆ ಆ ಲೇಖಗಳ ಬಗ್ಗೆ ಪತ್ರವ್ಯವಹಾರ ಮಾಡಿದರೆ ಅಥವಾ ತಿರುಗಿ ಕಳಿಸಬೇಕೆಂದರೆ ಅದು ಸಾಧ್ಯವಾಗದು. ಸ್ವೀಕೃತವಾದ ಕತೆಗಳಿಗೂ ಪೂರ್ಣಾಕಾರದ, ಅಂದರೆ "ಕರ್ಮವೀರ"ದ ಎರಡು ಕಾಲಂ ಮೀರಿದ ಲೇಖಗಳಿಗೂ ನಿರ್ದಿಷ್ಟ ಪ್ರತಿಫಲ ಕೊಡಲಾಗುವದು.

— ವ್ಯವಸ್ಥಾಪಕ,
"ಕರ್ಮವೀರ" ಹುಬ್ಬಳ್ಳಿ

# ಆರ್ಥಿಕ ಸಮಸ್ಯೆ ಬಿಡಿಸುವುದೆಂತು?

ಇಂದು ಆರ್ಥಿಕ ಸಮಸ್ಯೆಯು ಇಡೀ ಜಗತ್ತನ್ನೇ ಬಾಧಿಸುತ್ತದೆ. ಅದರಲ್ಲಿಯೂ ಆರ್ಥಿಕ ದೃಷ್ಟಿಯಿಂದ ಪರಾವಲಂಬಿಯಾಗಿರುವ ಹಿಂದುಸ್ತಾನದಂಥ ರಾಷ್ಟ್ರದಲ್ಲಿ ಈ ಸಮಸ್ಯೆ ತಾಂಡವನೃತ್ಯ ಮಾಡುತ್ತದೆ. ಇದರ ಪರಿಹಾರವಾಗದಿದ್ದರೆ ಇಷ್ಟೊಂದು ಕಷ್ಟನಿಷ್ಠುರಗಳಿಂದ ಸಂಪಾದಿಸಿದ ಸ್ವಾತಂತ್ರ್ಯವೂ ಗಂಡಾಂತರದಲ್ಲಿ ಬರುವುದು. ಅಂತೆಯೇ ಸರಕಾರದವರೂ ಸಾರ್ವಜನಿಕರೂ ಈ ಆರ್ಥಿಕ ಸಮಸ್ಯೆಯ ಪರಿಹಾರದತ್ತ ಗಮನವೀಯಬೇಕಾದುದು ಕರ್ತವ್ಯವಾಗಿದೆ.

ಅಮೇರಿಕೆಯ ಅಧ್ಯಕ್ಷರಾದ ಟ್ರೂಮನ್ನರು ಜಾಗತಿಕ ಆರ್ಥಿಕ ಸಮಸ್ಯೆಯ ಪರಿಹಾರಕ್ಕಾಗಿ ಕೆಲ ಸೂಚನೆಗಳನ್ನು ಮಾಡಿರುವರು. ೧) ಭದ್ರ ಹಾಗು ಪ್ರಗತಿಪರ ಆರ್ಥಿಕ ರಚನೆಯು ವಿಶ್ವಶಾಂತಿಗೆ ಅವಶ್ಯ ೨) ಸರಕುಗಳ ವಿನಿಮಯದ ಸುಗಮತೆಯ ಅವಶ್ಯಕತೆ. ೩) ಸ್ವತಂತ್ರರಾಷ್ಟ್ರಗಳು ಪರಸ್ಪರ ಸಹಕಾರದಿಂದ ವರ್ತಿಸುವದು ೪) ಪ್ರಜಾಪ್ರಭುತ್ವರಾಷ್ಟ್ರಗಳು ಪರರಾಷ್ಟ್ರಗಳ ಆಂತರಿಕ ರಾಜಕಾರಣದಲ್ಲಿ ಕೈಹಾಕತಕ್ಕದ್ದಲ್ಲ. ಟ್ರೂಮನ್‌ರ ಈ ಚತುಃಸೂತ್ರಗಳು ತಾತ್ವಿಕ ದೃಷ್ಟಿಯಿಂದ ಮಹತ್ವದ್ದಾಗಿದ್ದು ಸಾಮಾನ್ಯವಾಗಿ ಒಪ್ಪುವಂತಹವಾಗಿವೆ. ಅಲ್ಲದೆ ಇವನ್ನು ಕಾರ್ಯರೂಪದಲ್ಲಿ ತಂದುದಾದರೆ ಆರ್ಥಿಕ ಪ್ರಶ್ನೆಯಷ್ಟೇ ಅಲ್ಲ ಇನ್ನೂ ಅನೇಕ ಪ್ರಶ್ನೆಗಳು ಬಗೆಹರಿದು ಜಗತ್ತು ಸುಖ—ಶಾಂತಿ—ಸಮೃದ್ಧಿಗಳಲ್ಲಿ ಲೋಲಾಡಬಲ್ಲುದು. ಅಮೇರಿಕೆಯು ಇನ್ನು ಮೇಲೆ ಆರ್ಥಿಕ ಕ್ಷೇತ್ರದಲ್ಲಿ ಪ್ರತ್ಯೇಕತೆಯ ಧೋರಣವನ್ನನುಸರಿಸಬಾರದು ಜಗತ್ತಿನ ವ್ಯಾಪಾರ ಅಭಿವೃದ್ಧಿಯಾಗಿ ಹಿಂದುಳಿದ ರಾಷ್ಟ್ರಗಳು ಅಭಿವೃದ್ಧಿ ಹೊಂದುವಂತೆ ಅದು ಪ್ರಯತ್ನಿಸಬೇಕು. ವಿದೇಶ ವ್ಯಾಪಾರವಿಲ್ಲದಿದ್ದರೆ ಅಮೇರಿಕೆಯ ಅನೇಕ ಉದ್ಯೋಗಗಳು ಕುಂಠಿತವಾಗುವವು ಮತ್ತು ಅಟಂ ಶಕ್ತಿಯನ್ನು ಬೆಳೆಸುವದೂ ಕಠಿನವಾಗುವದು ಎಂದೂ ಟ್ರೂಮನ್‌ರು ಈ ಭಾಷಣದಲ್ಲಿ ಅಭಿಪ್ರಾಯ ಪಟ್ಟಿರುವರು

ಅಮೇರಿಕೆಯಂಥ ಪ್ರಬಲ ರಾಷ್ಟ್ರವು ಅನುಸರಿಸುತಿರುವ ಈ ವ್ಯಾಪಾರ ಧೋರಣವೆ ಜಗತ್ತಿನ ರಾಷ್ಟ್ರಗಳಲ್ಲಿ ಸ್ಪರ್ಧೆಯ ವಿಷಯವಾಗಿ ಅದರಿಂದ ಆಂತರಿಕ ಶಕ್ತಿಗೂ ಭಂಗವುಂಟಾಗಲು ಕಾರಣವಾಗುವದು. ಆಯಾ ರಾಷ್ಟ್ರಗಳು ತಮ್ಮ ತಮ್ಮ ವ್ಯಾಪಾರವನ್ನು ಬೆಳೆಸಬೇಕೆಂಬ ಹಂಬಲದಿಂದ ಸ್ಪರ್ಧೆಯನ್ನು ನಡೆಸುವವಲ್ಲದೆ ಪರಸ್ಪರ ದ್ವೇಷ ಮತ್ಸರ ಭಾವಗಳನ್ನೂ ತಾಳುವವು. ಇದರ ಪರಿಣಾಮವಾಗಿ ಯುದ್ಧದ ಕಿಡಿಗಳೂ ಹಾರುವವು. ಆದುದರಿಂದ ಈ ಬಗೆಯ ಅವಾಸ್ತವ ಸ್ಪರ್ಧೆಗೆ ಅವಕಾಶ ದೊರೆಯದಂತೆ ಆಯಾ ರಾಷ್ಟ್ರಗಳು ಆರ್ಥಿಕ ದೃಷ್ಟಿಯಿಂದ ಸ್ವಾವಲಂಬಿಯಾದರೆ, ತಮಗೆ ಬೇಕಾಗುವ ಜೀವನಾವಶ್ಯಕ ಪದಾರ್ಥಗಳನ್ನು ತಾವೇ ನಿರ್ಮಿಸಿಕೊಳ್ಳುವಂತಾದರೆ ಇಂದಿನ ಸಮಸ್ಯೆಗಳು ತಂತಾನೆ ಬಗೆಹರಿಯಬಲ್ಲವು. ಯಾವದೊಂದು ರಾಷ್ಟ್ರದ ಆರ್ಥಿಕ ಸ್ವಾಯತ್ತತೆಯನ್ನು ಕಸಿದುಕೊಳ್ಳುವದೆಂದರೆ ಅದರ ಸರಸ್ವವನ್ನು ಹೀರಿದಂತೆಯೇ; ಅದರ ರಾಜಕೀಯ ಸ್ವಾತಂತ್ರ್ಯವು ಇದ್ದೂ ಇಲ್ಲದಂತೆಯೇ ಸೈ. ಆದುದರಿಂದ ಟ್ರೂಮನ್‌ರಂಥವರ ಚತುಃಸೂತ್ರಗಳು ಆಯಾ ರಾಷ್ಟ್ರಗಳನ್ನು ಆರ್ಥಿಕ ದೃಷ್ಟಿಯಿಂದ ಸ್ವಾವಲಂಬಿ ಮಾಡಲು ಸಹಾಯಕವಾಗಲಾರವು.

ತಮ್ಮ ವ್ಯಾಪಾರಾಭಿವೃದ್ಧಿಗಾಗಿ ಏನು ಮಾಡಬೇಕೆಂಬುದನ್ನು ಟ್ರೂಮನ್‌ರು ತಮ್ಮೀ ಭಾಷಣದಲ್ಲಿ ಹೇಳಿರುವರು. ಯುರೋಪಿನ ಪುನರುದ್ಧಾರಕ್ಕಾಗಿ ಮುಂದಿನ ಮೂರು ವರ್ಷಗಳವರೆಗೆ ಸಹಾಯ ಮಾಡುವದು, ವಿದೇಶಗಳಲ್ಲಿ ಬಂಡವಲು ತೊಡಗಿಸಲು ಪ್ರೋತ್ಸಾಹನೆ ಕೊಡುವದು, ಹಿಂದುಳಿದ ರಾಷ್ಟ್ರಗಳು ಅಭಿವೃದ್ಧಿ ಹೊಂದುವಂತೆ ಸಹಾಯ ಮಾಡುವದು ಮತ್ತು ಕೊನೆಯದಾಗಿ ಸುಂಕಗಳನ್ನಿಳಿಸಿ ವ್ಯಾಪಾರಕ್ಕೆ ಯಾವ ಆತಂಕಗಳೂ ಇಲ್ಲದಂತೆ ಮಾಡಿ ಉತ್ಪಾದನೆ ಹೆಚ್ಚಿಸಲು ಸಹಾಯ ಮಾಡಿ ರಾಷ್ಟ್ರಗಳಲ್ಲಿ ಮೈತ್ರಿಯನ್ನು ಹೆಚ್ಚಿಸುವದು ಇವೇ ಆ ನಾಲ್ಕು ಉಪಾಯಗಳು. ಅಮೇರಿಕೆಯ ವ್ಯಾಪಾರಾಭಿವೃದ್ಧಿಯ ದೃಷ್ಟಿಯಿಂದ ಅಧ್ಯಕ್ಷ ಟ್ರೂಮನ್ನರು ಈ ಉಪಾಯಗಳನ್ನು ಸೂಚಿಸಿರುವರು. ನಾವು ಮೇಲೆ ಹೇಳಿದಂತೆ ಆಯಾ ರಾಷ್ಟ್ರಗಳು ಜೀವನಾವಶ್ಯಕ ಪದಾರ್ಥಗಳಲ್ಲಿ ಸ್ವಾವಲಂಬಿಯಾಗಿ ಉಳಿದ ಸರಕುಗಳನ್ನು ಪರದೇಶಗಳಿಂದ ತರಿಸಿಕೊಂಡರೆ ಅಷ್ಟೇನು ಹಾನಿಯಾಗದು. ಆದರೆ ಜೀವನಾವಶ್ಯಕ ಪದಾರ್ಥಗಳಿಗು ಕೂಡ ಪರರಾಷ್ಟ್ರಗಳನ್ನೇ ಯಾವಾಗಲೂ ಮೊರೆಹೋಗುವಂತಾದರೆ ಆರ್ಥಿಕ ದೃಷ್ಟಿಯಿಂದ ಆ ರಾಷ್ಟ್ರ ಭದ್ರವಾಗಿ ಉಳಿಯಲಾರದು. ಆರ್ಥಿಕ ಭದ್ರತೆಯಿಲ್ಲದ ರಾಷ್ಟ್ರದ ರಾಜಕೀಯ ಸ್ವಾತಂತ್ರ್ಯವೂ ಅಸ್ಥಿರವಾಗಬಲ್ಲದು. ಜಗತ್ತಿನ ಉದ್ಧಾರಕ್ಕಾಗಿ ಹೊರಟ ಟ್ರೂಮನ್ನರು ಈ ಮೂಲ ಮಂತ್ರದ ಮರ್ಮವನ್ನು ತಿಳಿದುಕೊಂಡು ತದನುಸಾರ ತಮ್ಮ ಧೋರಣವನ್ನು ಗೊತ್ತುಪಡಿಸಿದ್ದಾದರೆ ಮಾತ್ರ ಜಗತ್ತಿನಲ್ಲಿ ನಿಜವಾದ ಶಾಂತಿ ಪ್ರಸ್ಥಾಪನೆಗೆ ಸಹಾಯ ಮಾಡಿದಂತಾಗುವದು. ಇಲ್ಲವಾದರೆ ಕೇವಲ ತಮ್ಮ ಬೊಜ್ಜು ಬೆಳಸಲು ಇದೆಲ್ಲ ಉಪದ್ವ್ಯಾಪ ನಡೆಸಿದ್ದಾರೆ ಟ್ರೂಮನ್‌ರು, ಎಂಬ ಅಪವಾದಕ್ಕೆ ಗುರಿಯಾಗಬೇಕಾಗುವದು.

ಹಿಂದುಸ್ತಾನದ ಮುಖ್ಯಮಂತ್ರಿಗಳಾದ ಪಂಡಿತ ಜವಾಹರಲಾಲರೂ ಕಾನಪುರದಲ್ಲಿಯ ಇತ್ತೀಚಿನ ಭಾಷಣದಲ್ಲಿ ಹಿಂದುಸ್ತಾನದ ಆರ್ಥಿಕ ಸಮಸ್ಯೆಯ ಪರಿಹಾರದತ್ತ ಜನತೆಯ ಲಕ್ಷ್ಯವನ್ನು ಎಳೆದಿರುವರು. ಹಿಂದುಸ್ತಾನಕ್ಕೆ ಪರದಾಳಿಯ ಗಂಡಾಂತರಕ್ಕಿಂತ ಆಂತರಿಕ ದೌರ್ಬಲ್ಯ ವಿಶೇಷತಃ ಆರ್ಥಿಕ ಸಮಸ್ಯೆಯೇ ಪೀಡಿಸುತ್ತಿರುವದು ಎಂದು ಅವರು ಹೇಳಿರುವರು. ಈ ಆರ್ಥಿಕ ಸಮಸ್ಯೆಯು ಬಗೆಹರಿಯಬೇಕಾದರೆ ಜನತೆಯು ಪಕ್ಷ ಪಂಗಡಗಳ ಭೇದವನ್ನೆಣಿಸದೆ ಒಮ್ಮತದಿಂದ ಸಹಕರಿಸುವದು ಅವಶ್ಯವಾಗಿದೆ. ಆಡಳಿತೆಯನ್ನು ವಹಿಸಿಕೊಂಡ ಪಕ್ಷದ ಕೂಡ ಯಾವದೇ ಬಗೆಯ ಮತಭೇದವಿದ್ದರೂ ಆರ್ಥಿಕ ದೃಷ್ಟಿಯಿಂದ ರಾಷ್ಟ್ರವನ್ನು ಸ್ವಾವಲಂಬನಮಾಡುವತ್ತ ಪ್ರತಿಯೊಂದು ಪಕ್ಷವೂ ಸರಕಾರದ ಕೂಡ ಸಹಕರಿಸಬೇಕು. ಈ ಅಂಶವನ್ನು ದುರ್ಲಕ್ಷಿಸುತ್ತ ನಡೆದಿರುವದರಿಂದಲೆ ಇಂದು ರಾಷ್ಟ್ರವು ಆರ್ಥಿಕ ಅಭದ್ರತೆಗೊಳಗಾಗಿರುವದು. ಸರಕಾರದವರು ತಮ್ಮ ಆರ್ಥಿಕ ಮತ್ತು ಔದ್ಯೋಗಿಕ ಧೋರಣವನ್ನು ಸುಸ್ಪಷ್ಟ ಶಬ್ದಗಳಲ್ಲಿ ಸಾರಿ ಜನತೆಯ ಸಹಕಾರವನ್ನು ಕೋರಬೇಕು. ಹಿಂದುಸ್ತಾನವು ಅಮೇರಿಕೆ ಮೊದಲಾದ ಬಂಡವಲಗಾರ ರಾಷ್ಟ್ರದ ಆರ್ಥಿಕದಾಸ್ಯಕ್ಕೊಳಗಾಗಬಾರದಾಗಿದ್ದರೆ ಈಗಿನಿಂದಲೆ ಆರ್ಥಿಕ ಸಮಸ್ಯೆಯನ್ನು ಭದ್ರವಾದ ರೀತಿಯಲ್ಲಿ ಪರಿಹರಿಸಲು ಮುಂದಾಗುವದು ಅವಶ್ಯವಾಗಿದೆ.

× × ×

ಆಹಾರ ಸಮಸ್ಯೆಯನ್ನು ಬಿಡಿಸಲು ಎಲ್ಲ… ತಮ್ಮ ಪಾಲಿನ ಕರ್ತವ್ಯವನ್ನು ಮಾಡಬೇಕ… ಸಮಯವೀಗ ಬಂದಿದೆ. ಬರಿ ಸರಕಾರದ… ಮತ್ತು ಒಕ್ಕಲಿಗರು ಮಾತ್ರ ಈ ದಿಸೆಯ… ಕಾರ್ಯ ಮಾಡಿದರೆ ಉದ್ದೇಶವು ಬೇಗ ಸ… ವಾಗಲಾರದು. ಅಂತೆಯೇ ಪಶ್ಚಿ… ಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹ… ಇವರು ಆಹಾರ ರಂಗಕ್ಕೆ ಯುದ್ಧರಂಗದ… ಮಹತ್ವ ಕೊಟ್ಟು ಅದನ್ನು ಯಶಸ್ವಿ… ಹೋರಾಡಬೇಕೆಂದು ಕೇಳಿಕೊಂಡಿರುವರು… ಸೈನಿಕರು ಕೂಡ ಈ ಸಮಸ್ಯೆಯನ್ನು ಬಿಡಿ… ವಲ್ಲಿ ಸರಕಾರಕ್ಕೆ ಸಹಾಯ ಮಾಡಲು ಮುಂ… ಬಂದಿರುವರು. ಆಗಷ್ಟ ೧೫ ನೇ ತಾರೀಖಿ… ದಿನ ಸೈನಿಕರು ವೃಕ್ಷಾರೋಪಣ ಕಾರ್ಯವನ್ನ… ಗಿದ್ದು ಪ್ರಸಿದ್ಧವಾಗಿದೆ. ಅಲ್ಲದೆ ತಮ್ಮ ಬಿಡಾ… ದಲ್ಲಿ ಇರುವ ಬಯಲು ಪ್ರದೇಶದಲ್ಲೆಲ್ಲ ಧಾ… ಗಳನ್ನು ಬಿತ್ತುವ ಕ್ರಮವನ್ನು ಸೈನಿಕರ… ಕೈಕೊಂಡಿರುವರು. ಪೂರ್ವ ಸೇನಾಪತ್ಯದ… ಗಳಿಗೆ ಆಹಾರ ಉತ್ಪಾದನೆಯ ಕಾರ್ಯದ… ಎಲ್ಲ ಬಗೆಯ ಸಹಕಾರ ನೀಡಲು ವಿಧಿ… ಲಾಗಿದೆ. ಆಹಾರ ಪದಾರ್ಥಗಳನ್ನು ಬೆಳೆಯು… ಕಾರ್ಯಕ್ರಮವನ್ನು ಸೈನಿಕ ಚಟುವಟಿ… ಗಳೆಂದೇ ಭಾವಿಸಿ ಅವನ್ನು ಯಶಸ್ವಿಮಾಡ… ವಲ್ಲಿ ಪ್ರವೃತ್ತರಾಗಬೇಕೆಂದು ವಿಧಿಸಲಾಗಿದೆ… ಇದಲ್ಲದೆ ವಾರದಲ್ಲಿ ಕನಿಷ್ಠ ಎಂಟು ಗಂಟೆಗಳನ್ನಾ… ದರೂ ಎಲ್ಲ ಸೈನಿಕರು ಒಕ್ಕಲತನದ ಚಟು… ವಟಿಕೆಗಳಲ್ಲಿ ಕಳೆಯಬೇಕೆಂದು ವಿಧಿಸಲಾಗಿದೆ… ಶಕ್ಯವಿದ್ದ ಎಲ್ಲ ಭೂಪ್ರದೇಶವನ್ನು ತೋ… ವನ್ನಾಗಿ ಮಾರ್ಪಡಿಸಬೇಕೆಂದು ತಿಳಿಸಲಾಗಿದೆ… ಈ ಚಟುವಟಿಕೆಗಳನ್ನು ನಡೆಸಲು ಬೇರೆ ಬೇ… ಸಮಿತಿಗಳನ್ನು ಏರ್ಪಡಿಸಲಾಗಿದೆ. ಅವಶ್ಯ… ಪಡಭೂಮಿ, ಟ್ರ್ಯಾಕ್ಟರು, ಗೊಬ್ಬರ, ಬೀ… ಮತ್ತು ಒಕ್ಕಲತನದ ತಜ್ಞರನ್ನೊದಗಿಸಬೇ… ಕೆಂದು ಪ್ರಾಂತೀಯ ಸರಕಾರಗಳಿಗೇ ಕೇಳಿಕೊ… ಲಾಗಿದೆ. ಸೈನಿಕರ ಆಹಾರದಲ್ಲಿಯೂ ಅವಶ್ಯ… ಮಿತವ್ಯಯವನ್ನು ಮಾಡಲು ಬಿನ್ನವಿಸಲಾಗಿದೆ… ಸೈನ್ಯಖಾತೆಯಲ್ಲಿ ಆಹಾರ ಪದಾರ್ಥಗಳ… ಹೆಚ್ಚು ಹಾಳಾಗುತ್ತಿವೆಯೆಂದೂ ಏನೂ ಕೆಲಸ… ವಿಲ್ಲದೆ ಅವರು ಪರಪುಷ್ಟ ಜೀವಿಗಳಂ… ಜೀವಿಸುತ್ತಿರುವರೆಂದೂ ಆರೋಪಿಸಲಾಗ… ತ್ತದೆ. ಆದರೆ ಇದೀಗ ಸೈನ್ಯಖಾತೆಯವರ… ಆಹಾರೋತ್ಪಾದನೆಯಲ್ಲಿ ಆಸ್ಥೆಯಿಂದ ದು… ಯಬೇಕೆಂದು ವಿಧಿಸಿದ್ದು ಅತ್ಯಂತ ಮಹತ್ವ… ದ್ದಾಗಿದೆ. ಇದು ಕಾರ್ಯರೂಪದಲ್ಲಿ ಬಂದ… ಆಹಾರದ ಕೊರತೆಯು ಬಹಳ ಮಟ್ಟಿಗೆ ಕಡಿ… ಯಾಗಬಲ್ಲದು.

× × ×

ಜ್ಞಾನಪ್ರಸಾರ ಮಾಡುವಂಥ ವೃತ್ತಪತ್ರಿ… ಗಳ ಜಾಹೀರಾತುಗಳ ಮೇಲೆ ಕರವನ್ನು… ಹೇರುವ ಉಪಕ್ರಮವನ್ನು ಇತ್ತೀಚೆ ಕೆ… ಪ್ರಾಂತೀಯ ಸರಕಾರಗಳು ಕೈಕೊಂಡಿದ್ದ… ರಿಂದ ಪತ್ರಿಕಾ ಸಂಪಾದಕರಲ್ಲಿ ಬಹಳ ಅಸ… ಮಾಧಾನವುಂಟಾಗಿದ್ದಿತು. ಆಯಾ ಪ್ರಾಂ… ಗಳಲ್ಲಿಯ ಪತ್ರಿಕಾ ಸಂಪಾದಕರು ಸಂಬಂಧಿಸಿ… ಮಂತ್ರಿಗಳನ್ನು ಕಂಡು ಇಂಥ ಕರವನ್ನು ಹೇರ… ಬಾರದೆಂದು ಬಿನ್ನವಿಸಿಕೊಂಡಿದ್ದರು. ಆದರೂ… ಪ್ರಾಂತೀಯ ಸರಕಾರಗಳು ಅತ್ತ ವಿಶೇಷ… ಲಕ್ಷ್ಯಕೊಡದೆ ಪತ್ರಿಕಾಕರ್ತರನ್ನು ಒಂದು… ಬಗೆಯ ನಿಯಂತ್ರಣದಲ್ಲಿ ಇಡಲು ಇಂಥ… ಕರಗಳನ್ನು ಅವರ ಮೇಲೆ ಹೇರುವದು ಅವಶ್ಯ… ವೆಂದೆಣಿಸಿದರು. ಪತ್ರಿಕಾ ಸಂಪಾದಕರ ಸ್ಥಾಯಿ… ಸಮಿತಿಯ ಸಭೆ ಇತ್ತೀಚೆ ದಿಲ್ಲಿಯಲ್ಲಿ ಕೂಡಿ… ದಾಗ ಇಡೀ ದೇಶದಲ್ಲಿ ಈ ಸಂಬಂಧದಲ್ಲಿ… ಒಂದೇ ಬಗೆಯ ಧೋರಣೆಯನ್ನು ಕೈಕೊಳ್ಳು… ವದವಶ್ಯವಿದ್ದುದರಿಂದ ಇದನ್ನು ಕೇಂದ್ರದ… ವಿಷಯವನ್ನಾಗಿ ಮಾಡಬೇಕೆಂದು ಅಭಿಪ್ರಾಯ… ಪಟ್ಟಿದ್ದರು. ಘಟನಾಸಮಿತಿಯ ಕಾಂಗ್ರೆಸ… ಪಕ್ಷದ ಸಭೆಯಲ್ಲಿ ಈ ವಿಷಯದ ಚರ್ಚೆಯಾಗಿ… ಈ ವಿಷಯವನ್ನು ಕೇಂದ್ರದ ವಿಷಯ ಪಟ್ಟಿ… ಯಲ್ಲಿ ಸೇರಿಸಬೇಕೆಂದು ನಿರ್ಣಯಿಸಲಾ… ಯಿತು. ಇದರಿಂದ ಪ್ರಾಂತೀಯ ಸರಕಾರ… ಗಳಿಗೆ ಒಂದು ಬಗೆಯಿಂದ ನಿರಾಶೆಯಾದರೂ… ಇದು ಅತ್ಯವಶ್ಯವಾಗಿತ್ತೆಂಬುದು ನಿರ್ವಿವಾದ… ವಾಗಿದೆ. ಘಟನಾ ಸಮಿತಿಯಲ್ಲಿಯೂ ಈ… ಪ್ರಶ್ನೆ ಒಂಬತನೇ ತಾರೀಖಿನ ದಿನ ಚರ್ಚೆಗೆ… ಬಂದಿದೆ. ಒಕ್ಕೂಟ ಯಾದಿಯಲ್ಲಿ ಈ ವಿಷ… ಯವನ್ನು ಸೇರಿಸಲಿಕ್ಕೆ ಬರುತ್ತದೆಯೋ… ಇಲ್ಲವೋ ಎಂಬ ಬಗ್ಗೆ ಶ್ರೀ ಗುಪ್ತಾ ಇವರು… ವಿಧಿಬಂಧವನ್ನು ಮಂಡಿಸಿರುವರು. ಇದರ… ಮೇಲೆ ಸಾಕಷ್ಟು ಚರ್ಚೆಯಾಗಿದ್ದು ಅಧ್ಯ… ಕ್ಷರು ತಮ್ಮ ನಿರ್ಣಯವನ್ನು ಇನ್ನೂ ಕೊಟ್ಟಿ… ರುವದಿಲ್ಲ. ಮುಂದಿನ ಕ್ರಮವೆಲ್ಲ ಅವರ… ನಿರ್ಣಯವನ್ನೇ ಅವಲಂಬಿಸುತ್ತದೆಯೆಂಬು… ದನ್ನು ಪ್ರತ್ಯೇಕ ಹೇಳಬೇಕಿಲ್ಲ.

**ಚಿಕ್ಕ ಕತೆ**

# ಕೊನೆಯ ನಾಟ್ಯ

ಕನ್ನಡಿಸಿದವರು:— ಗಜಾನನ ಶರ್ಮ ಕಲ್ಲಾಳ, ಕಾಶೀವಿದ್ಯಾಪೀಠ

ಆಷಾಢಭೂತಿಯ ವಯಸ್ಸು ಇನ್ನೂ ಚಿಕ್ಕದು. ತೀವ್ರಬುದ್ಧಿ, ತುಂಟ ಸ್ವಭಾವ, ಕೋಮಲ ಅಂಗಾಂಗಗಳು. ಮುನಿವ್ರತವನ್ನು ಧಾರಣೆಮಾಡಿದ್ದರೂ ಇವು ಇನ್ನೂ ನಿರ್ಮೂಲವಾಗಿರಲಿಲ್ಲ. ಒಮ್ಮೊಮ್ಮೆ ಬಾಲಸುಲಭವಾದ ಚಂಚಲತೆಯು ತುಂಟತನವನ್ನು ಪ್ರದರ್ಶಿಸಲು ಹಾತೊರೆಯುತ್ತಿತ್ತು. ಯೌವನದಲ್ಲಿ ಕಾಲಿಡುವವರ ಜೊತೆಗೇ ಹೃದಯದಲ್ಲಿ ವಿಷಯವಾಸನೆಗಳ ಅಲೆಗಳೇಳಲಾರಂಭಿಸಿದ್ದವು. ಸಂಯಮವು ಶ್ರೇಷ್ಠವೆಂದೆನ್ನಿಸಿಕೊಳ್ಳುವ ಯಾವ ಕಾರ್ಯವನ್ನು ಮಾಡದಿದ್ದರೂ ಒಮ್ಮೊಮ್ಮೆ ಮನಸ್ಸನ್ನು ವಶಪಡಿಸಿಕೊಳ್ಳುವದು ಬಹು ಕಷ್ಟವಾಗುತ್ತಿತ್ತು. ವಿಕಾರಪ್ರಚೋದಕ ವಸ್ತುಗಳ ಸಮ್ಮುಖದಲ್ಲಿಯೂ ಅವಿಕೃತಮನನಾಗಿರುವಷ್ಟು ಉನ್ನತ ಸ್ಥಿತಿಗೆ ಅವನಿನ್ನೂ ತಲುಪಿರಲಿಲ್ಲ. ಸಂಯಮದಲ್ಲಿ ವಿಶ್ವಾಸವಿದ್ದರೂ ಒಮ್ಮೊಮ್ಮೆ ಅವನನ್ನು ಉದಾಸೀನತೆಯು ಆವರಿಸುತ್ತಿತ್ತು.

ಒಂದು ದಿನ ಆಷಾಢಭೂತಿಯು ತನ್ನ ಗುರು ಆಚಾರ್ಯ ಧರ್ಮರುಚಿಯೊಡನೆ ಸಂಚರಿಸುತ್ತ ರಾಜಗೃಹವನ್ನು ತಲುಪಿದನು. ಅದು ಮಗಧದ ರಾಜಧಾನಿ. ವಿವಿಧ ಕಲಾವಿದರೂ, ವಿದ್ವಾಂಸರೂ ದೊಡ್ಡ ದೊಡ್ಡ ವ್ಯಾಪಾರಿಗಳೂ ನಗರದ ಶೋಭೆಯನ್ನು ಹೆಚ್ಚಿಸುತ್ತಿದ್ದರು. ಅಲ್ಲಿಯೇ ನಾಟಕಾಚಾರ್ಯ ವಿಶ್ವಕರ್ಮನೂ ತನ್ನ ಮಂಡಳಿಯೊಂದಿಗೆ ವಾಸಿಸುತ್ತಿದ್ದನು. ಈ ಮಂಡಳಿಯು ಅಭಿನಯಕಲೆಯಲ್ಲಿ ದೂರದೂರದ ವರೆಗೆ ಪ್ರಸಿದ್ಧಿ ಪಡೆದಿತ್ತು. ವಿಶ್ವಕರ್ಮನು ನಟನಟಿಯರನ್ನು ಆರಿಸುವದರಲ್ಲಿಯೂ ಅವರಿಗೆ ತಕ್ಕ ಶಿಕ್ಷಣ ಕೊಡುವದರಲ್ಲಿಯೂ ಪಟುವಾಗಿದ್ದನು. ಅವನಿಗೆ ಇಬ್ಬರು ಕನ್ನಿಕೆಯರಿದ್ದರು—ರಂಭೆ ಮತ್ತು ಶಚಿ. ಇಬ್ಬರೂ ನೃತ್ಯಕಲೆಯಲ್ಲಿ ನಿಪುಣರೂ ಸುಂದರಿಯರೂ ಆಗಿದ್ದರು.

ಆಷಾಢಭೂತಿಯು ಭಿಕ್ಷಾಟನೆಗಾಗಿ ತಿರುಗುತ್ತ ವಿಶ್ವಕರ್ಮನ ಮನೆಯನ್ನು ತಲುಪಿದನು. ಭಿಕ್ಷೆಯಲ್ಲಿ ಅವನಿಗೆ ಒಂದು ಲಾಡು (ಉಂಡೆ) ದೊರಕಿತು. ಹೊರಬಂದು ಅವನು ಯೋಚಿಸಿದ. ಈ ಒಂದು ಲಾಡಿನಿಂದ ಏನಾದೀತು! ಇದು ಗುರುವಿನ ಪಾಲಿಗೇ ಸರಿ. ಗುರುಗಳ ನಂತರ ಉಪಾಧ್ಯಕ್ಷರ ಬಾರಿ, ನಂತರ ಗಣಾವಚ್ಛೇದಕನ ನಂಬರು, ಇಷ್ಟಾದ ಮೇಲಲ್ಲವೇ ನನ್ನ ಪಾಲು! ಹೀಗೆ ಯೋಚಿಸಿದವನೇ ಕುರುಡನ ವೇಷವನ್ನು ಧರಿಸಿಕೊಂಡು ಪುನಃ ಭಿಕ್ಷೆ ಬೇಡಿದಾಗ ಮತ್ತೊಂದು ಲಾಡು ಸಿಕ್ಕಿತು. ಇದೇ ಪ್ರಕಾರ ಕುಬ್ಜ, ಕುಷ್ಠರೋಗಿಗಳ ವೇಷವನ್ನು ಧರಿಸಿಕೊಂಡು ಇನ್ನೆರಡು ಲಾಡುಗಳನ್ನು ಪಡೆದನು.

ಅಟ್ಟದ ಮೇಲೆ ಕುಳಿತಿದ್ದ ವಿಶ್ವಕರ್ಮನು ಆಷಾಢಭೂತಿಯ ರೂಪಪರಿವರ್ತನೆಯನ್ನು ನೋಡುತ್ತಿದ್ದ. ಈ ಸಾಧುವು ಬಹುರೂಪಿಯಾಗುವದರಲ್ಲಿ ಅತಿನಿಪುಣನು; ನಮ್ಮ ನಾಟಕ ಮಂಡಳಿಯಲ್ಲಿ ಇವನು ಸೇರಿಕೊಂಡರೆ ದುಡ್ಡಿನ ಮಳೆಗರೆಯಬಹುದೆಂದು ಯೋಚಿಸಿ ಕೆಳಗಿಳಿದು ಮುನಿಯನ್ನು ಆದರಪೂರ್ವಕವಾಗಿ ಮನೆಯೊಳಗೆ ಬರಮಾಡಿಕೊಂಡನು. ಈಗ ಮುನಿಯ ಭಿಕ್ಷಾಪಾತ್ರವು ಲಾಡುಗಳಿಂದ ತುಂಬಿತ್ತು. ಕನ್ನಿಕೆಯರಿಬ್ಬರೂ ಸಮೀಪದಲ್ಲಿಯೇ ನಿಂತುಕೊಂಡಿದ್ದರು. ಮುನಿಯ ದೃಷ್ಟಿಯು ಕನ್ನಿಕೆಯರ ಮೇಲೂ ಕನ್ನಿಕೆಯರ ದೃಷ್ಟಿಯು ಮುನಿಯ ಮೇಲೂ ಬಿದ್ದಿತು.

ಆಷಾಢಭೂತಿಯು ಆಗಾಗ್ಗೆ ವಿಶ್ವಕರ್ಮನ ಮನೆಗೆ ಬರತೊಡಗಿದನು. ರಂಭೆ ಶಚಿಯರೊಡನೆ ಮಾತುಕತೆಗಳೂ ಪ್ರಾರಂಭವಾದವು. ವಿಶ್ವಕರ್ಮನು ಅತಂಕವನ್ನೇನೂ ಮಾಡಲಿಲ್ಲ. ಯಾವ ರೀತಿಯಿಂದಾದರೂ ಆಷಾಢಭೂತಿಯು ನಾಟಕಮಂಡಳಿಯಲ್ಲಿ ಸೇರಿಕೊಳ್ಳಲಿ ಎಂಬುದೊಂದೇ ಅವನ ಇಚ್ಛೆಯಾಗಿತ್ತು.

ಆಷಾಢಭೂತಿಯ ಮನಸ್ಸು ಚಂಚಲವಾಯಿತು. ಆತ್ಮನಿಗ್ರಹವು ಶಿಥಿಲವಾಗತೊಡಗಿತು. ಪುನಃ ಪುನಃ ಮನಸ್ಸಿಗೆ ಸಮಾಧಾನ ಹೇಳತೊಡಗಿದ. ಇನ್ನು ಮುಂದೆ ಆ ಕಡೆಗೆ ಎಂದೂ ಹೋಗುವದಿಲ್ಲ. ಈ ರೀತಿ ಪ್ರತಿಜ್ಞೆ ಮಾಡಿ ಮಲಗುವನು. ಆದರೆ ಮರುದಿನ ಭಿಕ್ಷೆಯ ವೇಳೆಯಾದ ಕೂಡಲೆ ಹಿಂದಿನ ದಿನದ ಪ್ರತಿಜ್ಞೆಯ ನೆನಪೇ ಉಳಿಯುತ್ತಿರಲಿಲ್ಲ. ಕಾಲುಗಳು ತಮ್ಮಷ್ಟಕ್ಕೇ ಆ ಕಡೆಗೆ ಹೊರಳುವವು. ಸೌಂದರ್ಯದ ಆಕರ್ಷಣವು ವಿವೇಕವನ್ನು ಹತ್ತಿಕ್ಕಲು ತವಕಪಡುತ್ತಿತ್ತು. ಎಷ್ಟೋ ಸಾರೆ ಗುರುವಿನ ಹಾಗೂ ತನ್ನ ವ್ರತದ ನೆನಪಾಯಿತು. ಅಧಃಪತನದ ಭಯಂಕರ ಪರಿಣಾಮವು ಕಾಣಿಸಿತು. ಈ ಅಡ್ಡಹಾದಿಯನ್ನು ಬಿಡಲು ಇಚ್ಛಿಸುತ್ತಿದ್ದರೂ ಅವನು ಸಮರ್ಥನಾಗುತ್ತಿದ್ದಿಲ್ಲ. ಇಚ್ಛೆಯಿಲ್ಲದಿದ್ದರೂ ಎತ್ತರವಾದ ಪರ್ವತಶಿಖರದಿಂದ ಕಂದರದಲ್ಲಿ ಬೀಳುತ್ತಿರುವ ಮನುಷ್ಯನಂತಾಗಿತ್ತು ಅವನ ಸ್ಥಿತಿ. ನಿಜವಾಗಿಯೂ ಅವನು ವಿಷಕುಡಿಯುತ್ತಿದ್ದನು. ಕುಡಿಯಬಾರದೆಂದು ತಿಳಿದಿದ್ದರೂ ಕಣ್ಣು ತೆರೆದಿದ್ದರೂ ವಿಷತುಂಬಿದ ಬಟ್ಟಲನ್ನು ತುಟಿಯಿಂದ ಬೇರ್ಪಡಿಸುವ ಶಕ್ತಿ ಅವನಲ್ಲಿರಲಿಲ್ಲ. ಮನುಷ್ಯನು ಕಾಲೂರಿ ಗಟ್ಟಿಯಾಗಿ ನಿಂತಿರುವತನಕ ಕಾಲು ಜಾರಗೊಡುವದಿಲ್ಲ. ಒಮ್ಮೆ ಕಾಲು ಜಾರಿತೆಂದರೆ ಸಾವರಿಸಿಕೊಳ್ಳುವದು ಅಸಂಭವವಲ್ಲದಿದ್ದರೂ ಕಷ್ಟಸಾಧ್ಯವೇ ಸರಿ.

ಒಮ್ಮೆ ಜಾರಿಬಿದ್ದ ಆಷಾಢಭೂತಿಯು ಪುನಃ ಚೇತರಿಸಿಕೊಳ್ಳದಾದನು. ಒಂದು ದಿನ ಕನ್ಯೆಯರು ವಿವಾಹದ ಪ್ರಸ್ತಾವವೆತ್ತಿದರು. ಅವನು ಅಲ್ಲಗಳೆಯದಾದ. ಧರ್ಮ ಮತ್ತು ವ್ರತದ ನೆನಪಾಯಿತು. ಗುರುವಿನ ಸ್ಮರಣೆ ಬಂತು. ಎಲ್ಲವೂ ವ್ಯರ್ಥ. ಹಾಗೆಂದ ಮಾತ್ರಕ್ಕೆ ಅವನು ಧರ್ಮವನ್ನು ವ್ಯರ್ಥವೆಂದೆಣಿಸುತ್ತಿದ್ದನೆಂತಲ್ಲ. ಧರ್ಮದಲ್ಲಿ ಇನ್ನೂ ರುಚಿಯಿತ್ತು. ಆದರೆ ತಾನು ಅಸಹಾಯನೆಂದು ಭಾವಿಸುತ್ತಿದ್ದನು. ವಿರುದ್ಧ ದಿಶೆಯಲ್ಲಿ ತೇಲಿ ಹೋಗುತ್ತಿದ್ದನು.

೨

ಉಪಾಶ್ರಯಕ್ಕೆ ಹೋಗಿ ವಸ್ತ್ರ, ಪಾತ್ರ, ರಜೋಹರಣ ಮುಂತಾದ ಮುನಿಚಿಹ್ನೆಗಳೆಲ್ಲವನ್ನೂ ಗುರುವಿನಡಿಯಲ್ಲಿಟ್ಟು ಪ್ರಸ್ಥಾನ ಮಾಡಲು ಅಪ್ಪಣೆ ಕೇಳಿದ ಆಷಾಢಭೂತಿಗೆ ಗುರುಗಳು ಬಹಳ ಬುದ್ಧಿವಾದ ಹೇಳಿದರು. ಅವನು ಎಲ್ಲವನ್ನೂ ಕೇಳುತ್ತ ಮೌನವಾಗಿದ್ದು ಕೊನೆಗೆ ಹೇಳತೊಡಗಿದನು: 'ಭಗವನ್! ನನ್ನನ್ನು ಕ್ಷಮಿಸಿರಿ. ನಾನೊಬ್ಬ ದಣಿದ ದಾರಿಹೋಕ. ನೆಳಲು ನೋಡಿ ಕಾಲುಗಳು ದಣಿದಿವೆ. ವಿಶ್ರಮಿಸದೆ ಮುಂದಡಿಯಿಡಲಾರೆ. ಈ ವಿಶ್ರಾಂತಿಯು ನನ್ನ ಪ್ರಗತಿಯನ್ನೇ ತಡೆಹಿಡಿಯದಂತೆ ನೋಡಿ ಕೊಳ್ಳುತ್ತೇನೆ. ಇದು ವಿಶ್ರಾಂತಿಯನ್ನು ದ್ವಿಗುಣಿಸಲೂ ಬಹುದು. ಎರಡಷ್ಟು ಹೊಸ ಹುರುಪು ಬಲಗಳೊಡನೆ ವರ್ಷದ ಮಾರ್ಗವನ್ನು ದಿನಗಳಲ್ಲಿ ಕ್ರಮಿಸುತ್ತೇನೆ.

ಗುರುಗಳಿಂದ ಬೀಳ್ಕೊಂಡು ಆಷಾಢಭೂತಿಯು ವಿಶ್ವಕರ್ಮನ ಮನೆ ಸೇರಿದನು. ವಿವಾಹಿತನಾಗಿ ರಂಭೆ, ಶಚಿಯರೊಡನೆ ವಿಲಾಸದಲ್ಲಿ ದಿನಗಳೆಯತೊಡಗಿದನು. ಆದರೂ ವಾಸನೆಯು ವಿವೇಕವನ್ನು ಮರೆಸದಾಯಿತು. ಒಮ್ಮೊಮ್ಮೆ ಹಿಂದಿನ ಸಂಸ್ಕಾರವು ಜಾಗರೂಕವಾದಾಗ ವರ್ತಮಾನವು ಜೀವನವು ನಿಸ್ಸಾರವೆನಿಸತೊಡಗುತ್ತಿತ್ತು. ಯಾವದೂ ಸೀಮೆ ದಾಟಿರಲಿಲ್ಲ. ಹೆಂಡಂದಿರ ಆಗ್ರಹದಿಂದಲೂ ಸೆರೆಕುಡಿಯಲಿಲ್ಲ. ಮಾಂಸವನ್ನು ಹತ್ತಿರ ಬರಗೊಡಲಿಲ್ಲ. ಗುರುಗಳ ಉಪದೇಶವು ಸ್ಮರಣೆಗೆ ಬಂದಾಗ ಆತ್ಮಪೀಡನೆಯಾಗುತ್ತಿತ್ತು.

ಮನುಷ್ಯಸ್ವಭಾವವು ರಹಸ್ಯಮಯವಾದುದು. ಅಪ್ರಾಪ್ಯ ವಸ್ತುಗಳಲ್ಲಿರುವಷ್ಟು ಆಕರ್ಷಣೆಯು ಪ್ರಾಪ್ಯ ವಸ್ತುಗಳಲ್ಲಿರುವದಿಲ್ಲ. ಅಪ್ರಾಪ್ಯ ವಸ್ತುಗಳಿಗಾಗಿ ಸರ್ವಸ್ವವನ್ನೊಪ್ಪಿಸಲು ಸಿದ್ಧನಾದ ಮನುಷ್ಯನಿಗೆ ಅವು ಪ್ರಾಪ್ತವಾದ ಮೇಲೆ ಸಾಮಾನ್ಯ ವಸ್ತುಗಳಾಗಿ ಕಾಣುತ್ತವೆ. ಈ ಆಕರ್ಷಣೆ ಸೌಂದರ್ಯ, ಮಾಧುರ್ಯಗಳೆಲ್ಲವೂ ಮೃಗಜಲವೇ? ಮೋಸವೇ? ಅದೇನು? ಪ್ರಗತಿಯ ಬೀಜವೇ ಇದರಲ್ಲಿದೆಯಲ್ಲ! ಇಲ್ಲದಿದ್ದರೆ ಮನುಷ್ಯನು ನಿಂತಲ್ಲಿಯೇ ನಿಂತುಬಿಡುತ್ತಿದ್ದ. ನೀರಡಿಸಿದ ಮೃಗಕ್ಕೆ ಮರೀಚಿಕೆಯಲ್ಲಿ ನೀರಿನ ಕುರುಹು ತೋರದಿದ್ದರೆ ಅದಾದರೂ ಏಕೆ ಓಡಿ ದಣಿದೀತು?

ಮುನಿಯಾಗಿದ್ದಾಗ ಆಷಾಢಭೂತಿಗೆ ಗೃಹಸ್ಥಜೀವನದಲ್ಲಿ ಆಕರ್ಷಣೆಯುಂಟಾಗಿತ್ತು. ವಿವಾಹಿತನಾದ ಮೇಲೆ ಮುನಿವ್ರತದ ಸ್ಮರಣೆಯಾಗುತ್ತಿತ್ತು. ವರ್ತಮಾನ ಸ್ಥಿತಿಯಲ್ಲಿಯೇ ತೃಪ್ತನಾಗಿರಲು ಮಾನವನು ಏಕೆ ಕಲಿಯಲಿಲ್ಲವೋ! ಸತತ ಅತೃಪ್ತಿಯೇ ಅವನ ಸ್ವಭಾವ. ಸಂತೋಷದ ಉದ್ಬೋಧನೆಯು ಅತೃಪ್ತಿಯ ಮೇಲೆ ಕೃತ್ರಿಮ ಆವರಣವಾಗಬಹುದಾದರೂ ಚಿರಸ್ಥಾಯಿಯಾಗಿ ಉಳಿಯಲಾರದು.

ವಿಶ್ವಕರ್ಮನಿಗೆ ಮಾನವ ಸ್ವಭಾವದ ಚನ್ನಾದ ಪರಿಜ್ಞಾನವಿತ್ತು. ಆಷಾಢಭೂತಿಯ ಈ ಇತ್ತಂಡವನ್ನು ಅವನು ತಿಳಿಯದಿರಲಿಲ್ಲ. ಅವನೊಡನೆ ಎಚ್ಚರಿಕೆಯಿಂದ ವ್ಯವಹರಿಸಲು ತನ್ನ ಹೆಣ್ಣುಮಕ್ಕಳಿಗೆ ತಿಳಿಸಿದನು. ಅಲ್ಲದೆ ವಿರಕ್ತಿಯನ್ನು ಹೆಚ್ಚಿಸುವ ಯಾವ ಪ್ರಸಂಗವಾಗಲೀ ಆತ್ಮಗ್ಲಾನಿಯುನ್ನುಂಟುಮಾಡುವ ದೃಶ್ಯಗಳಾಗಲಿ, ತಲೆಕೆಡಿಸುವ ಬಿಡಿಸಲಾರದ ಸಮಸ್ಯೆಯಾಗಲೀ ಆಷಾಢಭೂತಿಯ ಎದುರಿಗೆ ಬರಬಾರದೆಂದು ಬೋಧಿಸಿದನು. ರಂಭೆ ಶಚಿಯರು ತಂದೆಯ ವಚನದಂತೆ ಆಷಾಢಭೂತಿಯು ತಮ್ಮೊಡನೆ ಹೆಚ್ಚೆಚ್ಚು ಸೆಳೆದು ಬರುವಂತೆ ನಿತ್ಯವೂ ಎಚ್ಚರಿಕೆ ತೆಗೆದುಕೊಳ್ಳಲಾರಂಭಿಸಿದರು.

೩

ಆಚಾರ್ಯ ವಿಶ್ವಕರ್ಮನ ನಾಟಕ ಮಂಡಳಿಯು ಇನ್ನಷ್ಟು ಬೆಳಗತೊಡಗಿತು. ಜನರು ಆಷಾಢಭೂತಿಯ ಅಭಿನಯವನ್ನು ನೋಡಲು ಮುಗಿಬೀಳುತ್ತಿದ್ದರು. ದೂರ ದೂರದಿಂದ ಜನ ಪ್ರವಾಹ ಹರಿಯತೊಡಗಿತು. ಹಾವ ಭಾವ, ಅಂಗಭಂಗಿ, ಉಕ್ತಿ-ಪ್ರತ್ಯುಕ್ತಿ ಮೊದಲಾದವುಗಳಲ್ಲಿ ನಾವೀನ್ಯವಿತ್ತು. ರಂಭೆ ಶಚಿಯರು ಯಾವಾಗಲೂ ಜೊತೆಗಿರುತ್ತಿದ್ದರು. ಆಷಾಢಭೂತಿಯು ನಾಯಕನಾದರೆ ರಂಭೆ-ಶಚಿಯರು ನಾಯಿಕೆ, ಪ್ರತಿನಾಯಿಕೆಯರಾಗುತ್ತಿದ್ದರು ಇದರಿಂದ ಅಭಿನಯಕ್ಕೆ ಕಳೆಕಟ್ಟುತ್ತಿತ್ತು.

ಒಂದು ದಿನ ರಾಜಗೃಹದ ತತ್ಕಾಲೀನ ಅಧಿಪತಿ ಸಿಂಹರಥನು ಅಭಿನಯ ನೋಡಬಯಸಿದನು. ಈ ಎಳೆವಯಸ್ಸಿನ ಕ್ಷತ್ರಿಯ ರಾಜನಿಗೆ ಶೃಂಗಾರರಸಕ್ಕಿಂತಲೂ ಕರುಣ ವೀರ ರಸಗಳಲ್ಲಿ ಆಸಕ್ತಿ ಬಹಳ. ಅವನು ವಿಶ್ವಕರ್ಮನಿಗೆ ಶಾಂತರಸ ಪ್ರಧಾನವಾದ ಕಥೆಯೊಂದನ್ನು ಹೇಳಿದನು. ಅದರಲ್ಲಿ ಸ್ತ್ರೀಪಾತ್ರಗಳು ಹೆಸರಿಗೂ ಇರಲಿಲ್ಲ ಇದೇ ಕಥೆಯ ಆಧಾರದ ಮೇಲೆ ನಾಟಕವನ್ನು ರಚಿಸಿ ಅಭಿನಯಿಸಬೇಕಾಗಿತ್ತು. ಆಷಾಢಭೂತಿ ವಿಶ್ವಕರ್ಮರು ಬಹು ಪ್ರಯತ್ನದಿಂದ ನಾಟಕತಯಾರಿಸಿದರು ಪಾತ್ರಗಳಿಗೆ ಯೋಗ್ಯ ಶಿಕ್ಷಣ ಕೊಟ್ಟಿದ್ದೂ ಆಯಿತು. ನಿಶ್ಚಿತ ದಿನ ಸಂಧ್ಯಾ ಸಮಯಕ್ಕೆ ಎಲ್ಲರೂ ಅಭಿನಯಕ್ಕಾಗಿ ರಾಜದರಬಾರವನ್ನು ಸೇರಿದರು.

ಶಚಿ ರಂಭೆಯರಿಗೆ ಇಂದು ಬಿಡುವಿತ್ತು. ಇಂದು ಆಷಾಢಭೂತಿಯು ಒಬ್ಬನೇ ಹೋಗಿದ್ದಾನೆ. ರಾಜದರಬಾರದಲ್ಲಿ ನಾಟಕ! ಅಂದ ಮೇಲೆ ರಾತ್ರಿ ಸಮಾಪ್ತವಾಗುವದಕ್ಕೆ ಮುಂಚೆ ಹೇಗೆ ಹಿಂತಿರುಗಿಯಾರು? ಇಂದು ನಮ್ಮ ಮನಃಕಾಮನೆಯನ್ನು ಪೂರೈಸಿಕೊಳ್ಳಬೇಕು. ಎಂದು ಅವರು ಯೋಚಿಸಿದರು. ಇಬ್ಬರೂ ಪುನಃತೃಪ್ತಿಯಾಗಿ ಮಾಂಸ ತಿಂದು ಸೆರೆ ಕುಡಿದು ಬಹುದಿನಗಳ ಲಾಲಸೆಯನ್ನು ತೃಪ್ತಿಗೊಳಿಸಿದರು. ಸೆರೆಯ ಗುಂಗಿನಿಂದ ಮತ್ತರಾಗಿ ಇಬ್ಬರೂ ಮೇಲಟ್ಟದಲ್ಲಿ ಮೈಮರೆತು ಮಲಗಿದರು. ಅವರಿಗೆ ಮೈಮೇಲಿನ ವಸ್ತ್ರಗಳ ಅಸ್ತವ್ಯಸ್ತತೆಯ ಅರಿವು ಸಹ ಇರಲಿಲ್ಲ.

ಅಕಸ್ಮಾತ್ ದೂತನೊಬ್ಬನು ಮಗಧದ ಸೀಮಾಂತದಲ್ಲಿ ವೈರಿಗಳು ದಂಡೆತ್ತಿ ಬಂದುದನ್ನು ರಾಜದರಬಾರದಲ್ಲಿ ತಿಳಿಸಿದನು. ರಾಜನೂ ಮಂತ್ರಿಗಳೂ ಚಿಂತಿತರಾದರು. ನಾಟಕದ ಅಭಿನಯ ಕಾರ್ಯವು ಅಷ್ಟಕ್ಕೆ ಕೊನೆಗೊಂಡಿತು. ನಟರೆಲ್ಲರು ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಆಷಾಢಭೂತಿಯು ಸಟ್ಟಗೆ ಮನೆಯ ಮೇಲಟ್ಟದ ಕೋಣೆಯನ್ನು ಪ್ರವೇಶಿದನು ರಂಭೆ, ಶಚಿಯರಿಬ್ಬರೂ ಮೈಮರೆತು ಬಿದ್ದಿದ್ದರು. ಶರೀರದಿಂದ ವಸ್ತ್ರವು ಬೇರೆಯಾಗಿತ್ತು. ಕೋಣೆಯ ತುಂಬೆಲ್ಲ ದುರ್ಗಂಧವು ವ್ಯಾಪಿಸಿತ್ತು. ಅವರ ಬಾಯಿಯಿಂದ ನೊರೆ ಹೊರಡುತ್ತಿತ್ತು. ಈ ನಗ್ನ ರೂಪವು ಆಷಾಢಭೂತಿಗೆ ಅಸಹ್ಯವೆನಿಸಿತು. ಅವನು ಯೋಚಿಸತೊಡಗಿದ. "ಅಸ್ಪಷ್ಟತೆಯ ಹೆಸರೇ ಸೌಂದರ್ಯವೇ? ಅದೇ ರೂಪು ವಸ್ತ್ರಾಭರಣಗಳಿಂದ ಆವೃತವಾಗಿ ಅರ್ಧಸ್ಪಷ್ಟ ಅಸ್ಪಷ್ಟವಾಗಿ ನನ್ನೆದುರಿಗೆ ಬಂದಾಗ ಎಷ್ಟು ಆಕರ್ಷಕವಾಗಿ ಕಂಡುಬರುತ್ತಿತ್ತು! ಎಷ್ಟು ಮೋಹಕವಾಗಿತ್ತು! ಅದೇ ಅನಾವರಣದ ರೂಪದಲ್ಲಿ ಈಗ ಎಷ್ಟು ಬೀಭತ್ಸವಾಗಿದೆ!! ಸೌಂದರ್ಯದ ನಿಜ ಸ್ಥಾನವಾವುದು? ಸಮೀಪಕ್ಕೆ ಹೋದಂತೆ ಹೆಚ್ಚು ಹೆಚ್ಚು ಆನಂದವನ್ನುಂಟುಮಾಡುವ ಹಾಗೂ ತೃಪ್ತಿಕೊಡುವ ಸೌಂದರ್ಯವಾಹಕ ತತ್ವವಾದರೂ ಯಾವುದು? ದೂರದಿಂದ ಸುಂದರವಾಗಿ ಕಾಣುವ, ಆಶ್ಚರ್ಯಚಕಿತನನ್ನಾಗಿ ಮಾಡುವ ವಸ್ತುವು ನಿಜವಾಗಿಯೂ ಮೃಗಜಲವು, ಗಂಧರ್ವನಗರವು. ನಿಜವಾದ ಜಲಾಶಯವು ಹತ್ತಿರಕ್ಕೆ ಹೋದಂತೆ ಬಾಯಾರಿಕೆಯನ್ನು ಹಿಂಗಿಸುವಂಥದು. ಅದನ್ನು ಪಡೆದರಂತೂ ಕೇಳುವದೇನು? ಹತ್ತಿರ ಬಂದಂತೆ ವೈರಾಗ್ಯವನ್ನು ಹುಟ್ಟಿಸುವಂಥವೂ ನಿರಾಶೆಯನ್ನುಂಟುಮಾಡುವಂಥವೂ ಮಿಥ್ಯೆಯಾದವುಗಳು—ಭ್ರಮೆ! ಅಯಥಾರ್ಥ!! ಈ ಭ್ರಮೆಗಾಗಿ ನಾನು ಎಷ್ಟು ಕುಣಿತ ಕುಣಿದೆ! ಪತನದ ಗರ್ತದಲ್ಲಿ ಎಷ್ಟು ಕೆಳಗಿಳಿದೆ" – ಅವನಿಗೆ ಸಹಿಸಲಾರದ ಆತ್ಮಗ್ಲಾನಿಯುಂಟಾಯಿತು.

ಆಷಾಢಭೂತಿಗೆ ನಿದ್ರೆ ಬರಲಿಲ್ಲ. ಪ್ರಾತಃಕಾಲವಾದ ಕೂಡಲೇ ತಾನು ಹೊರಟು ಹೋಗುವ ವಿಚಾರವನ್ನು ವ್ಯಕ್ತಪಡಿಸಿದ.

ವಿಶ್ವಕರ್ಮನು ಯಾವಾಗಲೂ ಶಂಕಿತನಾಗಿರುತ್ತಿದ್ದನು. ಆಷಾಢಭೂತಿಯು ಉದ್ವಿಗ್ನನಾದುದನ್ನು ನೋಡಿ ಏನೋ ಪ್ರಮಾದ ನಡೆಯಿತೆಂದು ಊಹಿಸಿದನು. ಕನ್ಯೆಯರನ್ನು ವಿಚಾರಿಸಿದ. ತಪ್ಪಿಗಾಗಿ ಮಕ್ಕಳನ್ನು ಹಳಿದು ಹೇಗಾದರೂ ಅವನ ಮನವೊಲಿಸಿಕೊಳ್ಳುವಂತೆ ಅವರನ್ನು ಪ್ರೇರೇಪಿಸಿದನು. ಒಮ್ಮೆ ಒಪ್ಪದಿದ್ದಲ್ಲಿ ಉಪಜೀವನದ ವ್ಯವಸ್ಥೆಯ ಬಗ್ಗೆ ಆಷಾಢಭೂತಿಯನ್ನು ಕೇಳಲು ಸೂಚಿಸಿದನು.

೪

ರಂಭೆ ಶಚಿಯರು ಎಲ್ಲ ತರದಿಂದಲೂ ಪ್ರಯತ್ನಪಟ್ಟರು ಹಾವ-ಭಾವದಿಂದ ಮನವೊಲಿಸುವ ಪ್ರಯತ್ನಮಾಡಿದರು ಅಂಗಲಾಚಿ ಬೇಡಿಕೊಂಡರು. ಭೋಗಿಸಿದ ಭೋಗಗಳ ಸ್ಮರಣೆಮಾಡಿಕೊಟ್ಟರು. ತಮ್ಮ ತಪ್ಪಿಗಾಗಿ ಪಶ್ಚಾತ್ತಾಪಪಟ್ಟಿದ್ದೂ ಆಯಿತು – ಕ್ಷಮೆ ಕೇಳಿಯೂ ಆಯಿತು. ಎಷ್ಟಾದರೂ ಆಷಾಢಭೂತಿಯ ಹೃದಯಪರಿವರ್ತನೆಯಾಗಲಿಲ್ಲ. ಕೊನೆಗೆ ಉಪಜೀವನದ ವಿಷಯವಾಗಿ ಕೇಳಿದರು—"ನಾವಿಬ್ಬರೂ ನಿಮ್ಮ ವಿವಾಹಿತ ಪತ್ನಿಯರು. ನೀವು ಹೀಗೆ ಹೊರಟು ಹೋದ ಮೇಲೆ ನಮ್ಮ ಭರಣ ಪೋಷಣೆ ಮಾಡುವರಾರು? ನಮ್ಮ ಉಪಜೀವನಕ್ಕಾಗಿ ಏನಾದರೂ ವ್ಯವಸ್ಥೆಯಾಗಬೇಡವೆ?"

ಆಷಾಢಭೂತಿಗೆ ಸರಿಯೆನಿಸಿತು ಬೇಡಿಕೆಯನ್ನು ಪೂರ್ಣಗೊಳಿಸದೆ ಆತ್ಮಸಾಧನೆಯು ಪೂರ್ಣವಾಗಲಾರದು. ಮನಸ್ಸಿನಲ್ಲಿ ತನ್ನ ದೃಢಸಂಕಲ್ಪವನ್ನು ಸ್ಥಿರಗೊಳಿಸಿಕೊಂಡು ಧನಸಂಚಯದ ಉಪಾಯವನ್ನು ಯೋಚಿಸತೊಡಗಿದನು.

ಅವನು ನಾಟಕವೊಂದನ್ನು ರಚಿಸಿ [illegible] "ಪ್ರಯಾಣ"ವೆಂದು ಹೆಸರಿಟ್ಟ. ಅದರ ಕಥಾಸಾರಾಂಶವು ಇಂತಿತ್ತು:— "ಪ್ರಥಮ [illegible]ನ ಪಥ ದೇಶ[illegible] ಭರತನು [illegible]ಸನ[illegible] ಪ್ರಥಮ ಚಕ್ರವರ್ತಿ ಎನ್ನಿಸಿಕೊಂಡನು. ಅವನು ವಿಜಯಯಾತ್ರೆಯಿಂದ ಆರು ಭೂಭಾಗಗಳ ಮೇಲಿನ ಅಧಿಕಾರವನ್ನು ವಶಪಡಿಸಿಕೊಂಡನು ಹದಿನಾಲ್ಕು ರತ್ನ ಹಾಗೂ ನವನಿಧಿಗಳ ಒಡೆಯನಾದನು. ಕನ್ನಡಿಯ ಅರಮನೆಯನ್ನು ಕಟ್ಟಿಸಿದನು. ರಾಜವೇಷಭೂಷಣಗಳೊಂದಿಗೆ ಅರಮನೆಯನ್ನು ಪ್ರವೇಶಿಸುತ್ತಿರುವಾಗ ಬೆರಳಿನಿಂದ ಉಂಗುರ ಜಾರಿಬಿದ್ದಿತು. ಬೆರಳಿನ ಶೋಭೆಯು ಮಾಯವಾದದನ್ನು ಕಂಡು 'ಇದೇನು! ಉಂಗುರದಿಂದಲೆ ಬೆರಳು ಶೋಭಿಸುತ್ತಿತ್ತೇ? ಇದೇ ನಿಜವಾದರೆ ಈ ಅಸ್ಥಿರ ಸೌಂದರ್ಯಕ್ಕಾಗಿ ಹೆಮ್ಮೆ ಪಡುವದು ಮೂರ್ಖತನವಲ್ಲವೇ?' ವಿಚಾರದೊಂದಿಗೆ ವೈರಾಗ್ಯ ಭಾವನೆಯು ಬೆಳೆಯುತ್ತ ನಡೆಯಿತು. ಅವನು ಉಳಿದ ಆಭರಣಗಳನ್ನು ಕಳಚಿ ನೋಡಿದನು. ಯಾವ ಅಂಗದ ಭೂಷಣವನ್ನು ತೆಗೆದಿಡುತ್ತಿದ್ದನೋ ಅದರ ಶೋಭೆಯೇ ಮಾಯವಾಗತೊಡಗಿತು. ಮುಕುಟವನ್ನು ತೆಗೆದಿಟ್ಟು ನೋಡಿದಾಗ ತಲೆಯು ಮುಕುಟವಿಲ್ಲದೆ ಅಶೋಭಾಯಮಾನವಾಗಿ ಕಂಡಿತು. ವಜ್ರದ ಹಾರವನ್ನು ಕೊರಳಿನಿಂದ ತೆಗೆದಾಗ ವಕ್ಷಃಪ್ರದೇಶವು ನಿಸ್ತೇಜವಾಗಿ ಕಾಣಿಸಿತು. ವೈರಾಗ್ಯ ಭಾವನೆಗೆ ಪುಷ್ಟಿ ದೊರಕಿತು. ಅನಿತ್ಯ-ಅಸ್ಥಿರ ವಸ್ತುಗಳ ಮೋಹವು ದೂರವಾಯಿತು ಹಾಗೂ ಭರತನಿಗೆ ಆತ್ಮಸಾಕ್ಷಾತ್ಕಾರವುಂಟಾಯಿತು ಅವನು ಸುನೆಮಂತಗಳನ್ನು ಬಿಟ್ಟು ಐದು ನೂರು ರಾಜಕುಮಾರರೊಡನೆ ವೈರಾಗ್ಯದಲ್ಲಿ ದೀಕ್ಷಿತನಾದನು."

(ಕೊನೆಯ ಪುಟಕ್ಕೆ)

(ಕೊನೆಯ ಪುಟಕ್ಕೆ)

# ಕಾವ್ಯದಲ್ಲಿ ಕರುಣರಸ

ಲೇಖಕ :— ಡಾ॥ ಕೆ. ಕೃಷ್ಣಮೂರ್ತಿ, ಎಂ. ಎ , ಪಿಎಚ್. ಡಿ.

ಸಾಹಿತ್ಯ ಮೀಮಾಂಸೆಯಲ್ಲಿ ಕರುಣರಸವು ಒಂದು ಬಿಡಿಸಲಾರದ ಸಮಸ್ಯೆಯೇ ಆಗಿ ಬಿಟ್ಟಿದೆ. ಕರುಣರಸಕ್ಕೆ ಶೋಕವೇ ಸ್ಥಾಯಿ ಭಾವ; ಆದರೆ ನಿರತಿಶಯವಾದ ಆನಂದವು ರಸದ ಸಾಮಾನ್ಯಲಕ್ಷಣ. ಆನಂದಕ್ಕೆ ಶೋಕವೇ ಮೂಲವೆನ್ನುವುದು ವಿರೋಧಾಭಾಸವಲ್ಲವೆ? ಕಾಳಿದಾಸನ ''ರತಿವಿಲಾಪ" ಮತ್ತು ''ಅಜ ವಿಲಾಪ" ಭವಭೂತಿಯ ''ಉತ್ತರ ರಾಮ ಚರಿತ", ಇವೇ ಮೊದಲಾದ ಕಾವ್ಯಗಳನ್ನಾಗಲಿ, ಪಾಶ್ಚಾತ್ಯರ ದುಃಖಪರ್ಯವಸಾಯಿ ನಾಟಕಗಳನ್ನೇ ಆಗಲಿ, ಆಸ್ವಾದಿಸಿದ ಸಹೃದಯರಿಗೆ ದುಃಖವರ್ಣನೆಯಿಂದಲೂ ಸುಖಲಾಭವಾಗುವದೆಂಬಂಶವು ಸ್ವಯಂವೇದ್ಯವೇ ಆಗಿದೆ. ನಮ್ಮಲ್ಲಿ ವಿಷಾದಾಂತವಾದ ಕಾವ್ಯಗಳೇ ಇಲ್ಲವೆಂದು ಟೀಕಿಸುವವರಿಗೆ ಉತ್ತರ ಹೇಳಲು ದುಃಖಾಂತ ಹಾಗು ಕರುಣರಸಪ್ರಚುರವಾದ ಆದಿಕಾವ್ಯ ರಾಮಾಯಣವೊಂದೇ ಸಾಕೆಂದು ತೋರುತ್ತದೆ. ಕರುಣರಸದ ಸನ್ನಿವೇಶಗಳಲ್ಲಿ ಮನಸ್ಸು ಕರಗಿ ಕಣ್ಣೀರನ್ನು ಬಿಡುವ ಅನುಭವವೂ ಅನೇಕರಿಗಿರಬಹುದು. ಇಂತಹವರನ್ನು ನಿಜವಾಗಿಯೂ ಅಳುತ್ತಿರುವರೆನ್ನಬೇಕೆ? ಅಳುವುದೇ ನಿಜವಾದರೆ, ಸುಖವಾಗಿರುವುದನ್ನು ಬಿಟ್ಟು ಅಳುವುದಕ್ಕೆಂದೇ ಕಾವ್ಯವನ್ನೋದುವವರ ಹುಚ್ಚಿಗೆ ಏನೆನ್ನಬೇಕು? ಇಂತಹ ಪ್ರಶ್ನೆಗಳು ಒಂದರ ಮೇಲೊಂದು ಏಳುವುದರಲ್ಲೇನೂ ಆಶ್ಚರ್ಯವಿಲ್ಲ. ಜೀವನದಲ್ಲಿ ದುಃಖದ ಅನುಭವವು ಆನಂದದಾಯಕದ್ದಾಗಿ ಎಂದೂ ಇರುವುದಿಲ್ಲ; ಸಾಹಿತ್ಯದಲ್ಲಿ ಮಾತ್ರ ಹಾಗಾಗುವುದಕ್ಕೆ ಕಾರಣವೇನು?

ಈ ರಹಸ್ಯದ ಶೋಧನೆಯನ್ನು ಮಾಡಲು ಸಾವಿರಾರು ವರ್ಷಗಳಿಂದ ನಮ್ಮ ದೇಶದ ವಿದ್ವಾಂಸರಂತೆಯೇ ಪಾಶ್ಚಾತ್ಯ ಪಂಡಿತರೂ ವಿಶೇಷವಾಗಿ ಪ್ರಯತ್ನಮಾಡಿದ್ದಾರೆ. ಆದರೆ ಇಂದಿಗೂ ಸಮಸ್ಯೆಯು ನಮ್ಮ ಮುಂದೆ ಇರುವುದನ್ನು ನೋಡಿದರೆ ಅವರ ಪ್ರಯತ್ನಗಳು ಸಂಪೂರ್ಣವಾಗಿ ಫಲಪ್ರದವಾಗಲಿಲ್ಲವೆಂದೇ ಹೇಳಬೇಕಾಗುತ್ತದೆ. ಪ್ರಸ್ತುತ ಲೇಖನದಲ್ಲಿ ಗಮನಾರ್ಹರಾದ ಕೆಲವು ತತ್ವಜ್ಞರ ವಿಚಾರಗಳನ್ನು ಸಂಗ್ರಹಿಸಲು ಯತ್ನಿಸಲಾಗಿದೆ.

## ಅರಿಸ್ಟಾಟಲನ ಮತ

ಪಾಶ್ಚಾತ್ಯ ಪಂಡಿತರಲ್ಲಿ ಅರಿಸ್ಟಾಟಲನಿಗೆ ಅಗ್ರಸ್ಥಾನ. ಸಕಲಶಾಸ್ತ್ರಗಳಿಗೂ ಇವನೇ ಆದ್ಯ ಪ್ರವರ್ತಕನೆಂದರೂ ಎನ್ನಬಹುದು. ಇವನ ಮಾತುಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದೇ ಒಂದು ಪ್ರಯಾಸ; ಸೂತ್ರಕ್ಕಿಂತಲೂ ಹೆಚ್ಚಾಗಿ ಲೆಕ್ಕವಿಲ್ಲದಷ್ಟು ಟೀಕೆಟಿಪ್ಪಣಿಗಳು ಹುಟ್ಟಿಕೊಂಡಿರುವುದರಿಂದ. ಆದರೂ ಇವನ ಗುರುವಾದ ಪ್ಲೇಟೋವಿನ ವಿಚಾರಸರಣಿಯನ್ನು ಮನಸ್ಸಿನಲ್ಲಿಟ್ಟುಕೊಂಡರೆ ಅರಿಸ್ಟಾಟಲನ ಅಭಿಪ್ರಾಯದ ಸ್ಪಷ್ಟ ಕಲ್ಪನೆಯುಂಟಾಗಬಹುದು ಪ್ಲೇಟೋವಿನ ಅಭಿಪ್ರಾಯವಿಷ್ಟೆ: ''ಜೀವನದ ಉನ್ನತಿಗೆ ಯಾವುದು ಸಹಾಯಕವೋ ಅದು ಗ್ರಾಹ್ಯ; ಯಾವುದು ಬಾಧಕವೋ ಅದು ಹೇಯ. ರಾಗದ್ವೇಷಾದಿಗಳು ಹೆಚ್ಚಿದಷ್ಟೂ ಉದಾತ್ತಜೀವನಕ್ಕೆ ಭಂಗಬರುತ್ತದೆ; ಅಂತೆಯೇ ಅವುಗಳನ್ನು ಬೆಳೆಯಗೊಡದೆ ತಡೆಯುವುದು ಧರ್ಮ. ಆದರೆ ಕಾವ್ಯವು ಆ ಕೀಳಬೇಕಾದ ಕಳೆಗಳನ್ನೇ ಪ್ರೋತ್ಸಾಹಿಸುತ್ತದೆ, ಕೃಷಿ ಮಾಡಿ ಬೆಳೆಯಿಸುತ್ತದೆ. ಸಾಲದುದಕ್ಕೆ ಕಾವ್ಯದಲ್ಲಿ ಸತ್ಯತೆ ಮೊದಲೇ ಇಲ್ಲ. ಶಾಶ್ವತವಾದ ಸಂಪೂರ್ಣ ಸತ್ಯತೆಯು ಕೇವಲ ಸ್ವರ್ಗಗತವಾದುದು; ಅದರ ಅನುಕರಣವೇ ಮನುಷ್ಯಲೋಕದಲ್ಲಿರುವುದು. ಈ ಅನುಕರಣದ ಅನುಕರಣವನ್ನು ಕಾವ್ಯವೆನ್ನುತ್ತೇವೆ. ಕವಿಗಳು ಅಸತ್ಯವನ್ನೇ ನುಡಿಯುವವರೆಂದು ಮತ್ತೆ ಹೇಳುವ ಕಾರಣವೇ ಇಲ್ಲ. ಆದುದರಿಂದ ಆದರ್ಶ ರಾಜ್ಯದಲ್ಲಿ ಕವಿಗಳಿಗೂ ಕಾವ್ಯಕ್ಕೂ ಸ್ಥಾನವೇ ಇರಬಾರದು." ಗುರುವಿನ ಈ ವಾದಕ್ಕೆ ಪ್ರತಿವಾದ ಮಾಡಿದಂತಿವೆ ಅರಿಸ್ಟಾಟಲನ ಮಾತುಗಳು "ಪ್ರೇಕ್ಷಕನ ಮನಸ್ಸಿನಲ್ಲಿ ಭಯ ಹಾಗು ಅನುಕಂಪೆಗಳನ್ನು ಜಾಗೃತಗೊಳಿಸಿ ಅವನಿಗೆ ಹಿತವಾಗುವಂತೆ ಅವುಗಳನ್ನು ಹೊರದೂಡುವುದೇ ಶೋಕಾಂತ ನಾಟಕಗಳ ಕಾರ್ಯ" – ಇದೇ ಅರಿಸ್ಟಾಟಲನ ಸುಪ್ರಸಿದ್ಧವಾದ ಸೂತ್ರ.

ಸೂತ್ರಕ್ಕೆ ವಿವರಣೆಯನ್ನು ಹೀಗೆ ಮಾಡಬಹುದು :— ಸಲ್ಲದ ಕಷ್ಟಪರಂಪರೆಯ ಆವಲೋಕನದಿಂದ ಜನಿಸುವ ಮನೋಭಾವನೇ ಅನುಕಂಪೆ ಅಥವಾ ಕರುಣೆ ನಮ್ಮಂಥವರೇ ಇರುವ ಇನ್ನೊಬ್ಬನ ದುಃಖದಲ್ಲಿ ಸಹಾನುಭೂತಿಯು ಭಯಸಂಮಿಶ್ರವಾಗಿಯೇ ಇರುತ್ತದೆ. ಶೋಕವು ನಮ್ಮದೇ ಎಂಬ ಭ್ರಾಂತಿಯಿಂದ ಭಯ, ಅನ್ಯಗತವೆಂಬ ಪ್ರತೀತಿಕಾಲದಲ್ಲಿ ಕರುಣೆ ಇದು ದುಃಖಾಂತ ನಾಟಕಗಳನು ನೋಡುವವರ ಮನಸ್ಸಿನಲ್ಲಿ ಆಗುವ ಅನುಭವಗಳೆಂದು ಅರಿಸ್ಟಾಟಲನ ಮತ. ಜೀವನದಲ್ಲಿಯೂ ಸಂಸ್ಕಾರರೂಪದಿಂದ ಭಯ ಕರುಣೆಗಳು ಮನುಷ್ಯರಲ್ಲೆಲ್ಲಾ ಇದ್ದೇ ಇರುತ್ತವೆ. ಈ ಭಾವಗಳು ಅತಿಯಾಗುವುದರಿಂದ ಸುಖಜೀವನವು ಅಶಕ್ಯಪ್ರಾಯವೇ ಆಗುತ್ತದೆ. ಪ್ಲೇಟೋ ಹೇಳುವಂತೆ ಕಾವ್ಯ ಇವುಗಳನ್ನು ಮತ್ತಷ್ಟು ಹೆಚ್ಚಿಸುವುದಿಲ್ಲ! ಅದಕ್ಕೆ ಪ್ರತಿಯಾಗಿ ಇವುಗಳನ್ನು ಸುಖಭೇದಿಯ ಮಾತ್ರೆಯಂತೆ ವಿರೇಚನಮಾಡುತ್ತದೆ. ಸತ್ಯಕ್ಕಿಂತ ಕಾವ್ಯವು ಬಹುದೂರವೆಂದು ಪ್ಲೇಟೋ ಹೇಳಿದರೆ, ಪರಮಾರ್ಥ ಸತ್ಯಕ್ಕೆ ಇತಿಹಾಸಕ್ಕಿಂತಲೂ ಕಾವ್ಯವೇ ಸಮೀಪವರ್ತಿಯೆಂದು ಅರಿಸ್ಟಾಟಲನು ನುಡಿಯುತ್ತಾನೆ.

## ಸಮಾಧಾನಕರವಲ್ಲ

ಈ ವಿರೇಚನವಾದವು ಪ್ಲೇಟೋವಿನ ಆಕ್ಷೇಪಕ್ಕೆ ಸಮಾಧಾನವನ್ನು ಹೇಳಬಹುದು. ಆದರೆ ಶೋಕಮಯವಾದ ಕಾವ್ಯದಿಂದ ಸುಖಾನುಭವ ಬರುವ ಸಮಸ್ಯೆಗೆ ಸಮಾಧಾನಕರವಾದ ಉತ್ತರವನ್ನು ಹೇಳಿದಂತಾಗುವುದಿಲ್ಲ. ಆದರಿಂದಲೇ ಅರಿಸ್ಟಾಟಲನ "ಕೆಥಾರ್ಸಿಸ್" ಎಂಬ ಪದಕ್ಕೆ "ಶುದ್ಧೀ–ಕರಣ" ವೆಂದು ಲೆಸ್ಸಿಂಗನೆಂಬ ಜರ್ಮನ್ ವಿದ್ವಾಂಸನು ಅರ್ಥ ಮಾಡುತ್ತಾನೆ; ಇತರರು "ಉದಾತ್ತೀಕರಣ" ವೆಂದು ವಿವರಣ ಮಾಡುತ್ತಾರೆ. ವ್ಯಾವಹಾರಿಕ ಜಗತ್ತಿನಲ್ಲಿ ಶೋಕಪ್ರದವಾದ ಅಂಶಗಳು ಕಾವ್ಯಪ್ರಪಂಚದಲ್ಲಿ ಸ್ವಸ್ವರೂಪವನ್ನು ಕಳೆದುಕೊಂಡು ಅಸಾಧಾರಣವಾದ ಉದಾತ್ತತೆಯನ್ನು ಪಡೆದು ಆಸ್ವಾದ್ಯತೆಯನ್ನು ಪಡೆಯುತ್ತವೆನ್ನುವುದು ಈ ವಿವರಣಗಳ ಮುಖ್ಯ ತಾತ್ಪರ್ಯ. ಮೂಲತಃ ಇದು ಸತ್ಯವಾದರೂ ಕಾರಣವನ್ನು ಮಾತ್ರ ಸರ್ವಸಮ್ಮತವಾಗಿ ಕೊಟ್ಟಂತಾಗುವುದಿಲ್ಲ.

ಇತರ ಪಾಶ್ಚಾತ್ಯ ತತ್ವಜ್ಞಾನಿಗಳು ಉಲ್ಲೇಖಿಸಿರುವ ಕೆಲವು ಕಾರಣಗಳನ್ನು ಇಲ್ಲಿ ಸಂಗ್ರಹವಾಗಿ ಕೊಡಬಹುದು:– ಶೋಪೆನ್‌ಹಾವರ್‌ನ ಪ್ರಕಾರ, ಜೀವನದ ನಿಸ್ಸಾರತೆಯೂ ನಿರರ್ಥಕತೆಯೂ ಮನಸ್ಸಿಗೆ ಬಂದಾಗ ವಿಧಿಯ ವಿಲಾಸಕ್ಕೆ ನಾವು ಯಾವ ಪ್ರತಿಭಟನೆಯೂ ಇಲ್ಲದೆ ತಲೆಬಾಗುತ್ತೇವೆ. ಈ ಬಗೆಯ ಶಾಂತ ಸ್ವಾತ್ಮಾರ್ಪಣದಿಂದ ಆನಂದವುಂಟಾಗುತ್ತದೆ. ನೀಟ್ಸೇ ಎಂಬ ತತ್ವಜ್ಞನು ವಿಶ್ವಸೃಷ್ಟಿಯ ಪರಾನಂದದ ಪ್ರತೀಕವನ್ನೇ ದುಃಖಗರ್ಭವಾದ ಸುಖದಲ್ಲಿ ಕಾಣುತ್ತಾನೆ. ಅನುಪಮ ವಾಗ್ವಿಭೂತಿಯ ಪ್ರಸಾದವೇ ಇದರ ರಹಸ್ಯವೆಂದು ಹ್ಯೂಮನು ಹೇಳುತ್ತಾನೆ. ಹೆಗೆಲನು ಲೌಕಿಕ ಸತ್ಯದ್ವಂದ್ವಗಳು ಪರಸ್ಪರ ವೈಷಮ್ಯವನ್ನು ಪರಸತ್ಯದ ಸಮುಲ್ಲಾಸದಲ್ಲಿ ನೀಗಿಕೊಳ್ಳುವಾಗಲೇ ಆ ವಿಶಾಲಸಿದ್ಧಿಯ ತಿಳಿವಳಿಕೆಯುಂಟಾಗಿ ಆನಂದೋದ್ರೇಕವಾಗುವುದೆಂದು ವರ್ಣಿಸುತ್ತಾನೆ. "ಮಹದಪಿ ಪರದುಃಖಂ ಶೀತಲಂ ಸಮ್ಯಗಾಹುಃ" ಎಂಬ ನ್ಯಾಯದಿಂದ ಕಂಡವರ ದುಃಖದರ್ಶನವೇ ಆನಂದಪ್ರದವೆಂಬ ಸಿದ್ಧಾಂತವನ್ನು ಸೂಚಿಸಿರುವವರೂ ಇದ್ದಾರೆ. ಹೀಗೆ ಉತ್ತರಗಳನ್ನು ಅನೇಕರು ವಿವಿಧವಾಗಿ ಕೊಟ್ಟಿದ್ದರೂ ರಹಸ್ಯವು ಮಾತ್ರ ಇಂದಿಗೂ ರಹಸ್ಯವಾಗಿಯೇ ಉಳಿದಿವೆ.

## ಭಾರತೀಯ ಮತ

ಇಲ್ಲಿಯ ವರೆಗೂ ಪಾಶ್ಚಾತ್ಯರ ಪ್ರಸಿದ್ಧ ಅಭಿಪ್ರಾಯಗಳನ್ನು ನೋಡಿದುದಾಯಿತು. ಈಗ ನಮ್ಮ ದೇಶದಲ್ಲಿ ಪ್ರಾಚೀನ ವಿಮರ್ಶಕರು ಕೊಟ್ಟ ಉತ್ತರವನ್ನು ಸ್ಥೂಲವಾಗಿ ವಿವರಿಸಬಹುದು:– ವಾಲ್ಮೀಕಿ ಮುನಿಗಳ ಆದಿಕಾವ್ಯವು ಶೋಕಜನಿತವೆಂದು ಕಾಳಿದಾಸನೇ ಮೊದಲಾದ ಮಹಾಕವಿಗಳು ಕೂಡ ಅಂಗೀಕರಿಸಿದ್ದಾರೆ. "ಶೋಕಃ ಶ್ಲೋಕತ್ವಮಾಗತಃ" ಎಂಬ ಪ್ರಸಿದ್ಧವಾದ ಮಾತು ಇದರ ವಿವರಣೆಯೇ ಆಗಿದೆ. ಕ್ರೌಂಚಪಕ್ಷಿಯೊಂದು ನಿಷ್ಕಾರಣವಾಗಿ ವ್ಯಾಧನಿಂದ ಹತವಾದಾಗ ಮುನಿಯ ಮನಸ್ಸಿನಲ್ಲುಂಟಾದ ಶೋಕವೇ ರಾಮಾಯಣದ ಪ್ರಥಮ ಶ್ಲೋಕ ರಚನೆಗೆ ಕಾರಣವಾಯಿತೆಂಬುದು ಪ್ರತೀತಿ. ಇದು ಸಾಧ್ಯವೇ ಎಂಬ ಪ್ರಶ್ನೆಯೇಳುತ್ತದೆ. ಶೋಕಗೊಂಡವನು ಕಣ್ಣೀರು ಸುರಿಸಬಹುದು, ಅಳಬಹುದು; ಆದರೆ ಪದ್ಯರಚನೆಗೆ ಪ್ರಾರಂಭಿಸುತ್ತಾನೆಯೆ? ಆ ಪದ್ಯವನ್ನು ಓದುವ ನಮಗೆ ಬರುವ ಅನುಭವವು ಶೋಕಮಯವೋ? ಆನಂದಮಯವೋ? ಶೋಕಮಯವೇ ಆದರೆ ನಮಗೆ ಅದರ ಹವ್ಯಾಸವೇಕೆ? ಈ ಸಮಸ್ಯೆಯನ್ನು ಅಭಿನವಗುಪ್ತಾಚಾರ್ಯರು ಬಹಳ ಸೂಕ್ಷ್ಮವಾಗಿ ಪರೀಕ್ಷಿಸಿ ಸಮಾಧಾನಕರವಾದ ಉತ್ತರ ಹೇಳಿದ್ದಾರೆ:

ಲೋಕದಲ್ಲಿ . ರಾಗದ್ವೇಷಾದಿಭಾವನೆಗಳು ವ್ಯಕ್ತಿನಿಷ್ಠವಾಗಿಯೂ ಉದ್ದೇಶಸಾಧನೆಗಾಗಿ ಬಾಹ್ಯಕ್ರಿಯಾಪ್ರೇರಕಗಳಾಗಿಯೂ ಇರುತ್ತವೆ. ರತಿ, ಕ್ರೋಧ, ಭಯ, ಶೋಕ ಮೊದಲಾದ ಭಾವಗಳನ್ನು ಸ್ಥಾಯೀ ಭಾವಗಳೆಂದು ಕರೆಯುತ್ತೇವೆ. ಜೀವನದಲ್ಲಿ ಶೋಕವೊದಗಿದರೆ ಅಳುವುದೇ ಸಹಜ, ಭಯವಾದರೆ ಓಡಿಹೋಗುವುದೂ ಸಹಜ. ಸ್ಥಾಯಿ ಭಾವಗಳು ಉದ್ರೇಕಗೊಂಡರೆ ಮನಸ್ಸು ಕ್ಷುಬ್ಧವಾಗುವುದೇ ಹೊರತು ಆನಂದಿತವಾಗುವುದಿಲ್ಲ. ಆದರೆ ಕಲಾಪ್ರಪಂಚದ ಸ್ವಭಾವವೇ ಬೇರೆ. ಅಲ್ಲಿ ಯಾವ ಉದ್ದೇಶಸಾಧನೆಯ ಹವ್ಯಾಸವೂ ಇಲ್ಲವೇ ಇಲ್ಲ, ಲೌಕಿಕರೀತಿಯಲ್ಲಿ ಸ್ಥಾಯಿಭಾವಗಳು ಉದ್ರಿಕ್ತವಾಗುವ ಸಂಭವವೂ ಇಲ್ಲ. ಕವಿಪ್ರತಿಭೆಯ ಅನುಪಮ ಪ್ರಭಾವದಿಂದ ಲೌಕಿಕ ಕಾರಣಗಳಿಗೆಲ್ಲ ಒಂದು ಅನುಪಮ ಸೌಂದರ್ಯಚ್ಛಾಯೆಯು ಆವರಿಸಿಕೊಂಡು ಅವು ಅಲೌಕಿಕ ಸಾಮಗ್ರಿಗಳಾಗುತ್ತವೆ. ಈ ಕಾಲ್ಪನಿಕ ಹಾಗು ಅಸಾಧಾರಣ ಸಾಮಗ್ರಿಗಳಿಂದ ಸ್ಥಾಯಿಭಾವಗಳು ಲೌಕಿಕ ರೀತಿಯಲ್ಲಿ ಕ್ಷುಬ್ಧವಾಗದೆ ಅಲೌಕಿಕ ರೀತಿಯಲ್ಲಿ ಉದ್ರಿಕ್ತವಾಗುತ್ತವೆ. ಹೀಗೆ ಉದ್ರಿಕ್ತವಾದಾಗ ಆ ಅವಸ್ಥೆಗೇ ''ರಸ" ವೆಂಬ ಹೆಸರು ಬರುವುದು. ''ನಾನು", ''ನನ್ನದು", ಎಂಬ ಲೌಕಿಕ ಭಾವನೆಗಳಿಗೆ ಅಲ್ಲಿ ಎಡೆಯಿಲ್ಲ. ಆ ಅನುಭವದಲ್ಲಿ ಬೇರೆ ಯಾವ ವಿಧದ ಬುದ್ಧಿವಿಕಲ್ಪಗಳಿಗೂ ಅವಕಾಶವೇ ಇಲ್ಲ. ಕೇವಲ ಆಸ್ವಾದಮಯವಾದ ಆನಂದಘನಾವಸ್ಥೆಯೇ ಅದು. ಆ ಆನಂದವು ಕೂಡ ಲೌಕಿಕಾನಂದದ ಜಾತಿಗೆ ಸೇರತಕ್ಕದ್ದಲ್ಲ; ಸ್ವಾಯತನ ವಿಶ್ರಾಂತವಾದ ಆತ್ಮಾನಂದವೇ ಅದು. ಕಾವ್ಯತನ್ಮಯತೆಯನ್ನು ಪಡೆದವನಿಗೆ ಒಂದು ಅಲೌಕಿಕ ಸೌಖ್ಯವೇ. ಹೊರತು ಜೀವನಸದೃಶವಾದ ಸುಖಪ್ರತೀತಿ ಇರುವುದಿಲ್ಲ. ಹೀಗೆ ರಸಾನುಭವವು ಅಖಂಡವಾದುದರಿಂದ ಅದು ಎಂಟು ಅಥವಾ ಒಂಭತ್ತು ವಿಧಗಳೆಂದು ಹೇಳುವುದೂ ಸರಿಯಲ್ಲ. ಆ ಅಖಂಡಾನಂದವನ್ನು ತರುವ ಪ್ರಣಾಲಿಗಳು ಒಂಭತ್ತು ವಿಧವೆನ್ನಬಹುದು. ಆ ಪ್ರಣಾಲಿಗಳು ಕೂಡ ಲೌಕಿಕ ಚಿತ್ತಕ್ಷೋಭ ಕಾರಣಗಳಿಗಿಂತ ಭಿನ್ನವೆಂದು ತೋರಿರುವುದಕ್ಕಾಗಿಯೇ ಲೋಕದಲ್ಲಿ ರತಿಯೆನ್ನುವುದನ್ನು ಕಾವ್ಯದಲ್ಲಿ ಶೃಂಗಾರವೆಂದೂ ಲೋಕದಲ್ಲಿ ಶೋಕವೆನ್ನುವುದನ್ನು ಕಾವ್ಯದಲ್ಲಿ ಕರುಣವೆಂದೂ ಅಲೌಕಿಕವಾದ ಹೆಸರುಗಳಿಂದ ಕರೆಯುತ್ತೇವೆ ಲೋಕದಲ್ಲಿ ಚಿತ್ತವೃತ್ತಿಗಳು ಆಸ್ವಾದರಹಿತಗಳಾದವಿರುತ್ತವೆ; ಆದರೆ ಕಾವ್ಯದ ಪರಿಪಾಕದಿಂದ ಅವೇ ಆಸ್ವಾದ್ಯಮಾನವಾಗುತ್ತವೆ. ಹೀಗೆ ಆಸ್ವಾದ್ಯಮಾನವಾದ ಕಾವ್ಯದಲ್ಲಿ ಪರಿಣಮಿಸಿದ ಸ್ಥಾಯಿಭಾವಗಳೇ ಶೃಂಗಾರಾದಿ ರಸಗಳು. ಅಖಂಡವಾದ ಆನಂದಾನುಭವವು ''ರಸ".

ಹರಿಶ್ಚಂದ್ರನ ಕಥೆಯನ್ನು ಓದುವಾಗ ಅನೇಕರಿಗೆ ಕಣ್ಣೀರು ಬರುವದಲ್ಲಾ? ಎಂದರೆ ಅದನ್ನೂ ಶೋಕಾಶ್ರುವಲ್ಲ, ಆನಂದಾಶ್ರುವೆಂದೇ ಹೇಳಬೇಕು. ಹಾಗಾದರೆ ಶಕುಂತಲಾ ದುಷ್ಯಂತರ ಸಮಾಗಮವನ್ನು ನೋಡುವಾಗ ಆನಂದದಿಂದ ನಮಗೇಕೆ ಆಶ್ರುಗಳು ಬರುವದಿಲ್ಲ? ಹರಿಶ್ಚಂದ್ರಾದಿಗಳ ದುಃಖವನ್ನು ಕಂಡಾಗಲೇ ಏಕೆ ಬರಬೇಕು? ಎಂದು ಕೇಳಬಹುದು. ಮೇಲೆ ಹೇಳಿದ ರಸಪ್ರಕ್ರಿಯೆಯನ್ನು ಸರಿಯಾಗಿ ಅರ್ಥಮಾಡಿಕೊಂಡವರಿಗೆ ಈ ಪ್ರಶ್ನೆಯೇ ಹಾಸ್ಯಾಸ್ಪದವಾಗಿ ಕಾಣುವುದು. ಲೌಕಿಕವಾದ ದುಃಖದ ಕಣ್ಣೀರಿಗೂ ಲೌಕಿಕವಾದ ಸಂತೋಷದ ನಗೆಗೂ ಕಾವ್ಯಾನುಭವದ ರಸನಿಮಿಷಗಳಲ್ಲಿ ಸ್ಥಾನವೇ ಇಲ್ಲ. ಆ ನಿಮಿಷಗಳಲ್ಲಿ ಚಿತ್ತವು ದ್ರವವಾಗಬಹುದು ಅಶ್ರುಗಳನ್ನು ಕರೆಯಬಹುದು; ಇಲ್ಲವೆ ವಿಸ್ತಾರವಾಗಬಹುದು, ಆಶ್ಚರ್ಯದಲ್ಲಿ ಕಣ್ಣನ್ನು ಅರಳಿಸಬಹುದು. ಆದರೆ ಕಾಯಿಸಿದರೆ ಕರಗುವಂತೆ ಮನಸ್ಸು ದ್ರವವಾಗುವುದು; ಹಾಗೆಯೇ ವಿಸ್ತಾರವೂ ಆಗುವದು. ಇದು ಮನಸ್ಸಿನ ಸ್ವರೂಪ. [illegible] [illegible]

ಕಾವ್ಯಾನುಭವಕ್ಕೆ ಲೌಕಿಕತ್ವವನ್ನು [illegible] ಬಾರದು [illegible] [illegible] [illegible] [illegible] [illegible]

ಚಿತ್ತವೃತ್ತಿಯು ರಸದ [illegible] ಕಾಲದಲ್ಲಿ [illegible] ಇದು ಶೋಕಪ್ರಧಾನವಾಗಿರಲಿ [illegible] ಇಲ್ಲ. [illegible] ಸ್ನೇಹ, ಪ್ರೀತಿಯು [illegible] ಅನುಭವಸಿದ್ಧವಾಗಿದೆ. ಇದೆ [illegible] ಕರುಣರಸದ ಪ್ರತೀಕವೆನ್ನುವವರು [illegible] ವಾತ್ಸಲ್ಯವೇ ಮೊದಲಾದ ಇತರ ಭಾವ[illegible] ತನ್ಮಯತ್ವ ಕಾಲದಲ್ಲಿಯೂ ಕರುಣವಲ್ಲ[illegible] ವೆಂದು ಹೇಳಬಹುದು. ಕಣ್ಣೀರು? [illegible] ಭೂತಿಯು

''ಏಕೋ ರಸಃ ಕರುಣ
ಏವ ನಿಮಿತ್ತಭೇದಾತ್
ಭಿನ್ನಃ ಪೃಥಕ್ ಪೃಥಗಿವ
ಶ್ರಯತೇ ವಿವರ್ತಾ[illegible]
ಆವರ್ತಬುದ್ಬುದತರಂಗ
ಮಯಾನ್ ವಿಕಾರಾನ್
ಅಂಭೋ ಯಥಾ ಸಲಿಲಮೇವ
ಹಿ ತತ್ಸಮಸ್ತಮ್"

ಎಂದು ಹೇಳುವಾಗ ಈ ಅಭಿಪ್ರಾಯ[illegible] ಇರಬಹುದಲ್ಲವೆ?

ಚಾಮುನಾ ಬಾಲ್ಸ,
ಕುರಸ್ಸ,
ಬಾನ ಬಾಸ್ಸ,
ಮತ್ತು ಇತರ ಸರ್ವಪ್ರಕಾರ ನ್ಯಾಪಾರಿ ಧಾರಣೆಗಳ ಸಲುವಾಗಿ ಬರೆಯಿರಿ:–
ಪೀ. ರಘುನಾಥ ಆ್ಯಂಡ ಸನ್ಸ
೧೪೨೧, ಬಸವನಗಲ್ಲಿ, ಬೆಳಗಾವಿ
Sharatchandra, BGM

೧೯೬೯-೭೦ ರ ಭವಿಷ್ಯ

ನಿಮ್ಮ ಹೆಸರು ಮತ್ತು ವಿಳಾಸದೊಂದಿಗೆ ಯಾವದೇ ಹೂವಿನ ಹೆಸರಿನೊಂದಿಗೆ [illegible] ಕಾರ್ಡನ್ನು ಕಳಿಸಿರಿ. ನಾವು ರೂ. [illegible] (ಅಂಚೆವೆಚ್ಚ ಬೇರೆ) ವ್ಯವಹಾರದಲ್ಲಿಯ [illegible] ಲುಕ್ಸಾನ, ಬಡತಿ, ವರ್ಗಾವರ್ಗಿ, [illegible] ಲಗ್ನ, ಸುಖ ಸಮಾಧಾನ, ಮತ್ತು [illegible] ತೊಂದರೆಗಳು ಇವೇ ಮುಂತಾದ [illegible] ವಿಷಯಗಳ ಸಂಬಂಧಿ ಮುಂದಿನ ೧೨ ತಿಂಗಳುಗಳಲ್ಲಿಯ ವಿಸ್ತೃತ ಸಂಗತಿಯನ್ನು [illegible] ಸುತ್ತೇವೆ, ದುಷ್ಟ ಗ್ರಹಗಳ ಬಾಧೆಯಿಂದ ರಕ್ಷಣೆ ಹೊಂದಲು ಸಲಹೆಯನ್ನು ಕೊಡಲಾಗುವದು. ಒಮ್ಮೆ ಪರೀಕ್ಷಿಸಿ ನೋಡಿದರೆ [illegible] ಭವಿಷ್ಯ ಕಥನದ ಸತ್ಯತೆಯ [illegible] ವನು.

ಪಂಡಿತ ದೇವದತ್ತ ಶಾಸ್ತ್ರಿ,
ರಾಜ ಜೋತಿಷಿ, (ಕ. ಪೀ.)
ಕರ್ತಾರಪುರ (ಪೂ. ಪಂಜಾಬ)
Pt. Devdutt Shastri,
Raj Jotishi, Kartarpur (E. P[illegible]

ವಿನೂತನ ಆಯುರ್ವೇದ ಕಾರ್ಯಾಲಯ[illegible]
ಪೋಷಕ-ಔಷಧಿ-ಆಹಾರ
[illegible]
ರಸ-ರಕ್ತಾದಿಧಾತುಗಳನ್ನು ಪೋಷಿಸಿ, ಬುದ್ಧಿ, ಸ್ಮರಣ ಶಕ್ತಿಗಳನ್ನು ಬೆಳೆಸಿ, ಕಾರ್ಯ ಕ್ಷಮತೆ, ಉತ್ಸಾಹಗಳನ್ನು ಹೆಚ್ಚಿಸಿ ಶರೀರವನ್ನು ಪರಿಪುಷ್ಟವಾಗಿ ಮಾಡುವ ಉತ್ತಮ ಧಾತುಪೌಷ್ಟಿಕ ಔಷಧ.

# ನಿಯಂತ್ರಣಗಳನ್ನು ರದ್ದು ಮಾಡಲಾರೆವು

## ಮುಖ್ಯ ಮಂತ್ರಿಗಳ ಮಹತ್ವದ ಘೋಷಣೆ

### ಕೇಂದ್ರದ ವಿಷಯ ಪಟ್ಟಿಗಳ ಬಗ್ಗೆ ಘಟನಾಸಮಿತಿಯಲ್ಲಿ ಚರ್ಚೆ

## ಕೇಂದ್ರದ ವಿಷಯಗಳು

೨೫ ನೇ ತಾರೀಖಿನ ದಿವಸ ಘಟನಾಸಮಿತಿಯಲ್ಲಿ ಕೇಂದ್ರ ಸರಕಾರದ ಅಧಿಕಾರಕ್ಕೊಳಪಟ್ಟ ವಿಷಯಗಳ ಪಟ್ಟಿಯುಳ್ಳ ೭ ನೇ ಪರಿಶಿಷ್ಟದ ಮೇಲೆ ಚರ್ಚೆ ನಡೆಯಿತು. ಈ ವಿಷಯಪಟ್ಟಿಯಲ್ಲಿ ೯೧ ಕಲಮುಗಳಿದ್ದು ಅವುಗಳಲ್ಲಿ ಆರು ಕಲಮುಗಳ ಚರ್ಚೆ ನಡೆದು ಸ್ವೀಕೃತವಾದವು. ಹಿಂದುಸ್ತಾನದ ಸಂರಕ್ಷಣದ ಸಿದ್ಧತೆ, ಯುದ್ಧ ಕಾಲದಲ್ಲಿ ಯಶಸ್ವಿಯಾಗಿ ಯುದ್ಧ ನಡೆಸುವದು, ಯುದ್ಧಾನಂತರ ಸೈನ್ಯದ ವಿಸರ್ಜನೆ ಮಾಡುವದು ಈ ವಿಷಯಗಳುಳ್ಳ ಪರಿಶಿಷ್ಟದಲ್ಲಿಯ ೧ ನೇ ಕಲಮು ಸ್ವೀಕೃತವಾಯಿತು. ಹಿಂದುಸ್ತಾನದಲ್ಲಿ ಯಾವದೇ ವ್ಯಕ್ತಿಯು ಅದರ ಸಂರಕ್ಷಣೆ ವಿದೇಶ ವ್ಯವಹಾರ, ಅಂತರಿಕ ಶಾಂತಿಗೆ ಗಂಡಾಂತರವನ್ನೊದಗಿಸುವ ಕೃತಿ ಮಾಡುವದನ್ನು ಪ್ರತಿಬಂಧಿಸುವ ದೃಷ್ಟಿಯಿಂದ ಅವನನ್ನು ಸ್ಥಾನಬದ್ಧ ಮಾಡುವದು ಹೀಗೆ ಸ್ಥಾನಬದ್ಧರಾದವರ ಸಂಬಂಧದ ವಿಷಯ ಕೇಂದ್ರಕ್ಕೆ ಸೇರಿದೆ ಎಂಬ ಮೂರನೇ ಕಲಮು ಸ್ವೀಕೃತವಾಯಿತು. ಅದಕ್ಕಿಂತ ಮೊದಲು ೨ ನೇ ಕಲಮು ಸ್ವೀಕೃತವಾಗುವಾಗ ಡಾ. ಅಂಬೇಡಕರ ಮತ್ತು ನಾಜೀರುದ್ದೀನ ಇವರಲ್ಲಿ ಚಕಮಕಿ ನಡೆಯಿತು. ೨ ನೇ ಕಲಮಿನ ಉದ್ದೇಶವು, ಹಿಂದುಸ್ತಾನದ ಯಾವದೇ ಭಾಗದಲ್ಲಿ ಗುನ್ಹೆ ಮಾಡುವ ಒಳಸಂಚು ನಡೆದರೆ ಅದರ ಸುದ್ದಿ ತಿಳಿಯಲು ಸುದ್ದೀ ಕೇಂದ್ರಮಂಡಲವಿರತಕ್ಕದ್ದು. ಸೂಕ್ತ ಕ್ರಮ ಕೈಕೊಳ್ಳಲು ಪ್ರಾಂತೀಯ ಸರಕಾರಗಳಿಗೆ ಸಲಹೆ ಕೊಡಲು ಇಂಥ ಮಂಡಲದ ಅವಶ್ಯಕತೆಯಿದೆಯೆಂದು ಡಾ. ಅಂಬೇಡಕರರು ಸ್ಪಷ್ಟೀಕರಿಸಿದರು. ನಾಜೀರುದ್ದೀನರು ಈ ತಿದ್ದುಪಡಿ ವಿರೋಧಿಸಿ ಮಾತಾಡುವಾಗ ಅವರಿಬ್ಬರಲ್ಲಿ ವಾಗ್ಯುದ್ಧ ನಡೆಯಿತು. ಅನಂತರ ಉಳಿದ ತಿದ್ದುಪಡಿಗಳ ವಿಚಾರವಾಗಿ ಸಭೆ ಮರುದಿವಕ್ಕೆ ಮುಂಬರಿಯಿತು.

೩೦ ನೇ ತಾರೀಕಿನ ದಿವಸ ಈ ವಿಷಯದ ಚರ್ಚೆ ಮುಂದೆ ಸಾಗಿ ಒಂದೇ ಗಂಟೆಯಲ್ಲಿ ಹತ್ತು ಕಲಮುಗಳು ಸ್ವೀಕೃತವಾದವು. ದಂಡಿನ ಪ್ರದೇಶಗಳ ಕ್ಷೇತ್ರವನ್ನೂ ಅಲ್ಲಿರುವ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಕಾರ್ಯಕ್ಷೇತ್ರವನ್ನು ಅಲ್ಲಿಯ ಅಧಿಕಾರಿಗಳು ಅಧಿಕಾರ ಕ್ಷೇತ್ರವನ್ನು ಮತ್ತು ಘಟನೆಯನ್ನು ಗೊತ್ತುಪಡಿಸುವ ಮತ್ತು ಅಲ್ಲಿಯ ವಸತಿ ಸೌಕರ್ಯದ ವಿಷಯಕ್ಕೆ ಸಂಬಂಧಿಸಿದ ಕಲಮು ಸ್ವೀಕೃತವಾಯಿತು. ಅದೇ ರೀತಿ ಶಸ್ತ್ರಾಸ್ತ್ರಗಳು ಮದ್ದು ಗುಂಡುಗಳು ಅಣುಶಕ್ತಿ ಮತ್ತು ಅದರ ಉತ್ಪಾದನೆಗೆ ಬೇಕಾಗುವ ಖನಿಜ ಸಂಪತ್ತು ವಿದೇಶ ವ್ಯವಹಾರ ಈ ವಿಷಯಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ಮಾಡಲು ಹಿಂದುಸ್ತಾನದ ಹಿರಿಯೋಲಗಕ್ಕೆ ಅಧಿಕಾರವಿರಬೇಕೆಂಬ ಕಲಮು ಸ್ವೀಕೃತವಾಯಿತು. ವಿದೇಶಗಳ ಕ್ಷೇತ್ರ ಮರ್ಯಾದೆ, ವಿದೇಶಗಳೊಡನೆ ವ್ಯಾಪಾರ ವಾಣಿಜ್ಯ, ವಿದೇಶಿಸಾಲ, ನಾಗರಿಕತ್ವದ ಹಕ್ಕುಗಳು, ಪರಕೀಯರ ಪಾಸಪೋರ್ಟ ಮುಂತಾದವುಗಳಿಗೆ ಸಂಬಂಧಿಸಿದ ಕಲಮುಗಳು ವಿಶೇಷ ಚರ್ಚೆಯಿಲ್ಲದೆ ಸ್ವೀಕೃತವಾದವು. ಯುಕ್ತ ರಾಷ್ಟ್ರ ಸಂಘಕ್ಕೆ ಸಂಬಂಧಿಸಿದ ಕಲಮು ಸ್ವಲ್ಪ ಚರ್ಚೆಯ ನಂತರ ಸ್ವೀಕೃತವಾಯಿತು. ಅಂಚೆ, ತಂತಿ, ಟೆಲಿಫೋನು, ವಾಯರಲೆಸ್, ಆಕಾಶವಾಣಿ ಮುಂತಾದ ಸಂಪರ್ಕಗಳು ವಿಮಾನೋಡ್ಡಾಣ ವಿಮಾನ ನಿಲ್ದಾಣಗಳನ್ನು ಕಟ್ಟೋಣ, ವೈಮಾನಿಕ ಶಿಕ್ಷಣ ಮುಂತಾದ ಆಕಾಶಯಾನದ ವಿಷಯಗಳು ಪ್ರಯಾಣಿಕರನ್ನೂ ಸರಕುಗಳನ್ನೂ ರೇಲ್ವೆ ಜಲ ಮತ್ತು ವಾಯುಮಾರ್ಗಗಳಿಂದ ಸಾಗಿಸುವದನ್ನು ಕುರಿತು ಕಾಯದೆ ಮಾಡುವ ಅಧಿಕಾರ ಹಿರಿಯೋಲಗಕ್ಕೆ ಕೊಡಲಾಯಿತು. ರಾಷ್ಟ್ರದ ರಾಜಮಾರ್ಗಗಳ ಮೇಲಿನ ಅಧಿಕಾರವನ್ನೂ ಕೇಂದ್ರಕ್ಕೆ ಕೊಡಲಾಯಿತು. ಕೇಂದ್ರ ರೇಲ್ವೆಗಳು ಮತ್ತು ಚಿಕ್ಕ ರೇಲ್ವೆಗಳ ನಡುವೆ ಭೇದಭಾವವನ್ನು ತಿದ್ದಿ ಹಾಕುವ ಕಲಮು ಸ್ವೀಕೃತವಾಯಿತು. ಬನಾರಸ ವಿಶ್ವವಿದ್ಯಾಲಯ, ಅಲೀಗಡ ವಿಶ್ವವಿದ್ಯಾಲಯ ಮತ್ತು ದಿಲ್ಲಿ ವಿಶ್ವವಿದ್ಯಾಲಯಗಳು ಮತ್ತು ಹಿರಿಯೋಲಗವು ರಾಷ್ಟ್ರೀಯ ಮಹತ್ವದ್ದೆಂದು ಪರಿಗಣಿಸುವ, ಇತರ ಸಂಸ್ಥೆಗಳ ಬಗ್ಗೆ ಸಂಬಂಧಿಸಿದ ಕಾಯದೆ ಮಾಡುವ ಅಧಿಕಾರ ಹಿರಿಯೋಲಗಕ್ಕೆ ಕೊಡಲಾಯಿತು.

೩೧ ನೇ ತಾರೀಕಿನ ದಿನ ಮತ್ತೆ ೨೪ ವಿಷಯಗಳನ್ನು ಕೇಂದ್ರದ ವಿಷಯಗಳ ಪಟ್ಟಿಯಲ್ಲಿ ಸೇರಿಸಲು ಘಟನಾಸಮಿತಿಯು ಒಪ್ಪಿಗೆ ಕೊಟ್ಟಿತು. ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯವೆಂದು ಶಾಸನ ಸಭೆಯು ಕಾಯದೆ ಪಾಸು ಮಾಡಿ ಸಾರಿದ ಉದ್ಯಮೆಗಳನ್ನು ಕೇಂದ್ರ ಸರಕಾರವೇ ವಹಿಸಿಕೊಳ್ಳಬೇಕೆಂಬ ಮಹತ್ವದ ಅಧಿಕಾರವನ್ನೂ ಕೇಂದ್ರಕ್ಕೆ ಕೊಡಲಾಯಿತು. ಚಲಚ್ಚಿತ್ರಗಳಿಗೆ ಅಪ್ಪಣೆ ಕೊಡುವ ಅಧಿಕಾರವು ಕೇಂದ್ರ ಸರಕಾರಕ್ಕೆ ಸೇರಿದ್ದೆಂಬುದು ಇಂದು ಸ್ವೀಕೃತವಾದ ಕಲಮುಗಳಲ್ಲಿ ಮುಖ್ಯವಾದುದು. ಈ ವರೆಗೆ ಪ್ರಾಂತಗಳಿಗೂ ಈ ಅಧಿಕಾರವಿದ್ದಿತು.

## ವಿಶ್ವವಿದ್ಯಾಲಯ ಶಿಕ್ಷಣ

ವಿಶ್ವವಿದ್ಯಾಲಯ ಶಿಕ್ಷಣವನ್ನು ಪರಿಶೀಲಿಸಲು ನೇಮಿಸಲ್ಪಟ್ಟಿದ್ದ ರಾಧಾಕೃಷ್ಣನ್ನ ಸಮಿತಿಯವರು ಅತ್ಯಂತ ಮಹತ್ವದ ಮತ್ತು ಕ್ರಾಂತಿಕಾರಕ ಸೂಚನೆಗಳನ್ನು ತಮ್ಮ ವರದಿಯಲ್ಲಿ ಉಲ್ಲೇಖಿಸಿರುವರು. ವಿಶ್ವವಿದ್ಯಾಲಯ ಪರೀಕ್ಷೆಗಳನ್ನೇ ರದ್ದುಗೊಳಿಸಿ ವೈಷಯಿಕ ಜ್ಞಾನದ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ಸರಕಾರದ ನೋಕರರಿಗೆ ಪದವಿಗಳು ಅವಶ್ಯವೆಂದು ಪರಿಗಣಿಸಬಾರದು, ಎಂದು ಸಮಿತಿಯು ಸೂಚಿಸಿದೆ. ಉಚ್ಚ ಶಿಕ್ಷಣದಲ್ಲಿ ಪ್ರಾದೇಶಿಕ ಭಾಷೆಯು ಬೋಧಕ ಭಾಷೆಯಾಗಬೇಕು. ಆದರೆ ರಾಷ್ಟ್ರಭಾಷೆಯನ್ನು ಕೆಲವು ಅಥವಾ ಎಲ್ಲ ವಿಷಯಗಳಲ್ಲಿ ಉಪಯೋಗಿಸುವದಕ್ಕೆ ಅವಕಾಶವೂ ಇರಬೇಕೆಂದು ಸಮಿತಿಯು ಸೂಚಿಸಿದೆ. ಈ ವರದಿಯು ೬೦೦ ಪುಟಗಳಷ್ಟಿದ್ದು ೧೬೦ ಪುಟ ಪರಿಶಿಷ್ಟಗಳಿರುತ್ತವೆ. ಮಾತೃಭಾಷೆಯು ರಾಷ್ಟ್ರಭಾಷೆಯಾಗಿರದ ಪ್ರದೇಶಗಳಲ್ಲಿ ಮೊದಲನೆಯ ಫಾರ್ಮಿನಿಂದಲೆ ರಾಷ್ಟ್ರಭಾಷೆಯನ್ನು ಕಲಿಸಬೇಕು, ಮಾತೃಭಾಷೆ ಮತ್ತು ರಾಷ್ಟ್ರಭಾಷೆ ಒಂದೇ ಆಗಿದ್ದರೆ ವಿದ್ಯಾರ್ಥಿಗಳು ಒಂದು ಪ್ರಾಚೀನ ಅಥವಾ ಆಧುನಿಕ ಭಾಷೆಯನ್ನು ಅಭ್ಯಸಿಸಬೇಕು. ಹಿಂದಿಯು ಮಾತೃಭಾಷೆಯಾಗಿದ್ದರೆ ವಿದ್ಯಾರ್ಥಿಯು ಇನ್ನೊಂದು ದೇಶಭಾಷೆಯನ್ನು ಕಲಿಯಬೇಕು ಎಂದು ಸೂಚಿಸಲಾಗಿದೆ. ಇಂಗ್ಲಿಶನ್ನು ರದ್ದುಗೊಳಿಸಲು ಅವಸರ ಮಾಡಬಾರದು. ಇದರಿಂದ ಶಿಕ್ಷಣಮಟ್ಟವು ಕಡಿಮೆಯಾಗುವದೆಂದು ಸಮಿತಿಯ ಅಭಿಪ್ರಾಯ. ವಿಶ್ವವಿದ್ಯಾಲಯ ಸೇರಬಯಸುವ ವಿದ್ಯಾರ್ಥಿಗೆ ಮೂರನೆಯ ಫಾರ್ಮಿನಿಂದಲೆ ಇಂಗ್ಲಿಶನ್ನು ಕಲಿಸಬೇಕು. ಈರೀತಿಯಾಗಿ ವಿಶ್ವವಿದ್ಯಾಲಯ ಸೇರಬಯಸುವ ವಿದ್ಯಾರ್ಥಿಯು ಆರು ವರ್ಷ ಹಿಂದೀ ಮತ್ತು ಮೂರು ವರ್ಷ ಇಂಗ್ಲಿಷನ್ನು ಕಲಿತಂತಾಗುವದು. ಹಿಂದುಸ್ತಾನವು ಧರ್ಮಾತೀತ ರಾಷ್ಟ್ರವಾಗಿದ್ದು ಯಾವದೊಂದು ಧರ್ಮಕ್ಕೆ ಪ್ರೋತ್ಸಾಹನ ಕೊಡುವದು ಅದರ ಉದ್ದೇಶವಾಗಿರದಿದ್ದರೂ ಬುದ್ಧ, ಕ್ರಿಸ್ತ, ಮಹಮ್ಮದ, ಕಾನ್‌ಫುಸಸ್‌ರಂಥ ಮಹನೀಯರ ಜೀವನ ಚರಿತ್ರಗಳ ಅಭ್ಯಾಸವನ್ನು ನಿರ್ವಿಕಾರ ಮನಸ್ಸಿನಿಂದ ಮಾಡುವದಕ್ಕೆ ಸಂಸ್ಥೆಗಳನ್ನೇರ್ಪಡಿಸಬಹುದೆಂದು ಸಮಿತಿಯು ಸೂಚಿಸಿದೆ. ತಾತ್ವಿಕ ದೃಷ್ಟಿಯಿಂದ ಸರಕಾರಿ ಶಾಲೆಗಳಲ್ಲಿ ಸಹ ಧರ್ಮವನ್ನು ಕಲಿಸಬಹುದು ಪ್ರಾಥಮಿಕ ಮತ್ತು ಕಾಲೇಜ ಶಿಕ್ಷಣದಲ್ಲಿ ಸಹಶಿಕ್ಷಣವಿರಲಡ್ಡಿಯಿಲ್ಲ. ಆದರೆ ಮಾಧ್ಯಮಿಕ ಶಿಕ್ಷಣದಲ್ಲಿ ಮಾತ್ರ ಸಹಶಿಕ್ಷಣವಿರಕೂಡದೆಂದು ಸಮಿತಿಯ ಅಭಿಪ್ರಾಯ. ಹಿಂದುಸ್ತಾನದ ಅವಶ್ಯಕತೆಗನುಸಾರವಾಗಿ ವೃತ್ತಿಶಿಕ್ಷಣದ ಏರ್ಪಾಡು ಮಾಡಬೇಕು. ಒಕ್ಕಲತನದಲ್ಲಿ ಆಧುನಿಕ ಕ್ರಮಗಳು ಅನುಸರಿಸಲ್ಪಡಬೇಕು. ಪ್ರಜಾರಾಜ್ಯದ ಉತ್ತಮ ನಾಗರಿಕರನ್ನು ಸಿದ್ಧಪಡಿಸುವದಕ್ಕೆ ಅನುಕೂಲವಾಗುವ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣ ದೊರೆವಂತಾಗಬೇಕು. ಶಿಕ್ಷಕರ ಮಟ್ಟವನ್ನೇರಿಸುವದಕ್ಕೆ ಸಮಿತಿಯು ಹೆಚ್ಚು ಮಹತ್ವ ಕೊಟ್ಟಿದೆ. ಸರಕಾರವು ಕೊಡುಗೈಯಿಂದ ವಿದ್ಯಾರ್ಥಿವೇತನವನ್ನು ಕೊಡಬೇಕೆಂದು ಸಮಿತಿಯು ಸೂಚಿಸಿದೆ. ಈ ಸೂಚನೆಗಳನ್ನು ಕಾರ್ಯರೂಪದಲ್ಲಿ ತಂದುದಾದರೆ ಶಿಕ್ಷಣದಲ್ಲಿ ಮಹತ್ವದ ಕ್ರಾಂತಿಯಾಗುವದೆಂಬಲ್ಲಿ ಸಂದೇಹವಿಲ್ಲ.

## ಕಾಶ್ಮೀರ ಸಮಸ್ಯೆ ಬಗೆಹರಿಸಿರಿ

ಕಾಶ್ಮೀರ ಸಮಸ್ಯೆಯನ್ನು ಬೇಗನೆ ಬಗೆಹರಿಸಬೇಕೆಂದು ಅಮೇರಿಕೆಯ ಅಧ್ಯಕ್ಷ ಟ್ರೂಮನ್‌ರು ಹಿಂದುಸ್ತಾನ ಮತ್ತು ಪಾಕಿಸ್ತಾನ ಸರಕಾರಗಳಿಗೆ ಸೂಚಿಸಿದ್ದಾರೆಂದು ಅಮೇರಿಕೆಯ ವಿದೇಶಮಂತ್ರಿ ದೀನ ಅಚಿಸನ್ನರು ಸಾರಿರುವರು. ಯುಕ್ತರಾಷ್ಟ್ರ ಸಂಘದವರು ಸೂಚಿಸಿದ ಸೂಚನೆಗಳನ್ನು ಕಾರ್ಯರೂಪದಲ್ಲಿ ತಂದು, ಬಹುದಿನಗಳಿಂದ ನೆನಗುದಿಗೆ ಬಿದ್ದ ಈ ಪ್ರಶ್ನೆಯನ್ನು ಬಿಡಿಸಬೇಕೆಂದು ಟ್ರೂಮನರು ಸೂಚಿಸಿರುವರಂತೆ. ಯುಕ್ತರಾಷ್ಟ್ರ ಸಂಘವು ಇತ್ತೀಚೆ ಮಾಡಿದ ಕಾಶ್ಮೀರ ಸಮಸ್ಯೆ ಪರಿಹಾರದ ಸೂಚನೆಗಳು ಮಹತ್ವದ್ದಾಗಿದ್ದು ಭಾರತದ ಶಾಂತಿ ಭದ್ರತೆಗಳ ಬಗ್ಗೆ ವಿಶೇಷ ಆಸ್ಥೆವಹಿಸುವ ಅಮೇರಿಕೆ ಸರಕಾರದ ಪರವಾಗಿ ಟ್ರೂಮನ್‌ರು ಪಂಡಿತ ಜವಾಹರಲಾಲ ಮತ್ತು ಲಿಯಾಕತ ಅಲ್ಲಿಖಾನರಿಗೆ ಕೇಳಿಕೊಂಡಿರುವರೆಂದು ತಿಳಿಯುತ್ತದೆ. ಕಾಶ್ಮೀರ ಸಮಿತಿಯ ಸೂಚನೆಗಳಿಂತಿವೆ. ೧) ಪಾಕಿಸ್ತಾನವು ಜಮ್ಮು ಕಾಶ್ಮೀರಗಳಿಂದ ತನ್ನ ಸೈನ್ಯವನ್ನು ಹಿಂತೆಗೆದುಕೊಳ್ಳಬೇಕು. ೨) ಗುಡ್ಡಗಾಡುಜನರನ್ನು-ಪಾಕಿಸ್ತಾನದ ನಾಗರಿಕರನ್ನು (ಅವರು ಬಹುಕಾಲದಿಂದ ಕಾಶ್ಮೀರದಲ್ಲಿ ನೆಲಸಿದವರಾಗಿರದಿದ್ದರೆ) ಹಿಂದಕ್ಕೆ ಕರೆಸಿಕೊಳ್ಳಬೇಕು. (೩ ಜಮ್ಮು ಕಾಶ್ಮೀರದಲ್ಲಿಯ ಹಿಂದೀ ಸೇನೆಯ ಬಹುಭಾಗವನ್ನು ಹಿಂದುಸ್ತಾನ ಸರಕಾರವು ತಿರುಗಿ ಕರೆಯಿಸಿಕೊಳ್ಳಬೇಕು ಮತ್ತು ೪) ಆಜಾದ ಕಾಶ್ಮೀರ ಸೈನ್ಯದ ವಿಸರ್ಜನೆಯ ಬಗ್ಗೆ ಸಯುಕ್ತ ಸಭೆಯಲ್ಲಿ ಚರ್ಚಿಸಬೇಕೆಂದು ಹಿಂದುಸ್ತಾನ ಸರಕಾರ ಸೂಚಿಸಿತ್ತು ಆದರೆ ಉಭಯ ರಾಷ್ಟ್ರಗಳ ಸರಕಾರಗಳು ಈ ವಿಷಯ ಪಟ್ಟಿಯನ್ನು ಒಪ್ಪಲಿಲ್ಲಾದ್ದರಿಂದ ಸಂಯುಕ್ತ ಸಭೆಯನ್ನು ಸೇರಿಸಲು ಸಾಧ್ಯವಾಗಲಿಲ್ಲ ಎಂದೂ ಅಭಿಪ್ರಾಯಪಡಲಾಗಿದೆ. ಸಂಯುಕ್ತರಾಷ್ಟ್ರ ಸಂಘದವರು ಮೊದಲಿನಿಂದಲೆ ನಿಷ್ಪಕ್ಷಪಾತತನದಿಂದ ಈ ವಿಷಯವನ್ನು ಪರಾಮರ್ಶಿಸಿ ಪಾಕಿಸ್ತಾನ ಸರಕಾರಕ್ಕೆ ಸವಲತ್ತು ತೋರಿಸುವ ಧೋರಣವನ್ನು ವಹಿಸಿರದಿದ್ದರೆ ಕಾಶ್ಮೀರ ಸಮಸ್ಯೆ ಎಂದೋ ಬಗೆಹರಿದುಬಿಡುತಿದ್ದಿತು. ಆದರೆ ಅಂತರ್‌ರಾಷ್ಟ್ರೀಯ ಸಂಸ್ಥೆಯೇ ಪಕ್ಷಪಾತ ಧೋರಣವನ್ನು ವಹಿಸುತಿರುವದರಿಂದ ಇಂಥ ಪ್ರಶ್ನೆಗಳು ನೆನಗುದಿಗೆ ಬೀಳುವವು. ಈ ಅಂತರ್‌ರಾಷ್ಟ್ರೀಯ ಸಂಸ್ಥೆಯ ಸೂತ್ರಗಳನ್ನು ಅಲ್ಲಾಡಿಸುತಿರುವ ಟ್ರೂಮನ್‌ರಂಥವರು ಈ ದೃಷ್ಟಿಯಿಂದ ಈ ಪ್ರಶ್ನೆಗಳ ವಿಚಾರಮಾಡಿ ಪರಿಸ್ಥಿತಿ ಹದಗೆಡುವ ಮೊದಲೆ ಸೂಕ್ತ ಕ್ರಮಗಳನ್ನು ಕೈಕೊಳ್ಳುವದು ಅವಶ್ಯವಾಗಿದೆ.

## ನಿಯಂತ್ರಣಗಳು ರದ್ದಾಗವು

ದೇಶದಲ್ಲಿ ಆಹಾರ ಧಾನ್ಯಗಳ ಕೊರತೆ ಇರುವ ವರೆಗೆ ಆಹಾರ ಧಾನ್ಯಗಳ ಮೇಲೆ ಹೇರಿದ ನಿಯಂತ್ರಣವನ್ನು ಹಿಂದುಸ್ತಾನ ಸರಕಾರದವರು ರದ್ದುಗೊಳಿಸಲಾರರು ಎಂದು ಹಿಂದುಸ್ತಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಯುಕ್ತ ಪ್ರಾಂತ ಕಾಂಗ್ರೆಸ ಸಮಿತಿಯ ಸಭೆಯಲ್ಲಿ ಆಹಾರ ಧಾನ್ಯ ಉತ್ಪತ್ತಿಯನ್ನು ಹೆಚ್ಚಿಸುವ ಕುರಿತು ಮನಮುಟ್ಟಿ ಎಲ್ಲರೂ ಪ್ರಯತ್ನಿಸಬೇಕೆಂಬ ಗೊತ್ತುವಳಿಯನ್ನು ಸಮರ್ಥಿಸಿ ಭಾಷಣ ಮಾಡುತ್ತ ಹೇಳಿದರು ಆಹಾರ ಧಾನ್ಯಗಳ ಮೇಲೆ ಹಾಕಿದ ನಿಯಂತ್ರಣವನ್ನು ಹಿಂದೆ ತೆಗೆದು ಹಾಕಿ ಮಾಡಿದ ತಪ್ಪನ್ನು ಸರಕಾರವು ಮತ್ತೆ ಮಾಡಲಾರದು. ನಿಯಂತ್ರಣವನ್ನು ತೆಗೆದುದರ ಫಲವಾಗಿ ಬೆಲೆಗಳು ಮುತ್ತಷ್ಟು ಏರಿದವು. ಕೆಲವೊಂದು ವರ್ಗದ ಜನರು ಕೋಟ್ಯಂತರ ರೂಪಾಯಿಗಳ ಲಾಭ ಹೊಡೆದರು ಆದರೆ ನಿಯಂತ್ರಣವನ್ನು ತೆಗೆದದ್ದರಿಂದ ಜನತೆ ವಿಶೇಷ ಕಷ್ಟಕ್ಕೊಳಗಾಗಬೇಕಾಯಿತು ಎಂದೂ ಜವಾಹರಲಾಲರು ಹೇಳಿದರು. ವಿದೇಶಗಳಿಂದ ವಿಪರೀತ ಹಣಕೊಟ್ಟು ಆಹಾರ ಧಾನ್ಯಗಳನ್ನು ತರಿಸುತ್ತ ಹೋದರೆ ನಮ್ಮ ದೇಶವು ಆರ್ಥಿಕ ದಿವಾಳಿ ತೆಗೆಯಲು ಬಹಳ ಕಾಲ ಹಿಡಿಯಲಿಕ್ಕಿಲ್ಲ ಯಾವದೇ ರಾಷ್ಟ್ರವು ಆಹಾರ ವಿಷಯದಲ್ಲಿ ಸ್ವಾವಲಂಬಿಯಾಗಿರದಿದ್ದರೆ ಅದು ಪರದೇಶಗಳನ್ನು ಅವಲಂಬಿಸಿದ ರಾಷ್ಟ್ರವೇ ಆಗುವದು. ಯುದ್ಧವು ಪ್ರಾರಂಭವಾದರೆ ವಿದೇಶಗಳಿಂದ ಆಹಾರ ಧಾನ್ಯಗಳನ್ನು ತರಿಸುವದು ಅಶಕ್ಯವಾಗಬಹುದು. ಇದನ್ನು ನೆನೆದು ಆಹಾರೋತ್ಪತ್ತಿಯನ್ನು ಹೆಚ್ಚಿಸಬೇಕು. ಔದ್ಯೋಗೀಕರಣದಲ್ಲಿ ಅತ್ಯಂತ ಪ್ರಗತಿಯನ್ನು ಸಾಧಿಸಿದ ಬ್ರಿಟನ್‌ದ ಆಹಾರೋತ್ಪತ್ತಿಯು ನೂರಕ್ಕೆ ೨೫ ರಷ್ಟು ಹೆಚ್ಚಿದೆ ಎಂದು ಪಂಡಿತರು ನುಡಿದರು. ಜೀವನಾವಶ್ಯಕ ಪದಾರ್ಥಗಳ ಪೂರೈಕೆಯ ವಿಷಯದಲ್ಲಿ ಕಾರಖಾನೆದಾರರ ಹಾಗು ವ್ಯಾಪಾರಸ್ಥರ ಧೋರಣವು ಪರಿಸ್ಥಿತಿಯನ್ನು ಸುಧಾರಿಸಲು ಸಹಾಯಕವಾಗುವಂತಹದಾಗಿಲ್ಲ. ನಮ್ಮ ದೇಶದಲ್ಲಿ ಗೋದಿ ಮತ್ತು ಅಕ್ಕಿಯ ಕೊರತೆಯು ನೂರಕ್ಕೆ ೧೦ ರಷ್ಟು ಮಾತ್ರ ಇದೆ. ನಾವು ಆಹಾರ ಧಾನ್ಯಗಳ ಉತ್ಪತ್ತಿಯನ್ನು ಈಗಿದ್ದುದಕ್ಕಿಂತ ನೂರಕ್ಕೆ ೧೫ ರಷ್ಟು ಹೆಚ್ಚಿಸಿದರೂ ಆಹಾರದಲ್ಲಿ ಸ್ವಾವಲಂಬಿಗಳಾಗಬಲ್ಲೆವು. ನಮ್ಮ ಹೊಲಗಳಲ್ಲಿ ಹೆಚ್ಚು ಆಹಾರ ಪದಾರ್ಥ ಬೆಳೆವಂತೆ ನಾವು ನೋಡಿಕೊಳ್ಳಬೇಕಾಗಿದೆ. ಕಳೆದ ಮಹಾಯುದ್ಧದಲ್ಲಿ ಜನತೆಯ ಸಹಕಾರವಿಲ್ಲದಲೆ ವಿದೇಶೀಯ ಆಡಳಿತೆಗಾರರು ತಮಗೆ ಬೇಕಾದದ್ದನ್ನೆಲ್ಲ ಮಾಡಿದರು. ಈಗಂತೂ ಜನತಾ ಸರಕಾರವಿರುವದರಿಂದ ಆಹಾರ ಯುದ್ಧರಂಗದಲ್ಲಿ ನಾವು ಜಯಶಾಲಿಗಳಾಗದಿರುವದಕ್ಕೆ ಕಾರಣವೇ ಇಲ್ಲ ಎಂದು ಮುಖ್ಯ ಮಂತ್ರಿಗಳು ಅಭಿಪ್ರಾಯಪಟ್ಟಿರುವರು.

## ಸಾಮ್ಯವಾದಿಗಳ ಧೋರಣೆ

ಅಂತರ್‌ರಾಷ್ಟ್ರೀಯ ಕ್ಷೇತ್ರದಲ್ಲಿ ಹಿಂದುಸ್ತಾನವು ಶಾಂತಿಪ್ರಿಯ ರಾಷ್ಟ್ರಗಳನ್ನು ಕೂಡಿಸಿಕೊಂಡು ಮೂರನೆಯ ಒಂದು ಗುಂಪನ್ನು ರಚಿಸಬೇಕು. ಈ ಗುಂಪಿನಲ್ಲಿ ಏಶಿಯದ ಬಹುಸಂಖ್ಯ ರಾಷ್ಟ್ರಗಳು ಅಫ್ರಿಕೆಯಲ್ಲಿ ಹತ್ತಿಕ್ಕಲ್ಪಟ್ಟ ಜನಾಂಗಗಳ ಹಾಗು ಯುರೋಪ ಮತ್ತು ಅಮೇರಿಕೆಯಲ್ಲಿಯ ಪ್ರಜಾಪ್ರಭುತ್ವವಾದೀ ಸಾಮ್ಯವಾದಿಗಳು ಇವರೆಲ್ಲ ಬಹುಶಃ ಈ ಗುಂಪಿನಲ್ಲಿ ಕೂಡಬಹುದೆಂದು ಜಯಪ್ರಕಾಶರು ಮುಂಬಯಿಯಲ್ಲಿಯ ಒಂದು ಭಾಷಣದಲ್ಲಿ ಹೇಳಿದರು. ಅವರು ಮುಂಬರುವ ಚುನಾವಣೆಗಳಲ್ಲಿ ತಮ್ಮ ಪಕ್ಷವು ಯಾವ ಕಾರ್ಯಕ್ರಮವನ್ನಿಡುವದೆಂಬುದನ್ನು ವಿವರಿಸುತ್ತ ಸುದ್ದಿಗಾರರನ್ನುದ್ದೇಶಿಸಿ ಹೀಗೆ ಹೇಳಿದರು—ಹಿಂದುಸ್ತಾನವು ಯಾವ ಗುಂಪಿಗೂ ಸೇರದೆ ಉಳಿಯುವದೆಂದು ಮುಖ್ಯ ಮಂತ್ರಿಗಳು ಸಾರಿದ್ದಕ್ಕೆ ನಮ್ಮ ಪಕ್ಷವು ಹೃತ್ಪೂರ್ವಕವಾಗಿ ಬೆಂಬಲಕೊಡುವದು ಆದರೆ ಇದನ್ನು ಕಾರ್ಯರೂಪಕ್ಕಿಳಿಸುವಲ್ಲಿ ಪಂಡಿತ ಜವಾಹರಲಾಲರು ತಪ್ಪುತಿರುವರೆಂದು ಅವರೊಡನೆ ನಮ್ಮ ಮತಭೇದವಿದೆ. ರಾಷ್ಟ್ರದ ಅಂತರಿಕ ವಿಷಯದಲ್ಲಿ ನಮ್ಮ ಪಕ್ಷವು ಜಮೀನದಾರಿಯನ್ನು ಘಟನಾತ್ಮಕ ಮಾರ್ಗದಿಂದ ನಿರ್ಮೂಲಗೊಳಿಸಿ ಪ್ರತ್ಯಕ್ಷ ಒಕ್ಕಲತನದಲ್ಲಿ ತೊಡಗಿದವರಿಗೆ ಭೂಮಿಯನ್ನು ಹಂಚುವದು, ಒಬ್ಬನಿಗೆ ಇಂತಿಷ್ಟು ಎಕರೆಗಿಂತ ಹೆಚ್ಚು ಭೂಮಿಯಿರಬಾರದೆಂದು ನಿರ್ಧರಿಸಿ ಹೆಚ್ಚಿಗೆ ಇದ್ದವರ ಭೂಮಿಯನ್ನು ಕಸಿದುಕೊಂಡು ಭೂಮಿಯಿಲ್ಲದವರಿಗೆ ಅವನ್ನು ಕೊಡುವದು, ಎಲ್ಲ ಬ್ಯಾಂಕು, ವಿಮಾಕಂಪನಿಗಳನ್ನು ಹಾಗು ಕಣಿ ಮೊದಲ್ಗೊಂಡು ಎಲ್ಲ ದೊಡ್ಡ ಕಾರಖಾನೆಗಳನ್ನು ರಾಷ್ಟ್ರೀಕರಣಮಾಡುವದು, ಇದನ್ನೆಲ್ಲ ಘಟನಾತ್ಮಕವಾಗಿ ಮಾಡುವದು ಜಮೀನದಾರಿಯನ್ನು ನಿರ್ಮೂಲ ಮಾಡುವಾಗ ಅವರಿಗೆ ಕೆಲವೊಂದು ಪರಿಹಾರ ಕೊಡುವದು ನಮ್ಮ ಪಕ್ಷದ ಧೋರಣವಾಗಿದೆಯೆಂದೂ ಅವರು ಹೇಳಿದರು. ಎಡ ಪಕ್ಷಗಳ ವಿಸರ್ಜನ ಮಾಡಿ ಎಲ್ಲ ಪಕ್ಷಗಳು ನಮ್ಮ ಪಕ್ಷದಲ್ಲಿ ಲೀನವಾಗಲಿ ಇಲ್ಲವೆ ಬೇರೆ ಒಂದು ಹೊಸ ಹೆಸರಿನ ಪಕ್ಷವನ್ನೆ ಸ್ಥಾಪಿಸಲಿ ಎಂದು ಎಡ ಪಕ್ಷಗಳ ಸಂಘಟನೆಯ ಪ್ರಯತ್ನದ ಸಂಬಂಧದಲ್ಲಿ ನುಡಿದರು. ಆದರೆ ಉಳಿದ ಎಡ ಪಕ್ಷಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಸಂಯುಕ್ತವಾಗಿ ಕಾರ್ಯ ಮಾಡಬೇಕೆಂದು ಹಟ ಹಿಡಿದವು ಆದರಿಂದ ಎಡ ಪಕ್ಷಗಳ ಸಂಘಟನೆಯ ಮಾತುಕತೆ ಮುರಿದವು ಎಂದೂ ಜಯಪ್ರಕಾಶರು ಹೇಳಿದರು. ಮುಂಬರುವ ಚುನಾವಣೆಕಣದಲ್ಲಿ ಇಳಿಯಲು ಜಯಪ್ರಕಾಶರು ಈಗಲೆ ರಣಭೇರಿಯೂದಿರುವರು. ಸಾಮ್ಯವಾದಿಗಳ ಈ ಕನಸು ನನಸಾಗಬೇಕಾದರೆ ದೇಶದ ಪರಿಸ್ಥಿತಿಯು ಅನುಕೂಲವಾಗಬೇಕು. ಸದ್ಯದ ಪ್ರತಿಕೂಲ ಪರಿಸ್ಥಿತಿಯಲ್ಲಿ ಜಯಪ್ರಕಾಶರಂಥವರು ಏನನ್ನೂ ಸಾಧಿಸಲಾರರೆಂಬುದು ಸ್ಪಷ್ಟವಾಗಿದೆ.

# ಕಾಶ್ಮೀರದ ಅಮರನಾಥನ ಗುಹೆ

## ವರ್ಷದಲ್ಲೊಂದೇ ದಿನ ಪೂಜೆಗೊಳ್ಳುವ ಸ್ವಯಂಭುಲಿಂಗ



ಅಮರನಾಥ ಗವಿಯ ಬಾಗಿಲಲ್ಲಿ ಹಿಂದೀ ನಾಗರಿಕ ಮತ್ತು ಸೈನಿಕ ಯಾತ್ರಿಕರು

ಭಾರತದ ಉತ್ತರ ಸೀಮಾಂತರದಲ್ಲಿರುವ ಕಾಶ್ಮೀರ ಹಲವಿಧದಿಂದ ಭಾರತೀಯ ಸಂಸ್ಕೃತಿಯ ಮತ್ತು ಧರ್ಮದ ತೊಟ್ಟಿಲಾಗಿದೆ. ಇಂದು ಅಲ್ಲಿಯ ಜನಸಂಖ್ಯೆಯಲ್ಲಿ ಬಹುಜನರು ಇಸ್ಲಾಮ ಧರ್ಮಕ್ಕೆ ಸೇರಿಕೊಂಡಿದ್ದರೂ ಅನೇಕ ಹಿಂದೂ ಯಾತ್ರಾಸ್ಥಳಗಳು ಅಲ್ಲಿ ಇನ್ನೂ ಇರುವುದರಿಂದ ಅಖಿಲ ಭರತಖಂಡದಿಂದ ಆಸ್ತಿಕರು ವರ್ಷವರ್ಷವೂ ಅಲ್ಲಿಗೆ ಆಕರ್ಷಿಸಲ್ಪಡುತ್ತಾರೆ. ಇಂಥ ಪವಿತ್ರ ಸ್ಥಳಗಳಲ್ಲಿ ಅಮರನಾಥ ಗುಹೆಯೂ ಒಂದು. ಸಾವಿರಗಟ್ಟಲೆ ವರ್ಷಗಳಿಂದ ಪ್ರತಿ ಶ್ರಾವಣ ಪೂರ್ಣಿಮೆಯ ದಿನ ಆ ಗುಹೆಯನ್ನು ಸಂದರ್ಶಿಸಿ ತುಷಾರಲಿಂಗಗಳನ್ನು ಪೂಜಿಸಿ ಭಕ್ತರು ಕೃತಾರ್ಥರಾಗುತ್ತಾರೆ. ೧೯೪೭ ರಲ್ಲಿ ವಿಪರೀತ ಮಳೆಯಿದ್ದ ಕಾರಣ ಈ ಯಾತ್ರಾಸ್ಥಾನವನ್ನು ತಲಪುವದು ಯಾತ್ರಿಕರಿಗೆ ಸಾಧ್ಯವಾಗಿರಲಿಲ್ಲ. ೧೯೪೮ ರಲ್ಲಿ ಅದರ ಆಸಪಾಸಿನಲ್ಲಿ ಹೋರಾಟ ನಡೆಯುತ್ತಿದ್ದುದರಿಂದ ಜಾತ್ರೆ ಜರಗಲಿಲ್ಲ. ಈ ವರ್ಷ ಹೆಚ್ಚು ಕಡಿಮೆ ಶಾಂತ ಪರಿಸ್ಥಿತಿಯಲ್ಲಿ ಕಾಶ್ಮೀರ ಯುವರಾಜ ಕರಣಸಿಂಹರು ಅಮರನಾಥ ದೇವನ ಛಾರಿ (ಧ್ವಜ) ಯನ್ನು ಶ್ರೀನಗರದ ದಶನಾಮಿ ಅಖಾರದಲ್ಲಿ ಪೂಜಿಸಿ ಸಂಭ್ರಮದಿಂದ ಗುಹಾಯಾತ್ರೆಗೆ ಬೀಳುಗೊಟ್ಟರು. ಕಾಶ್ಮೀರದಲ್ಲಿ ಬೀಡುಬಿಟ್ಟಿರುವ ಹಿಂದೀ ಸೈನಿಕರನೇಕರನ್ನೊಳಗೊಂಡು ನೂರಾರು ಯಾತ್ರಿಕರು ದುರ್ಗಮವಾದ ಅಮರನಾಥಕ್ಕೆ ಯಾತ್ರೆ ಹೋದರು.

ಶ್ರೀನಗರದಿಂದ ೮೦ ಮೈಲಿಗೂ ಮಿಕ್ಕಿ ದೂರವಿರುವ ಈ ಪರ್ವತಪ್ರದೇಶದ ಹಿಮಾಚ್ಛಾದಿತ ಮಾರ್ಗವನ್ನೆಲ್ಲ ಅನೇಕ ಭಕ್ತರು ಬರಿಗಾಲಲ್ಲೆ ನಡೆದು ಹೋಗುವರು. ಅನುಕೂಲವಂತರು ಶ್ರೀನಗರದಿಂದ ೫೯ ಮೈಲಲ್ಲಿರುವ ಪಹಲಗಾವದ ವರೆಗೆ ಮೋಟಾರಿನಲ್ಲಿ ಹೋಗಿ ಮುಂದೆ ತಮ್ಮ ಯೋಗ್ಯತಾನುಸಾರವಾಗಿ ಪಲ್ಲಕಿಯಲ್ಲೋ ದಂಡಿಗೆಯಲ್ಲೋ ಕುದುರೆಯ ಮೇಲೋ ಹೋಗುವುದುಂಟು.

ಪಹಲಗಾಂವದಿಂದ ಚಂದನವಾರಿಯ ವರೆಗಿನ ಅರಣ್ಯಪಥ ಏರುದಾರಿಯಾಗಿದ್ದರೂ ನಡೆಯಲು ಅಷ್ಟೇನೂ ಕಷ್ಟವಲ್ಲ. ಆದರೆ ಅದರಿಂದಾಚೆಗೆ ಶಿವಾಬಲ ಪರ್ವತಾರೋಹಣವನ್ನು ಮುಗಿಸಬೇಕಾದರೆ ಥಗೆ ಹತ್ತಿ ಹೋಗಿರುತ್ತದೆ. ಪರ್ವತವನ್ನು ಹತ್ತಿ ಸುತ್ತಲೂ ನೋಡಿದರೆ ಆಗ ಅಡವಿಗಳು ಮಾಯವಾಗಿ, ಕೇವಲ ವಿಸ್ತಾರವಾದ ಹುಲ್ಲುಗಾವಲುಗಳೂ ಅವುಗಳ ನಡುನಡುವೆ ಲವಂಗವೇ ಮೊದಲಾದ ನಾನಾ ಸುಗಂಧ ಕುಸುಮಗಳ ಪೊದೆ ಬಳ್ಳಿಗಳೂ ಮನಸ್ಸಿಗೆ ಆಹ್ಲಾದಕರವಾಗುವವು. ಇದಕ್ಕೂ ಮುಂದೆ ಹೋದರೆ ದಾರಿಯಿಂದ ಬಲಗಡೆಗೆ ಲಿಡಾರ ನದಿಯ ಉಗಮಸ್ಥಾನವೂ ೫೦೦ ಅಡಿ ತಗ್ಗಿನಲ್ಲಿ ಮರೆಯುವ ಶಿಶಿರನಗವೂ ಮಂಜಿನೊಡನೆ ಕಣ್ಣು ಚ್ಯಾಲೆಯಾಡುತ್ತಿರುವ ೧೭೦೦೦ ಅಡಿ ಎತ್ತರದ ಕೋಹೆನಹಾರ ಹಿಮಪರ್ವತವೂ ಕಾಣಸಿಗುತ್ತವೆ. ಲಿಡಾರ ನದಿ ಉಗಮವಾಗುವುದು ಒಂದು ಸುಂದರ ಸರೋವರದಿಂದ. ಅದರ ಶೀತಲಜಲದಲ್ಲಿ ಯಾತ್ರಿಕರು ಮುಳುಗಿ ಪಾವನರಾಗುವರು. ಇದು ಚಂದನವಾರಿಯಿಂದ ಏಳು ಮೈಲಾಗುತ್ತದೆ. ಅದರ ಸಮೀಪದಲ್ಲಿಯೆ ಇರುವ ವಾವಜಾನದಲ್ಲಿ ಅಂದಿಗೆ ವಿಶ್ರಮಿಸಿ ಮರುದಿನ ಯಾತ್ರೆಯನ್ನು ಮುಂದುವರಿಸುವದು ಸಂಪ್ರದಾಯ.

ಯಾತ್ರಿಕರ ಸಾಲು ಮೈಲುಗಟ್ಟಲೆಯಷ್ಟು ಉದ್ದವಾದ ಮೆರವಣಿಗೆಯಾಗಿರುತ್ತದೆ. ಅದಕ್ಕೆ ಮಹಾಂತನೇ ಮುಂದಾಳು. ಅಮರನಾಥನ ಧ್ವಜಸಹಿತವಾಗಿ ಅಲ್ಲಿಂದ ಈ ಮೆರವಣಿಗೆ ಮಹಾಗುಣಪರ್ವತದ ಹಿಮಾಚ್ಛಾದಿತ ಶಿಖರಗಳನ್ನು ದಾಟಿ ಏಳು ಮೈಲು ದೂರದಲ್ಲಿರುವ ಪಂಚತರಣಿಯನ್ನು ಮುಟ್ಟುವದು. ಹೆಸರೇ ಸೂಚಿಸುವಂತೆ ಪಂಚತರಣಿಯೆಂಬದು ಐದು ಪುಟ್ಟ ನದಿಗಳ ಸಂಗಮ. ಅಲ್ಲಿ ಆ ಚಳಿಯಲ್ಲೂ ಯಾತ್ರಿಕರು ಮೀಯಬೇಕು. ಒಂದು ನದಿಯಿಂದ ಇನ್ನೊಂದಕ್ಕೆ ಒದ್ದೆ ಬಟ್ಟೆಯಲ್ಲೇ ಹೋಗಿ ಮಿಂದು ಬರಬೇಕು.

ಅಲ್ಲಿಂದ ಮುಂದೆ ಅಮರನಾಥನ ಗುಹೆ ಇರುವುದು ೪ ಮೈಲು ಮಾತ್ರ. ಅದು ಇನ್ನಷ್ಟು ಏರು ದಾರಿ. ಹಲವು ಹಿಮರಾಶಿಗಳನ್ನು ದಾಟಿ ಪರ್ವತವನ್ನು ಸುತ್ತುವರಿದು ಹೋಗಬೇಕು.

ದಾರಿಯಲ್ಲಿ ತಪ್ಪಲಲ್ಲಿ ಬೆಳೆಯುವ ಗಿಡಪೊದೆಗಳಿಂದ ನಾನಾ ಪುಷ್ಪಗಳನ್ನು ಕೊಯ್ದು ಅಮರನಾಥನಿಗೆ ಅರ್ಪಿಸಲು ಯಾತ್ರಿಕರು ಸಂಗಡ ಒಯ್ಯುವರು. ಗುಹೆಯ ಹೊರಗೆ ಅಮರಾವತಿ ನದಿ ಜುಳುಜುಳಿಂದು ಹರಿಯುತ್ತದೆ. ಅಲ್ಲಿ ಸ್ನಾನ ಮಾಡಿ ನದೀತಲದ ಮೃತ್ತಿಕೆಯನ್ನು ಮೈಗೆಲ್ಲ ಲೇಪಿಸಿಕೊಂಡು ಶಿವನಾಮವನ್ನು ಘೋಷಿಸುತ್ತ ಅಮರನಾಥನ ಗುಹೆಯನ್ನು ಪ್ರವೇಶಿಸುತ್ತಾರೆ.

ಅಮರನಾಥನ ಗುಹೆ ನಿಜವಾಗಿ ಅಗಾಧವಾದುದು. ಏಕಕಾಲದಲ್ಲಿ ನೂರಾರು ಯಾತ್ರಿಕರು ಪ್ರವೇಶಿಸಬಲ್ಲಷ್ಟು ವಿಸ್ತಾರವಾಗಿದೆ. ಅದರ ಆಗ್ನೇಯ ಮೂಲೆಯಲ್ಲಿ ತಾನೇ ಉದ್ಭವಿಸಿದ (ಸ್ವಯಂಭು) ಮಂಜಿನ ಶಿವಲಿಂಗವಿದೆ. ಈ ತುಷಾರ ಲಿಂಗ ಚಂದ್ರನ ವೃದ್ಧಿ ಕ್ಷಯಗಳೊಡನೆ ತಾನೂ ವೃದ್ಧಿ ಕ್ಷಯ ಹೊಂದುವುದಂತೆ. ಈ ಅದ್ಭುತವನ್ನು ಕಂಡು ಯಾತ್ರಿಕರು ಮುಗ್ಧರಾಗುತ್ತಾರೆ. ಅವರು ತಾವು ತಂದ ಪುಷ್ಪಾದಿಗಳನ್ನು ಈ ತುಷಾರಲಿಂಗದ ಮುಂದೆ ಸಮರ್ಪಿಸುತ್ತಾರೆ. ಅದೇ ಗುಹೆಯಲ್ಲಿರುವ ಪಾರ್ವತಿ ಮತ್ತು ಗಣೇಶನ ಸ್ವಯಂಭು ಲಿಂಗಗಳನ್ನೂ ಭಕ್ತರು ಆರಾಧಿಸುತ್ತಾರೆ.

ಇತ್ತ ಅದೇ ಹೊತ್ತಿಗೆ ಹೊರಗಿನಿಂದ ಒಂದು ದೊಡ್ಡ ಪಟ್ಟಣವೇ ಸೃಷ್ಟಿಯಾಗಿರುತ್ತದೆ. ನೂರಾರು ಬಣ್ಣಬಣ್ಣದ ಡೇರೆಗಳು ತಲೆಯೆತ್ತಿರುತ್ತವೆ. ನಡುವೆ ಹೆದ್ದಾರಿ. ಅದರ ಅತ್ತಿತ್ತ ಅಂಗಡಿಗಳು.

ಸಂಜೆಯ ಹೊತ್ತಿಗೆ ಗಂಭೀರವಾದ ಶಂಖಧ್ವನಿ, ಶಿವಸ್ತುತಿಯ ಉಚ್ಚಗಾನ ಸುತ್ತಣ ಪರ್ವತಗಳಲ್ಲಿ ಪ್ರತಿಧ್ವನಿಸುತ್ತವೆ. ಅದೊಂದು ಭಕ್ತಿಪೂರಿತವಾದ ಗಂಭೀರ ವಾತಾವರಣ. ಸಾವಿರಾರು ದೀಪಗಳು, ಒಲೆಯ ಉರಿಗಳು, ಪಂಜುಗಳು, ಸಾಧು ಬೈರಾಗಿಗಳ ಅಗ್ಗಿಟಿಕೆಗಳು ಪರ್ವತದಾಚೆಯಿಂದಲುದಿಸುವ ಚಂದ್ರನ ಪ್ರಕಾಶವನ್ನು ಅಣಕಿಸುತ್ತವೆ. ವರ್ಷವೆಲ್ಲ ನಿರ್ಜನವಾಗಿರುವ ಅಮರನಾಥನ ಸುತ್ತುಮುತ್ತ ಒಂದು ದಿನದ ಮಟ್ಟಿಗೆ ಮನುಷ್ಯರ ಕಲಕಲವೆದ್ದು ಪ್ರತಿಧ್ವನಿಸುವದೊಂದು ವೈಚಿತ್ರ್ಯವೇ ಸರಿ.

ಈ "ಏಕದಿನಕಾ" ನಗರ ಸಹಸಾ ಉದ್ಭವಿಸಿದಂತೆ ಮರುದಿನ ಮುಂಜಾನೆ ಸಹಸಾ ಮಾಯವಾಗಿರುತ್ತದೆ. ಮತ್ತೆ ಅಮರನಾಥ ತನ್ನ ಗಹನ ಗುಹೆಯೊಳಗೆ ತನ್ನ ಪತ್ನೀ ಪುತ್ರರೊಡನೆ ಅನಂತ ಸರಸ ಸಲ್ಲಾಪದಲ್ಲಿ ಆಸಕ್ತನಾಗಲು ಸ್ವತಂತ್ರ.

ಅಮರನಾಥನ ದರ್ಶನಕ್ಕೆ ಬಂದ ಯಾತ್ರಿಕರು ಮರಳುವಾಗ ಪತಿಯಾರಾ ತಲಾವದ ತಡಿಯಿಂದ ಇಳಿದು ಹೋಗುವುದು ಹಿಂದಿನ ರೂಢಿಯಾಗಿತ್ತು. ಆದರೆ ಅದು ಗಂಡಾಂತರದ ಮಾರ್ಗವಾಗಿದ್ದು ವರ್ಷವರ್ಷವೂ ಅನೇಕರು ಅಲ್ಲಿ ಪ್ರಾಣ ಕಳೆದುಕೊಳ್ಳುತಿದ್ದುದರಿಂದ ಕಾಶ್ಮೀರ ಸರಕಾರ ಅದನ್ನು ಈಚೆಗೆ ಕೆಲ ದಶಕಗಳಿಂದ ಪ್ರತಿಬಂಧಿಸಿದೆ.

"ಪತಿಯಾರಾ ತಲಾವ್" ಎಂದರೆ ಮೃತ್ಯು ಸರೋವರವೆಂದರ್ಥ. ಈ ಬಗ್ಗೆ ಒಂದು ದತಿಹ್ಯವುಂಟು. ಅನೇಕ ವರ್ಷಗಳ ಹಿಂದೆ ಈ ಸರೋವರದ ತಡಿಯಲ್ಲಿ ಯಾತ್ರೆ ಹೊರಟ ಯಾತ್ರಿಕರು ಶಂಕರನ ಸ್ತೋತ್ರಗಳನ್ನು ಉಚ್ಚ ಸ್ವರದಲ್ಲಿ ಹಾಡುತ್ತ ಹೋಗುತ್ತಿದ್ದಾಗ್ಗೆ ಅದರಿಂದುಂಟಾದ ಕಂಪನದಿಂದಲೋ ಏನೋ ಹಿಮ ಮಳೆ ಸುರಿಯತೊಡಗಿತಂತೆ. ಪರಿಣಾಮವಾಗಿ


[illegible]

ಪಂಚತರಣಿಯಿಂದ ೫ ಮೈಲು ದೂರದಲ್ಲಿ [illegible] ದರೆ ಪಾದ ಅದರ ಮೂಲವನ್ನು ಕಾಣಬಹುದು. ಅದೊಂದು ಹಿಮಶಿಲೆಯ ಮೂಲ ಗುಹೆಯಿಂದ ಹೊರಬರುತ್ತ [illegible] ಭಾಗಗಳಾಗಿ ಒಡೆದು ಕೆಳಗಿಳಿಯುತ್ತದೆ. ಹಿಮದ ಗಡ್ಡೆಗಳನ್ನೇರಿ ಆ ಗುಹೆಯನ್ನು ಪ್ರವೇಶಿಸುವುದೇನೋ ಸಾಧ್ಯ. ಆದರೆ ಮೇಲಿಂದ ಆಗಾಗ್ಗೆ ಹಿಮದ ದೊಡ್ಡ ದೊಡ್ಡ ಶಿಲೆಗಳು ಕೆಳಗುರುಳುತ್ತಿರುವುದರಿಂದ ಅದು ಜೀವದ ಹರಕೆಯಲ್ಲದವರಿಗೆ [illegible] ಸುವ ಕೆಲಸ. ಗುಹೆಯೊಳಗಿಂದ ಧೋಗರೆಯುತ್ತ ಹೊರಹೊಮ್ಮುವ ಪ್ರವಾಹದೊಡನೆ ಒಮ್ಮೊಮ್ಮೆ ಮೇಲಿನ ಹಿಮಶಿಲೆಯ ತುಣುಕುಗಳು ಉದುರಿ ಧೋದಸ್ತರವಾಗುವದುಂಟು.

ಆದರೆ ಈ ನದೀ ಮೂಲದಲ್ಲಿ ಸಂಧ್ಯಾಕಾಲದ ದೃಶ್ಯ ಅತ್ಯಂತ ಹೃದಯಹಾರಿಯಾಗಿದೆ. ಮುಳುಗುವ ಸೂರ್ಯನ ಕಿರಣಗಳು ಗುಗ್ಗುಳಿಸುವ ನೀರಿನ ತುಂತುರಗಳಿಂದ ಸಂಭಿನ್ನವಾಗಿ ನೂರಾರು ಕಾಮನಬಿಲ್ಲುಗಳಾಗಿ ಪರಿವರ್ತನೆ ಹೊಂದಿ ಇಡಿ ಪ್ರದೇಶವನ್ನೇ ರತ್ನಖಚಿತವಾಗಿ ಮಾಡಿಬಿಡುತ್ತವೆ. ಇದೇನು ತಪಸ್ವಿ ಶಿವನ ತುಷಾರಕಾಂತಿಗೆ ಮುಗ್ಧಳಾಗಿ ನಿಂತು ನೋಡುತ್ತಿರುವ ಮದುವಣಗಿತ್ತಿ ಪಾರ್ವತಿಯೋ ಎನಿಸಿಬಿಡುತ್ತದೆ.



ಜಂಟ್ಸ್ ಸೆಂಟರ ಸೆಕಂಡ ವಾಚೆಸ್ ರೂ. ೧೬

ಸ್ವಿಸ್ ಮೇಡ, ಲಿವ್ಹರ ಜ್ಯುಎಲ್ಸ ಫಿಟಿಂಗ್ ಮಧ್ಯೆ ಕೆಂಪು ಸೆಕಂಡ ಉಳ್ಳುದು ನಿಖರ ತಾಳಿಕೆಯದು ಸರಿ ಕಾಲ ಸೂಚಕ ಗ್ಯಾರಂಟೀ ೫ ವರ್ಷ.



The Paragon Wath Company
Po. Box No. 11419,
CALCUTTA. 6 (K.

ಇನ್ನು ೧೫ ದಿನ ಮಾತ್ರ ದೊರೆಯುತ್ತವೆ



ಎಲ್ಲ ವಾಚುಗಳು ಶ್ರೇಷ್ಠ, ಸ್ವಿಸ್ ಮೇಡ, ಲಿವ್ಹರ ಮೆಕ್ಯಾನಿಝಂ, ಗಟ್ಟಿ ತಾಳಿಕೆಯುಳ್ಳ ಮತ್ತು ಸರಿ ಕಾಲಮಾಪಕ. ಐದು ವರ್ಷ ಗ್ಯಾರಂಟಿ

ರೌಂಡ ಫ್ಲ್ಯಾಟ ಕೇಸ, ಆಕಾರ 10½"

[illegible]

ರೆಕ್ಟ್ಯಾಂಗ್ಯುಲರ ಅಥವಾ ಟೊನೊ (ಚಿತ್ರದಂತೆ)

[illegible]

STANDARD WATCH CO.
Po Box No. 11419, Calcutta-6 (K.

## ವಿಚಾರ ದ್ವಂದ್ವ

# ಲಂಚದ ಹೊಣೆ

“ಲಂಚದ ಹೊಣೆ”ಯನ್ನು ಕುರಿತು ಶ್ರೀಮತಿ ಗಾಂಜೇಕರರೂ ಶ್ರೀ ಉಪೇಂದ್ರ ನಾಯಕರೂ ಬರೆದ ಲೇಖನಗಳನ್ನೋದಿದರೆ ಅವರು ಪ್ರತ್ಯಕ್ಷ ಪರಿಸ್ಥಿತಿಯನ್ನು ಪರೀಕ್ಷಿಸದೆ ಕೇವಲ ಗಾಳಿಯೊಡನೆ ಗುದ್ದಾಡುವಂತೆ ನನಗೆ ಅನಿಸಿತು. ಸರಕಾರಿ ನೌಕರರು ಕುಚ್ಛಾಳಿಗಳ ಸಂತತಿಯೆಂದು ಶ್ರೀಮತಿಯವರು ಹೇಳುವಾಗ ಅವರನ್ನು ಹೇಳುತ್ತಾರಲ್ಲದೆ ವಸ್ತುಸ್ಥಿತಿ [illegible] ಅವರಿಗೆ ಪ್ರತ್ಯಕ್ಷಕ್ಕೆ ಇರುವ ಅಂತರವೇ ನಮ್ಮ ಸಮಸ್ಯೆಯ ಮೂಲ. ಅವರು ಕುಚ್ಛಾಳಿಗಳ ಸಂತತಿಯಾಗಿರಬೇಕು [illegible], ಅವರೆ ಅಗಿಲ್ಲ. ಎಷ್ಟೆಂದರೂ ಅವರಲ್ಲಿ [illegible] ಆಗಿಲ್ಲ. ಇದರಿಂದಾಗುವ [illegible] ರಾಷ್ಟ್ರಕ್ಕೆ ಅಘಾತ ಜನರಿಗೆ. ಅದರಿಂದ ಅವನ್ನು ಪರಿಹರಿಸಬೇಕಾದವರೂ ಜನರೇ ಎಂದು ನನ್ನ ಅಭಿಪ್ರಾಯ. ಯಾರೂ [illegible] ಕಡಿಯುವವ [illegible]? ಅವರನ್ನು ಹಿಡಿಯಲು ಯಾರು ಪ್ರಯತ್ನಿಸಬೇಕು? ಪೋಲೀಸರೆಂದು [illegible] ಉತ್ತರ ಕೊಡುವಿರೆಂದು ನನಗೆ ಗೊತ್ತು. ಆದರೆ ನಿಮ್ಮ ಮನೆಯಲ್ಲಾದ ಕಳವಿನ ಸಮಾಚಾರವನ್ನು ಅವರಿಗೆ ಮುಟ್ಟಿಸಿ, ಕಳ್ಳನ ಚಹರೆಯೇ ಮೊದಲಾದ ವಿವರಗಳನ್ನೊಪ್ಪಿಸಿದರೆ ಮಾತ್ರ ಅವನನ್ನು ಹಿಡಿಯುವದು ಪೋಲೀಸರಿಗೆ ಸಾಧ್ಯ. ಏಕೆ ಕಳ್ಳರು ಕದಿಯುವರೆಂದು [illegible] ಯಾರಾದರೂ ನಗರೆ? ಲಂಚ [illegible] ಇದೇ ಮಾತು ಸರಿಹೋಗುತ್ತದೆ. ಲಂಚವನ್ನು ನಿರ್ಮೂಲ ಮಾಡುವಲ್ಲಿ ಜನರು [illegible] ಮಾಡಬೇಕು. ಕಳ್ಳನ ಮೇಲೆ [illegible] ಕೊಟ್ಟರೆ ನಾಳೆ ಅವನ ಕಡೆಯವರು [illegible] ಭಯದಿಂದ ದೂರು ಕೊಡುವ[illegible] ನೀವು ಹೇಗೆ ತಪ್ಪಿಸುವುದಿಲ್ಲವೋ [illegible] ಲಂಚಗುಳಿ ಅಧಿಕಾರಿಯ ಮೇಲೆ [illegible] ಕೊಡಲಿಕ್ಕಾಗಲಿ ನ್ಯಾಯಸ್ಥಾನದಲ್ಲಿ [illegible] ವಿರುದ್ಧ ಸಾಕ್ಷ್ಯ ಹೇಳಲಿಕ್ಕಾಗಲಿ ಹಿಂಜರಿಯಬಾರದು. ಜನರು ಇದಕ್ಕೆ ಸಿದ್ಧರಿಲ್ಲದೆ [illegible] ಲಂಚನಿರ್ಮೂಲನ ಸುಲಭವಾಗಿಲ್ಲ. ನಮ್ಮದು ರಾಜಸತ್ತೆಯಲ್ಲ, ಪ್ರಜಾಸತ್ತೆ; ರಾಜಸತ್ತೆಯಲ್ಲಿ ಕೂಡ ಪೂರು, ಸಾಕ್ಷಿ, [illegible] ಇಲ್ಲದೆ ಏಕಾಂತದ ಸರಕಾರಿ ನೌಕರರ ದುರ್ವರ್ತನೆಯನ್ನು ದಂಡಿಸುವದು ಸಾಧ್ಯವಿಲ್ಲ. ಪ್ರಜಾಸತ್ತೆಯಲ್ಲಂತೂ ಸಾಧ್ಯವೇ [illegible]. ನಿಮ್ಮಿಂದ ಲಂಚ ಕೇಳುವವನನ್ನು [illegible], ನೆರೆಮನೆಯಲ್ಲಿ ಇಂಥ ವ್ಯವಹಾರ [illegible] ನಡೆಯುತ್ತಿದ್ದರೆ ಅದನ್ನು ತಕ್ಕ [illegible] ಗಮನಕ್ಕೆ ತರುವುದು ನಾಗರಿಕ ಕರ್ತವ್ಯ. ಎಲ್ಲ ನಮ್ಮ ಸರಕಾರವೇ ಮಾಡುವುದು ಸಾಧ್ಯವಿಲ್ಲ. ಅಕ್ಬರ [illegible] ಬಿಡದ ಪ್ರಜಾಗಣದ ಉತ್ಕರ್ಷ ಅಸಾಧ್ಯ. ರಾಮರಾಜ್ಯದ ಉದಾಹರಣೆ ಹೇಳುವದು. ಆದರೆ ಸಾವಿರಗಟ್ಟಲೆ ವರ್ಷದಿಂದ [illegible] ರೂ ರಾಮನು ಒಬ್ಬನೇ ಇದ್ದ. [illegible] ನಮ್ಮನ್ನಾಳಲು ರಾಮರನ್ನೇ [illegible] ಪಾದಿಸುವುದು ಹೇಗೆ? ಪ್ರತಿಯೊಬ್ಬನೂ [illegible] ನಾಗಬೇಕು. ಅದೊಂದೇ ಉಪಾಯ.

### ಲಂಚದ ಮನೋವೃತ್ತಿ

ಲಂಚದ ಪ್ರಶ್ನೆಯನ್ನು ರಾಗದ್ವೇಷಗಳಿಲ್ಲದೆ [illegible] ಪರಿಶೀಲಿಸಬೇಕಾಗಿದೆ. ಲಂಚ ನಮ್ಮ [illegible] ವಿಸ್ತಾರವಾಗಿ ಹಬ್ಬಿರಲು ನಮ್ಮ [illegible] ಸಾಮಾನ್ಯರ ಮನೋವೃತ್ತಿಯಲ್ಲಿ” ರೂಢ[illegible] ಭಾವನೆಗಳೇ ಕಾರಣವೆಂದು ನನಗೆ [illegible]. ಒಪ್ಪಿ ಕಳ್ಳಸ, ಸುಳ್ಳಸ, ಕೊಲೆ [illegible] ಅಥವಾ ವ್ಯಭಿಚಾರಿಣಿಯು ವಿಷಯ [illegible] ಸಮಾಜದ ಅಂತರಂಗ ಹೇಗೆ [illegible] ಹಾಗೆ ಲಂಚಗುಳಿಯ ವಿಷ[illegible] ಸಿಟ್ಟಿಗೆದ್ದು ಕೊಳ್ಳುವದಿಲ್ಲ. ಅಂಥ [illegible] ನ್ನು ಸಮಾಜ ಒಂದು ಮೂಕ [illegible] ಇಂದ ಎದುರಿಸುತ್ತದೆ. ಆದರೆ [illegible] ಸಮಾಜದಲ್ಲಿ ಕೀಳೆಂದು ತುಚ್ಛೀ[illegible] ಸುವುದಿಲ್ಲ. ಲಂಚ ಕೊಟ್ಟು ಕೆಲಸ [illegible] ಕೊಳ್ಳುವುದೂ ಲಂಚ ತೆಗೆದುಕೊಂಡು [illegible] ದಾನ ಮಾಡುವುದೂ ಅನುಗ್ರಹ [illegible] ಮುತ್ತು ಧನಸಂಗ್ರಹ [illegible] ದ್ದಲ್ಲದಿದ್ದರೂ ನ್ಯಾಯವಾದ [illegible] ಜನರ ಪಾಲಿಗೆಯಲ್ಲಿ [illegible] ಅಂತರಂಗದಲ್ಲಿ ಬೇರು ಬಿಟ್ಟು ಗ್ರಹಿ[illegible] ಬಿಟ್ಟಿದೆ. ಸಾಮಾಜಿಕ ಕಾರ್ಯಕರ್ತರು [illegible] ಭಾವನೆಯ ಮೇಲೆ ಯುದ್ಧ ಸಾರಬೇಕು.

ಅಗಲೇ ಲಂಚದ ಆಧಾರಸ್ತಂಭ ಶಿಥಿಲವಾದೀತು. ಅನೇಕ ಶತಕಗಳಿಂದ, ಬ್ರಿಟಿಶರಿಗಿಂತಲೂ ಮೊದಲೇ ಎಷ್ಟಬಹುದು ಈ ರೂಢಿಯಿದ್ದಂತೆ ನನಗೆ ತೋರುತ್ತದೆ. ನಮ್ಮ ಸರಕಾರಿ ಅಧಿಕಾರಿಗಳ ಹಳೆಗಾಲದ ಸಂಬಳದ ಲೆಕ್ಕ ನೋಡಿರಿ. ಎರಡು ರೂಪಾಯಿಗಳಷ್ಟು ಕಡಿಮೆ ಪ್ರಮಾಣದ ಸಂಬಳವಿದ್ದರೂ ನಮಗೆ ಗೋಚರಕ್ಕೆ ಬರುತ್ತದೆ. ಸರಕಾರದ ಕೆಲಸ ಮಾಡುವ ಅತನಿಗೆ ಜನರಿಂದ “ಮರ್ಯಾದೆ”ಗಳು ದೊರೆಯುತ್ತಿರುತ್ತವೆಯೆಂಬುದನ್ನು ಗೃಹೀತವಾಗಿಟ್ಟುಕೊಳ್ಳಲಾಗುತ್ತಿತ್ತೆಂದಲ್ಲದೆ ಇದಕ್ಕೆ ಬೇರಾವ ಅರ್ಥವಿದೆ? ಅಂದಿನ “ಮರ್ಯಾದೆ”ಯು ಅಥವಾ “ಕಾಣಿಕೆ”ಗಳ ಮನೋವೃತ್ತಿಯೇ ಉಳಿದು ಹೋಗಿ ಇಂದು ಸಾಕಷ್ಟು ಸಂಬಳ ಸಿಗುವ ಅಧಿಕಾರಿಗಳೂ ಅವನ್ನು ಅಪೇಕ್ಷಿಸುತ್ತಾರೆ, ಜನರೂ ಅದೇ ಭಾವದಿಂದ ಕೊಡುತ್ತಾರೆ.

ಲಂಚದ ಹಿಂದಿರುವ ಮನೋವೃತ್ತಿಯನ್ನು ವಿಶ್ಲೇಷಿಸಿದರೆ ಅದು ಅಯೋಗ್ಯ “ಸ್ಪರ್ಧೆ”ಯ ಫಲವೆಂದು ತಿಳಿಯುವುದು. ಮೋಟಾರು ಅಥವಾ ರೇಲ್ವೆ ಟಿಕೀಟುಗಳನ್ನು ಕೊಳ್ಳಲು ನೀವು ಕಿಡಿಕಿಯ ಮುಂದೆ ಸಾಲು ಹಿಡಿದು ನಿಂತಿರುತ್ತೀರಿ. ಆಗ ಒಬ್ಬ ಗಡಿಬಿಡಿ ಭಾಗವತರು” ಅವಸರದಿಂದ ಓಡಿ ಬರುತ್ತಾರೆ. ಅವರು ನಿಮ್ಮೆಲ್ಲರಿಗಿಂತ ಮುಂದೆ ನುಗ್ಗಿ ನುಸುಳಿ ಮೊದಲೇ ಬಂದು ನಿಂತವರಿಗಿಂತ ಮೊದಲೇ ಟಿಕೀಟುಕೊಳ್ಳಲು ಹೆಣಗಾಡುತ್ತಾರೆ. ನಿಮ್ಮಲ್ಲಿ ಕೆಲವರಾದರೂ ನಿಮ್ಮ ಹಕ್ಕಿನ ಬಗ್ಗೆ ಜಾಗೃತರಾಗಿದ್ದಲ್ಲಿ ನೀವು ಅವರನ್ನು ತಡೆದು ದೂಡಿ ಹಿಂದೆ ಬಂದು ಸಾಲಲ್ಲಿ ನಿಲ್ಲುವಂತೆ ಮಾಡುತ್ತೀರಿ. ಆದರೂ ಆ ಮಹಾಶಯರು ಪ್ರಯತ್ನ ಬಿಡುವದಿಲ್ಲ. ನಿಮ್ಮಲ್ಲಿ ಯಾರಾದರೂ ಒಬ್ಬರು ತಮ್ಮ ಗುರುತಿನವರು ಇದ್ದರೆ ಅವರ ಕೈಯಲ್ಲಿ ಹಣ ತುರುಕಿಸಿ “ಮಹಾಶಯರು ನನಗೊಂದು ಟಿಕೀಟು ಕೊಂಡು ಬಿಡಪ್ಪಾ” ಎನ್ನುವರು. ಅಲ್ಲದಿದ್ದರೆ ಅಜಿ ಬಾಗಿಲಲ್ಲಿ ಹಣಕಿ ಕಾರಕೂನರಿಗೆ ಎರಡಾಣೆದಕ್ಷಿಣೆ ಕೊಡುತ್ತಾರೆ. ಅದಕ್ಕೂ ಉಳಿದವರು ಅಡ್ಡಿ ಮಾಡಿದರೆ ಅವರು ವಿಧಿಯಿಲ್ಲದೆ ಸಾಲಿನ ತುದಿಯಲ್ಲಿ ತಪಿಸುತ್ತ ಬಂದು ನಿಲ್ಲುತ್ತಾರೆ. ಲಂಚ ಕೊಡುವವರಲ್ಲಿ ಅಧಿಕಾಂಶ ಜನರು ಇಂಥ ಗಡಿಬಿಡಿ ಭಾಗವತರು. ಅವರಿಗೆ ಉಳಿದವರಿಗಿಂತ ಮೊದಲು, ಅನ್ಯಾಯವಾಗಿ, ತಮ್ಮ ಕೆಲಸ ಸಾಧಿಸಿಕೊಳ್ಳುವುದು ಬೇಕಾಗಿರುತ್ತದೆ. ಸಾಲು ಹಿಡಿದ ಜನರು ಪ್ರತಿಭಟಿಸಿದರೆ ಮಾತ್ರ ಅವರನ್ನು ತಡೆಯಬಹುದು. ಆದರೆ ಅನೇಕ ವೇಳೆ ಸಾಲು ನಿಂತ ಜನರು ಕುರಿಗಳಂತೆ ಈ ದೌಡನ್ನು ಸಹಿಸಿಕೊಂಡು ಸುಮ್ಮನಿರುತ್ತಾರೆ. ಈ ಪ್ರವೃತ್ತಿ ಹೋಗಬೇಕು.

### ಜಾತೀಯತೆ

ಲಂಚದ ಪ್ರಾಚುರ್ಯ ಕಡಿಮೆಯಾಗದಿರಲು ನಮ್ಮಲ್ಲಿ ಹಬ್ಬಿರುವ ಜಾತೀಯತೆಯೂ ಒಂದು ಕಾರಣವೆಂದು ವಿಷಾದದಿಂದ ಹೇಳಬೇಕಾಗಿದೆ. ಲಂಚಗುಳಿತನಕ್ಕಾಗಿ ಯಾರಾದರೂ ಸಿಕ್ಕರೆ ಅವನ ಜಾತಿಯ ಪ್ರತಿಷ್ಠಿತರು ಅವನನ್ನುಳಿಸಿಕೊಳ್ಳಲು, ಪೋಲೀಸರನ್ನಾಗಲಿ ದೂರುಗಾರರನ್ನಾಗಲಿ ಬಾಯಿಮುಚ್ಚಿಸಲು, ಸಾಮ–ದಾನ ಭೇದ-ದಂಡೋಪಾಯಗಳನ್ನು ಪಯೋಗಿಸುವುದುಂಟು. ಒಂದು ಇದಿ ಸಮಾಜದ ಒತ್ತಾಯವನ್ನು ಕಡೆಗಣಿಸಿ ನಿಲ್ಲಲು ಸಾಮಾನ್ಯರಿಗೆ ದಿಟ್ಟತನ ಸಾಲದು. ಯಾವ ಜಾತಿಯವನಾದರೂ ಸಮಾಜದ್ರೋಹಿ ಸಮಾಜದ್ರೋಹಿಯೆ ಎಂದು ಬಗೆಯತಕ್ಕದ್ದು.

ಶ್ರೀ ನಾಯಕರು ಸರಕಾರಿ ನೌಕರರನ್ನು ಸಮರ್ಥಿಸಿಕೊಳ್ಳಲು ಮುಂದೆ ಮಾಡಿದ ವಾದಗಳನ್ನು ಯಾರೂ ಒಪ್ಪಲಾರರು. ಜುಲಾಪಿಯಲ್ಲದೆ ಬೇರಾವುದೂ ಲಂಚ ತೆಗೆದುಕೊಳ್ಳಲು— ಅದೂ ಉಚ್ಚ ಅಧಿಕಾರಿಗಳಲ್ಲಿ— ಕಾರಣವಾಗಲಾರದು. ಆದರೆ ಅವರು ಕೆಟ್ಟವರಾದರೆ ಶ್ರೀಮತಿ ರಾಘಾಬಾಯಿಯವರಂತೆ ಸರಕಾರ ಹಾಳಾಗಿ ಹೋಗುವದೆಂದು ಶಪಿಸುವದು ತಪ್ಪು. ಒಂದು ಸರಕಾರ ಹಾಳಾಗಿ ಇನ್ನೊಂದು ತಲೆಯೆತ್ತಿದರೂ ಜನತೆ ತಮ್ಮ ಜಾಗೃತರಾದಲ್ಲದೆ ಸ್ಥಿತಿಗತಿ ಬದಲಿಸಿ ಸುಧಿಕ್ಷ ನ್ಯಾಹಿತವಾಗದೆಂದು ಈಗಾಗಲೆ ಕುಂಬಯಾತನೆಯೊಡನೆ ನಾವು ಕಲಿತಿದ್ದರೂ ಅದನ್ನು ಶ್ರೀಮತಿಯವರು ಅಲಕ್ಷಿಸಿದ್ದಾರೆ. “ಕುರಿಗಳ ಸಮಾಜವನ್ನು ಆಳಲು ಕಾಲಾಂತರದಲ್ಲಿ ತೋಳಗಳು ಹುಟ್ಟಿಯೇ ಹುಟ್ಟುವವೆಂದು” ಹೇಳಿದವನು ಹುಚ್ಚನಲ್ಲ.

### ಸರಕಾರದ ಹೊಣೆ

ಹೀಗೆ ಲಂಚವೆಂಬುದು ಸಮಾಜದ್ರೋಹವಾದುದರಿಂದ ಅದರ ವಿರುದ್ಧ ಸಮಾಜದ ಸಾಮೂಹಿಕ ಅತ್ಮಸಾಕ್ಷಿಯನ್ನು ಜಾಗರಿಸುವುದೇ ಲಂಚಕ್ಕೆ ಫಲಕಾರಿಯಾದ ಮದ್ದಾದರೂ ಚುನಾವಣೆಯಿಂದ ಆರಿಸಿ ಹೋದ ಸದಸ್ಯರ ಮತ್ತು ಮಂತ್ರಿಗಳ ಹೊಣೆ ಇದರಲ್ಲಿ ಮಹತ್ತರವಾಗಿದೆಯೆಂದು ಒಪ್ಪಿಕೊಳ್ಳಲೇ ಬೇಕು. ಅವರು ಪಾಮರ ಜನತೆಯನುದ್ಧರಿಸುವ ಪಣ ತೊಟ್ಟು ಹೋದವರು. ಅವರಲ್ಲಿ ಅನೇಕರು ನಿಜವಾಗಿ ಶ್ರಿಕರಣಗಳಿಂದ ಪ್ರಾಮಾಣಿಕರೂ ಅಹುದು. ಆದರೆ ಲಂಚಗುಳಿತನವನ್ನು ಮುರಿಯುವಲ್ಲಿ ಅವರ ಸಾಹಸ ಅವರ ಮೂಲ ವಾಗ್ದಾನಕ್ಕೆ ಹತ್ತಿರ ಬಂದಿಲ್ಲೆಂದು ಸಾಮಾನ್ಯ ಭಾವನೆಯುಂಟಾಗಿದೆ. ಲಂಚಗುಳಿತನದ ವಿರುದ್ಧವಾಗಿ ಅವರು ತೀಕ್ಷ್ಣವಾದ ಪ್ರಚಾರವನ್ನು ಏಕೆ ಕೈಕೊಳ್ಳುವುದಿಲ್ಲ? ಲಂಚದಲ್ಲಿ ಸಿಕ್ಕು ಅಪರಾಧಿಗಳೆಂದು ಸಿದ್ಧರಾದವರಿಗೆ ಅಸಾಧಾರಣ ದಂಡನೆಯನ್ನು ಏಕೆ ವಿಧಿಸುವುದಿಲ್ಲ? ಉದಾಹರಣೆಗಾಗಿ ಲಂಚಕ್ಕಾಗಿ ವಿಧಿಸುವ ಶಿಕ್ಷೆ ೧೦ ವರ್ಷಕ್ಕಿಂತ ಕಡಿಮೆಯಾಗಿರಕೂಡದೆಂದು-ಅದೂ ಅಮಲದಾರಿ ಮಟ್ಟಕ್ಕಿಂತ ಮೇಲಿನ ಅಧಿಕಾರಿಗಳಿಗೆ–ಕಾಯದೆ ಮಾಡಿದರೆ ಏನು ಹಾನಿಯಾದೀತು? ಲಂಚದಲ್ಲಿ ಸಿಕ್ಕವನ ಸಮಸ್ತ ಅಸ್ತಿಯನ್ನು ಒಡನೆ ಸ್ಥಗಿತಗೊಳಿಸಿಬಿಡಬೇಕು. ಅವನು ನಿರಪರಾಧಿಯೆಂದು ಸಿದ್ಧವಾದರೆ ಮಾತ್ರ ಅದು ಅವನಿಗೆ ದೊರೆಯುವದು, ಇಲ್ಲವಾದರೆ ಅದೆಲ್ಲವೂ ಸರಕಾರಕ್ಕೆ ಜಪ್ತವಾಗುವದೆಂದು ಮಾಡಿದರೂ ಪಾಪ ಬಾರದು. ಈಗ ಹೆಚ್ಚಾಗಿ ಕಾರಕೂನರಿಗೋ ಪಟ್ಟೇವಾಲರಿಗೋ ಲಂಚದಲ್ಲಿ ಶಿಕ್ಷೆಯಾಗುತ್ತಿರುತ್ತದೆ. ಮೇಲ್ಮಟ್ಟದಲ್ಲಿದ್ದ ಲಂಚಗುಳಿತನ ಹೊರಬೀಳುವದೇ ಕಡಿಮೆ. ಬಿದ್ದರೂ ಅವರಿಗೆ ಆತ್ಮರಕ್ಷಣೆಗೆ ಜನಧನಶಕ್ತಿ ಇದ್ದೇ ಇರುತ್ತವೆ. ಈ ದುರ್ಗಗಳೆಲ್ಲವುಗಳನ್ನು ಗೆದ್ದು ಅವರನ್ನು ಅಪರಾಧಿಗಳೆಂದು ಸಿದ್ಧಪಡಿಸಿದರೂ ೫೦೦ ರೂಪಾಯಿ ದಂಡವಾದರೆ ಏನು ಪುರುಷಾರ್ಥ? ಲಂಚದಿಂದ ಲಕ್ಷಾಂತರ ಗಳಿಸಿದವನು ಇದಕ್ಕೆಲ್ಲಿ ಹೆದರುತ್ತಾನೆ?

ಇದೆಲ್ಲಕ್ಕೂ ಸರಕಾರಿ ನೌಕರರ ವಿರೋಧ ಬಂದು ಸರಕಾರದ ಕೆಲಸವೇ ನಿಂತು ಹೋಗುವಂತೆ ಅವರು ಮಾಡಬಹುದೆಂದು ನಮ್ಮ ಮಂತ್ರಿಗಳಿಗೆ ಭಯವಿದ್ದಂತಿದೆ. ಇದಕ್ಕೆ ಅವರು “ಕೆಟ್ಟ ಸರಕಾರಕ್ಕಿಂತ ಸರಕಾರವಿಲ್ಲದಿರುವುದೇ ಲೇಸೆಂ”ದು ಉತ್ತರ ಕೊಡಬೇಕು.

ಆದರೂ ಸರಕಾರದ ಮೇಲೆ ಒತ್ತಾಯ ತರುವದೂ ಕೂಗೆಬ್ಬಿಸಿ ಲಂಚಗುಳಿತನಕ್ಕೆ ಅಸ್ಪದವಿಲ್ಲದಂತೆ ಮಾಡುವುದೂ ಯಾರ ಕರ್ತವ್ಯಪ್ರಪಂಚಕ್ಕೇ ಸೇರಿರಲಿ, ಅದನ್ನು ಸರಿಯಾಗಿ ನೆರವೇರಿಸಬಲ್ಲ ಸಾಮರ್ಥ್ಯ ಜನತಾ ಪ್ರಪಂಚಕ್ಕೇ ಸೇರಿದೆ. ಈ ಬಗೆಯಾಗಿ ಒಮ್ಮೆ ನೀವು ಲಂಚವನ್ನು ಮುರಿದರೆ ಮತ್ತೆ ಅದೆಂದಿಗೂ ತಲೆಯೆತ್ತದು.

ಹುಬ್ಬಳ್ಳಿ — ಸಮಾಜ ವಿಜ್ಞಾನಿ

× × ×

## ಲಂಚದ ಹೊಣೆ

“ಲಂಚದ ಹೊಣೆ”ಯ ಬಗ್ಗೆ “ಕರ್ಮವೀರ”ದಲ್ಲಿ ಸೌ. ಗಾಂಜೇಕರ ಮತ್ತು ಶ್ರೀ ಉಪೇಂದ್ರನಾಯಕರು ಬರೆದ ಪರಸ್ಪರ ವಿರುದ್ಧಾಭಿಪ್ರಾಯದ ಲೇಖಗಳಲ್ಲಿ ಸೌ. ಗಾಂಜೇಕರರದೇ ಸರಿಯೆಂದು ತೋರುತ್ತದೆ. ಅಜ್ಞಾನಿಗಳನ್ನು ಸರಿಯಾದ ಮಾರ್ಗಕ್ಕೆ ತರುವುದೇ ಸರಕಾರಿ ನೌಕರರ ಕರ್ತವ್ಯ. ಏಕಸೂತ್ರ ರಾಜ್ಯದಾದಳತೆಯಾಗಲಿಬಹುಸೂತ್ರದ್ದಾಗಿರಲಿ ನೈತಿಕ ಮಾರ್ಗ ತಪ್ಪಿದರೆ ಬಲು ದಿನ ಬಾಳಲಾರದು. ಶ್ರೀ ನಾಯಕರು ಪಕ್ಷಕಾರರಿಗೆ ವ್ಯಭಿಚಾರಿಣಿಯ ದೂಷ ಕೊಟ್ಟದ್ದು ಶುದ್ಧ ತಿರುವು ಮುರುವಾಗಿದೆ. ಆ ಉಪಮೆ ನೀತಿಬಾಹಿರನಾದ ನೌಕರನಿಗೇ ಯೋಗ್ಯವಾದದ್ದು. ಕಾಮಾಂಧನಂತೆ ಪಕ್ಷಕಾರನೂ ಅಜ್ಞಾನಿಯಿದ್ದು ಸರ್ವಸ್ವವನ್ನೂ ಕಳೆದುಕೊಳ್ಳುವನು. ಇನ್ನು ನಾಯಕರು ಹೇಳುವಂತೆ ಸುಖವಿಲಾಸದ ಮೂಲಕ ಹಣದ ಕೊರತೆಯಾಗಿ ನೌಕರರು ಲಂಚಕ್ಕೆ ಕೈಯೊಡ್ಡುವದು ನಿಜವಾದರೆ ಅವರು ಮಿತವ್ಯಯ ಮಾಡಿಕೊಳ್ಳಲಾರದ ಮೂರ್ಖರೆಂದು ಹೇಳಬೇಕಾಗುವದು.

ಪನಹಳ್ಳಿ — ಶಿ. ಬಿ. ಹಿರೇಮಠ
೨೦-೮-೪೯

## ಒಲವಿನ ಶಾಲೆಗಳು

ಇಂದಿನ ಪ್ರಾಥಮಿಕ ಶಿಕ್ಷಣವು ೬—೧೧ ವರ್ಷಗಳ ವರೆಗೆ ಮಾತ್ರ ಇರತಕ್ಕದ್ದು. ಈ ಐದು ವರ್ಷಗಳ ಅವಧಿಯಲ್ಲಿ ಪ್ರತಿಯೊಬ್ಬ ಬಾಲಕನಿಗೆ ಓದಲು, ಬರೆಯಲು ಮತ್ತು ಸಾಮಾನ್ಯ ಗಣಿತ ಇಷ್ಟು ಬರಲೇಬೇಕು. ಇದು ಕಡ್ಡಾಯವಾಗಬೇಕು. ಬಾಲಕನ ಹತ್ತನೇ ವರ್ಷದಿಂದ ಅತನಿಗೆ ಒಂದು ವ್ಯವಸಾಯದ ಶಿಕ್ಷಣವನ್ನು ಕೊಡಬೇಕು. ಅದನ್ನು ಅಭ್ಯಾಸ ಹಾಗು ವ್ಯವಸಾಯ ಇವುಗಳ ಸಮವಾಯದಿಂದ ಆತನಿಗೆ ಎರಡು ವರ್ಷಗಳ ವರೆಗೆ ಕೊಡಬೇಕು. ಮೊದಲಿನ ಮೂರು ವರ್ಷಗಳ ವರೆಗೆ ಮಾತ್ರ ಯಾವ ವ್ಯವಸಾಯದ ಶಿಕ್ಷಣವನ್ನೂ ಕೊಡಬಾರದು. ಏಕೆಂದರೆ ಆ ಕಾಲದಲ್ಲಿ ಬಾಲಕರ ಸ್ನಾಯುಗಳು ಅಷ್ಟು ಬಲಿತಿರುವದಿಲ್ಲ. ಚಂಚಲವೃತ್ತಿಯೂ ಅಷ್ಟು ಕಡಿಮೆಯಾಗಿರುವದಿಲ್ಲ. ಸ್ವಲ್ಪ ದೀರ್ಘಾವಧಿಯ ವರೆಗೆ ಒಂದೆಡೆಗೆ ಕುಳಿತುಕೊಳ್ಳುವ ಸ್ಥೈರ್ಯವೂ ಅಷ್ಟು ಮನೆಮಾಡಿಕೊಂಡಿರುವದಿಲ್ಲ. ಲಾಭಾಲಾಭಗಳ ಕಲ್ಪನೆಯೂ ಇನ್ನೂ ಅಷ್ಟು ತಲೆಯಲ್ಲಿ ಸೇರಿಕೊಂಡಿರುವದಿಲ್ಲ. ಕೊಡುವ ವ್ಯವಸಾಯದ ಶಿಕ್ಷಣವು ಬಾಲಕರ ಉದ್ಯೋಗ ಶಿಕ್ಷಣಕ್ಕೆ ಸರಿಯಾದರೆ ಹಾಲಿನಲ್ಲಿ ಸಕ್ಕರೆ ಬೆರಸಿದಂತೆ. ಹನ್ನೊಂದನೆ ವರ್ಷದ ಕೊನೆಗೆ ಒಂದು ಪರೀಕ್ಷೆಯನ್ನಿಟ್ಟು ಅದರಲ್ಲಿ ಬಾಲಕನ ಒಲವು ಗೊತ್ತುಮಾಡಿ, ಆ ರೀತಿಯಿಂದ ಅತನಿಗೆ ಒಂದು ಸರ್ಟಿಫಿಕೇಟನ್ನು ಕೊಡಬೇಕು. ವ್ಯವಸಾಯದ ಕಡೆಗೆ ಒಲವು ಇದ್ದರೆ ಆಯಾ ವ್ಯವಸಾಯಗಳನ್ನು-ನೆಯ್ಗೆ, ಕಮ್ಮಾರಿಕೆ, ಬಡಿಗತನ, ಕುಂಬಾರಿಕೆ ಮುಂತಾದವು— ಕಲಿಸುವ ಶಾಲೆಗಳಿಗೆ ಹೋಗಬಹುದು. ಬೌದ್ಧಿಕ ಶಿಕ್ಷಣದ ಕಡೆಗೆ ಒಲವು ಇದ್ದರೆ ಈಗಿದ್ದಂತಿರುವ ಶಾಲೆ ಕಾಲೇಜುಗಳಿಗೆ ಹೋಗಬಹುದು. ವ್ಯವಸಾಯಾತ್ಮಕ ಶಾಲೆ, ಕಾಲೇಜಗಳನ್ನೂ ಸರಕಾರವಾಗಲಿ ಸಂಘಸಂಸ್ಥೆಗಳಾಗಲಿ ತೆರೆಯಬೇಕು. ಹಳ್ಳಿ ಪಟ್ಟಣ ಎಂಬ ಭೇದಭಾವಗಳನ್ನು ಎಣಿಸದೆ ಎಲ್ಲ ಕಡೆಗೂ ಒಂದೇ ರೀತಿಯಾಗಿ ಶಿಕ್ಷಣ ಕೊಡುವ ಶಾಲೆಗಳನ್ನು (ಮೇಲೆ ವರ್ಣಿಸಿದಂತೆ) ತೆಗೆಯಬೇಕು ಎಂದರೆ ಆ ಅವಧಿಯಲ್ಲಿ ಬಾಲಕರ ಒಲವು ಸಾಕಷ್ಟು ಗೊತ್ತಾಗಿ ಅವರ ಒಲವಿನಂತೆ ಶಿಕ್ಷಣಕೊಟ್ಟರೆ ಎಲ್ಲಿ ನೋಡಿದಲ್ಲಿ ಮಹಾತ್ಮಾಗಾಂಧಿ ಟಾಗೋರರು ಕಂಡಾರೆಂದು ಆಶೆ.

ಈ ಒಲವಿನ ಶಿಕ್ಷಣಶಾಲೆಗಳಿಂದ ದೇಶಕ್ಕೂ ನಷ್ಟವಿಲ್ಲ. ಎಲ್ಲ ಬಗೆಯ ವ್ಯವಸಾಯಗಾರರೂ ಕಾರಕೂನರೂ ರಾಜಕಾರಣಿಗಳೂ ಮುತ್ಸದ್ದಿಗಳೂ ಕೂಲಿಯವರೂ ಹೀಗೆ ಎಲ್ಲರೂ ತಮ್ಮ ಒಲವಿನಿಂದ ನಿರ್ಮಾಣವಾಗುವರು ಈ ನಿರ್ಮಾಣದಿಂದ ದೇಶಕ್ಕೆ ಯಾವ ಬಗೆಯ ಕೊರತೆಯೂ ಆಗಲಿಕ್ಕಿಲ್ಲ.

ಇಂದಿನ ಪ್ರಾಥಮಿಕ ಒಂದರಿಂದ ನಾಲ್ಕು ಇಯತ್ತೆಗಳ ವರೆಗೆ ಇದ್ದ ಅಭ್ಯಾಸಕ್ರಮದಲ್ಲಿ ಸ್ವಲ್ಪ ಬದಲಾವಣೆ ಮಾಡಿದರೆ ಎಂದರೆ ಒಂದು ವ್ಯವಸಾಯದ ಶಿಕ್ಷಣವನ್ನು ಸೇರಿಸಿದರೆ ತೀರಿತು. ಅಷ್ಟು ಅಭ್ಯಾಸಕ್ರಮದಿಂದ ಒಲವಿನ ಶಾಲೆಗಳನ್ನು ಪ್ರಾರಂಭದಲ್ಲಿ ತೆರೆದು ನೋಡಬಹುದಾಗಿದೆ. ಇಂತಹ ಒಲವಿನ ಶಾಲೆಯಲ್ಲಿಯ ವ್ಯವಸಾಯಯುಕ್ತ ವರ್ಗಗಳನ್ನು ನಮ್ಮ ಭಾರತದ ಪೂಜ್ಯ ಗವರ್ನರ ಜನರಲ್ಲರು ಅಂದಂತೆ ವಾರದಲ್ಲಿ ಮೂರು ದಿವಸಗಳ ವರೆಗೆ ಹಾಕಿ, ಇನ್ನುಳಿದ ದಿವಸಗಳಲ್ಲಿ ಪಾಲಕನಿಗೆ ನೆರವಾಗಲಿಕ್ಕೆ ಬಾಲಕನನ್ನು ಕಳಿಸಲಿಕ್ಕೆ ಅನುಕೂಲವಾಗುತ್ತದೆ. ಆದರೆ ಪಾಲಕನ ವ್ಯವಸಾಯ ಶಿಕ್ಷಣವನ್ನೇ ಬಾಲಕನು ಶಾಲೆಯಲ್ಲಿ ಪಡೆಯುತ್ತಿರಬೇಕು. ಎಂದರೆ ಬಂಗಾರಕ್ಕೆ ಸುಗಂಧ ಕೂಡಿಸಿದಂತೆ. ಇದರಿಂದ ಬಡ ಪಾಲಕನ ಕಲ್ಯಾಣವಾಗುತ್ತದಿಷ್ಟೇ ಅಲ್ಲ; ಬಡ ಶಿಕ್ಷಕರ (ಆ ವರ್ಗಗಳನ್ನು ಕಲಿಸುವವರ) ದೂ ಕಲ್ಯಾಣವಾಗುತ್ತದೆ. ಹೇಗೆಂದರೆ ಆ ಬಿಡುವಿನ ದಿನಗಳಲ್ಲಿ ಶಿಕ್ಷಕರಿಗೆ ಅರ್ಥಿಕ ಸಹಾಯವನ್ನು ದೊರಕಿಸುವದರ ಸಲುವಾಗಿ ಬೇರೆ ವ್ಯವಸಾಯಗಳನ್ನೂ ಮಾಡಲು ಅನುಕೂಲವಾಗುವದು. ಇದರಿಂದ “Two things at a time” ಉಕ್ತಿಯು ಸತ್ಯವಾಗುವದು.

— ಭೀಮಶರ್ಮಾ ನಾಗನೂರ

---

ಹಿಂದೂಕಟ್ಟಳೆ ಮಸೂದೆಯನ್ನು ಹಿಂದಿಯೋಲಗದ ಮುಂದಿನ ಅಧಿವೇಶನ ಮುಗಿಯುವ ಒಳಗಾಗಿ ಪಾಸುಮಾಡಿ ಕಾಯದೆ ಮಾಡಬೇಕೆಂದು ಅ. ಭಾ. ಮಹಿಳಾಪರಿಷತ್ತಿನ ಸ್ಥಾಯೀಸಮಿತಿಯವರು ಬಿನ್ನವಿಸುತ್ತಾರೆ.

# ತತ್ವಜ್ಞಾನಿಗಳ ಸಮ್ಮಿಲನ



ಶ್ರೀ ರಂಗರಾವ ದಿವಾಕರರು ಇಂಗ್ಲಿಷಿನಲ್ಲಿ ಬರೆದ "ಉಪನಿಷತ್ ಕಥೆಗಳು ಹಾಗು ಸಂವಾದ" ಎಂಬ ಗ್ರಂಥವು ಈಗ ಮುದ್ರಣದಲ್ಲಿದ್ದು ಡಾ. ಎಸ್. ರಾಧಾಕೃಷ್ಣನ್‌ರು ಅದಕ್ಕೆ ಮುನ್ನುಡಿ ಬರೆಯಲಿದ್ದಾರೆ. ಈ ಪುಸ್ತಕದ ಹಿಂದೀ ಆವೃತ್ತಿಯೂ ಹೊರಹೊರಡಲಿದೆ. ಡಾ. ರಾಧಾಕೃಷ್ಣನ್‌ರು ಮಾಸ್ಕೋಕ್ಕೆ ಹೊರಡುವ ಮುನ್ನ ದಿಲ್ಲಿಯಲ್ಲಿ ಉಭಯತರ ಈ ಸಮ್ಮಿಲನ ಸಂಭವಿಸಿತು.

## ಸಮಸ್ತ ಭಾರತ

### ಮುಂಬಯಿ

೧೪೪ನೆ ಕಲಮು ಮುರಿದು ಮತಪ್ರದರ್ಶನ ನಡೆಸಿದ್ದಕ್ಕಾಗಿ ಪಂಚಾಯತದಲ್ಲಿಯ ೫೦ ಜನರು ಬಂಧಿಸಲ್ಪಟ್ಟಿದ್ದಾರೆ. ಬಡೋದೆ ಸಂಸ್ಥಾನ ಮುಂಬಯಿ ಪ್ರಾಂತದಲ್ಲಿ ವಿಲೀನವಾದ ಬಳಿಕ ತಾಲೂಕ ಸ್ಥಳವನ್ನು ಬದಲು ಮಾಡಿದ್ದರ ನಿಷೇಧಾರ್ಥ ಈ ಮತಪ್ರದರ್ಶನ ನಡೆಯಿತು. ಚಳವಳಿಯ ಧುರೀಣರಾದ ಬಾಬೂಭಾಯಿ ಮಿಸ್ತ್ರಿಯವರು ಸ್ಥಾನಬದ್ಧತೆಯಲ್ಲಿ ಇಡಲ್ಪಟ್ಟಿರುವರು.

ಮುಂಬಯಿ ಕಾರಪರೇಶನ್‌ದವರು, ಮಹಾತ್ಮಾ ಗಾಂಧಿಯವರು ದೇಶಕ್ಕಾಗಿ ಸಲ್ಲಿಸಿದ್ದ ಅಪೂರ್ವ ಸೇವೆಯನ್ನು ಸ್ಮರಿಸಿ ಮಹಾತ್ಮಾ ಗಾಂಧಿ ಸ್ಮಾರಕ ನಿಧಿಗೆ ಒಂದು ಲಕ್ಷ ರೂಪಾಯಿ ಕೊಡಲು ನಿರ್ಣಯಿಸಿದ್ದಾರೆ.

ಪುಣೆಯಲ್ಲಿ ಅಶ್ಲೀಲವಾರ್ಹ ಸಾಹಿತ್ಯದ ಬಗ್ಗೆ ಪೋಲೀಸರು ೨೪ ಕ್ಕೆ ಪೀಪಲ್ಸ ಬುಕ್ ಹೌಸ ಮೊದಲಾದ ೯ ಸ್ಥಳಗಳನ್ನು ಶೋಧಿಸಿದರು. ಕೆಲ ಅಶ್ಲೀಲವಾರ್ಹ ಸಾಹಿತ್ಯ ಮತ್ತು ಅನಧಿಕೃತ ವೃತ್ತಪತ್ರಿಕೆಗಳು ದೊರೆತಿರುವವೆಂದು ತಿಳಿಯುತ್ತದೆ.

ಮುಂಬಯಿ ಪ್ರಾಂತದಲ್ಲಿ ಅತಿ ದೊಡ್ಡದೊಂದು ಎನಿಸಲಾಗುತಿರುವ ಸೊಲ್ಲಾಪುರದ ಗಿರಿಣಿಯೊಂದು ಕಳೆದ ೨೬ ರಿಂದ ಮುಚ್ಚಲ್ಪಟ್ಟಿದೆ. ಈ ಗಿರಣಿಯಲ್ಲಿ ೧೩ ಸಾವಿರ ಕೆಲಸಗಾರರು ಇದ್ದರು. ಕೆಲಸ ಕಳೆದುಕೊಂಡ ಕೂಲಿಕಾರರಿಗಾಗಿ ಸಾಧ್ಯವಿದ್ದುದನ್ನೆಲ್ಲ ಮಾಡಲಾಗುವದೆಂದು ಕೂಲಿಕಾರ ಮಂತ್ರಿ ಶ್ರೀ. ನಂದಾ ಇವರು ಆಶ್ವಾಸನವಿತ್ತಿದ್ದಾರೆ.

ಗುಜರಾಥ ವಿಶ್ವವಿದ್ಯಾಲಯ ಸಮಿತಿಯ ಅಧ್ಯಕ್ಷರಾದ ಶ್ರೀ ಜಿ. ವಿ. ಮಾವಳಣಕರರು ಅಹಮದಾಬಾದದ ಸಭೆಯಲ್ಲಿ ಗುಜರಾಥ ವಿಶ್ವವಿದ್ಯಾಲಯದ ರೂಪರೇಷೆಗಳನ್ನು ವಿವರಿಸುತ್ತ ಅದರಲ್ಲಿ ಶಿಕ್ಷಕರಿಗೆ ಹೆಚ್ಚಿನ ಸ್ಥಾನವಿದೆ. ಗುಜರಾಥಕ್ಕೆ ಸಂಯೋಜಕ ವಿಶ್ವವಿದ್ಯಾಲಯವು ಅವಶ್ಯವಿದೆ. ಉಚ್ಚ ಶಿಕ್ಷಣದಲ್ಲಿ ಗುಜರಾಥಿಯೇ ಬೋಧಕ ಭಾಷೆಯಾಗುವದು, ರಾಷ್ಟ್ರಭಾಷೆ ಮತ್ತು ಇಂಗ್ಲೀಷನ್ನು ಕಡ್ಡಾಯದ ಭಾಷೆಗಳನ್ನಾಗಿ ಇಟ್ಟುಕೊಳ್ಳಲಾಗುವದು ಎಂದು ಮುಂತಾಗಿ ಹೇಳಿದರು.

ಸರದಾರ ವಲ್ಲಭಭಾಯಿಯವರ ಪ್ರಕೃತಿಯು ಈಗ ಸುಧಾರಿಸುತ್ತ ನಡೆದಿದೆ. ಶ್ರೀ ಭಾಭಾ ಇವರು ಲಂಡನದಿಂದ ಇದೀಗ ಮುಂಬಯಿಗೆ ಬಂದಿದ್ದು ಸರದಾರರ ಹೃದಯದ ಚಲನವನ್ನು ಪರೀಕ್ಷಿಸಲು ಯಂತ್ರವೊಂದನ್ನು ತಂದಿದ್ದಾರೆ ಅದರಿಂದ ನೋಡಲಾಗಿ ಸರದಾರರ ಪ್ರಕೃತಿ ಗುಣಮುಖವಾದದ್ದು ತಿಳಿದುಬಂದಿತು.

ಸಾವಿರಾರು ವರ್ಷಗಳ ಹಿಂದೆ ಗಜನಿ ಮಹಮ್ಮದನಿಂದ ನಾಶಮಾಡಲ್ಪಟ್ಟ ಸೋಮನಾಥ ದೇವಾಲಯದ ಪುನರುಜ್ಜೀವನ ಮಾಡಿ ಲಿಂಗವನ್ನು ಮತ್ತೆ ಪ್ರಸ್ಥಾಪನ ಮಾಡಬೇಕೆಂದು ಯೋಜಿಸಲಾಗಿದೆ. ಸೌರಾಷ್ಟ್ರದ ಕಂದಾಯ ಮಂತ್ರಿಗಳಾದ ಸಾಮಲದಾಸ ಗಾಂಧಿಯವರು ಈ ಬಗ್ಗೆ ದಿಲ್ಲಿಗೆ ಹೋಗಿ ಪ್ರಮುಖರ ಸಂದರ್ಶನ ಪಡೆದಿರುವರು. ಈ ವರೆಗೆ ಜೀರ್ಣೋದ್ಧಾರ ನಿಧಿಯು ೩೮ ಲಕ್ಷ ರೂಪಾಯಿ ಕೂಡಿದೆ. ಈ ಲಿಂಗದ ಪ್ರತಿಷ್ಠಾಪನೆ ಮಾಡಲು ಸರದಾರ ವಲ್ಲಭಭಾಯಿಯವರನ್ನು ಕೇಳಿಕೊಳ್ಳಲಿರುವರು. ಆ ಕಾಲಕ್ಕೆ ಪಂಡಿತರ ಪರಿಷತ್ತನ್ನೂ ಕೂಡಿಸಲಾಗುವದು.

ಮುಂಬಯಿ ಪ್ರಾಂತೀಯ ಕಾಂಗ್ರೆಸ ಸಮಿತಿಗೆ ಶ್ರೀ ಎಸ್. ಕೆ. ಪಾಟೀಲರು ಮತ್ತೆ ಅಧ್ಯಕ್ಷರಾಗಿ ಆರಿಸಿ ಬಂದಿರುವರು.

೨೪ ವರುಷಗಳ ಹಿಂದೆ ವಿಧಿಸಲಾಗಿದ್ದ ದಂಡವನ್ನು ಮುಂಬಯಿ ಕಾರಪರೇಶನದವರು ಈಗ ತಾನೆ ರದ್ದುಪಡಿಸಿರುವರು. ೧೯೨೫ ರಲ್ಲಿ ನಿಕ್ಕಲ ಅಹಮ್ಮದ ಎಂಬ ಪ್ರಾಥಮಿಕ ಶಿಕ್ಷಕರಿಗೆ ಶಾಲೆಯಲ್ಲಿ ಹಾರ್ಮೋನಿಯಂ ಬಾರಿಸಿದ್ದಕ್ಕಾಗಿ ೨ ರೂಪಾಯಿ ದಂಡವಿಧಿಸಲಾಗಿತ್ತು. ಶಾಲೆಯ ಮಕ್ಕಳಿಗೆ ಕಲಿಸುವಾಗ ಹಾರ್ಮೋನಿಯಂ ಬಾರಿಸಿದ್ದೆಂದೂ ಈ ಅಪರಾಧವನ್ನು ಕ್ಷಮಿಸಬೇಕೆಂದೂ ಶಿಕ್ಷಕರು ಕೇಳಿಕೊಂಡಿದ್ದರು. ಮೇಲೆ ಹೇಳಿದಂತೆ ೨೪ ವರುಷಗಳ ನಂತರ ಆ ದಂಡ ರದ್ದಾಯಿತು.

### ಪಶ್ಚಿಮ ಬಂಗಾಲ

ಅಖಿಲಭಾರತ ಪುರೋಗಾಮಿ ಪಕ್ಷದ ಶೀಲಭದ್ರ ಯಾಜೀ ಗುಂಪಿನ ಕಾರ್ಯಕಾರೀ ಮಂಡಳದವರು ಕೆ. ಎನ್. ಜೋಗಳೇಕರರನ್ನು ಪ್ರಧಾನ ಕಾರ್ಯದರ್ಶಿಯ ಸ್ಥಳದಿಂದ ಕಿತ್ತಿಹಾಕಿ ಅವರ ಸ್ಥಳದಲ್ಲಿ ಸತ್ಯಪ್ರಿಯ ಬ್ಯಾನರ್ಜಿಯವರನ್ನು ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ನೇಮಿಸಿದ್ದಾರೆ. ಮೃಣಾಲಿನಿ ಮುಕರ್ಜಿಯವರನ್ನು ಕಾರ್ಯದರ್ಶಿ ಸ್ಥಾನದಿಂದ ಕಿತ್ತಿಹಾಕಲಾಗಿದೆ.

ಕಲಕತ್ತಾ ಮತ್ತು ದಿಲ್ಲಿಯಿಂದ ಹೊರಡುವ ಸ್ಟೇಟ್ಸಮನ್ ಎಂಬ ಆಂಗ್ಲ ಪತ್ರಿಕೆಯು ಅಗಸ್ಟ ೧ ರಲ್ಲಿ ಅಜಾದ ಕಾಶ್ಮೀರ ಸರಕಾರದ ಎರಡಂಕಣದ ಜಾಹಿರಾತೊಂದನ್ನು ಪ್ರಸಿದ್ಧಿಸಿದ್ದಕ್ಕಾಗಿ ಈಗ ಕ್ಷಮಾಪಣೆಯನ್ನು ಬೇಡಿಕೊಂಡಿದೆ. ಈ ಜಾಹಿರಾತು ಕಣ್ತಪ್ಪಿ ಪ್ರಸಿದ್ಧವಾಗಿದೆ. ಅದಕ್ಕಾಗಿ ನಮಗೆ ಬಹಳ ವಿಷಾದವಾಗುತ್ತದೆ ಸದ್ಯದ ಪರಿಸ್ಥಿತಿಯಲ್ಲಿ ಹಿಂದುಸ್ತಾನದಲ್ಲಿ ಪ್ರಸಿದ್ಧವಾಗುವ ಯಾವ ಪತ್ರಿಕೆಯಲ್ಲಿಯೂ ಇಂಥ ಜಾಹಿರಾತು ಪ್ರಸಿದ್ಧವಾಗತಕ್ಕದ್ದಲ್ಲ ಎಂದು ಪತ್ರಿಕೆಯ ವ್ಯವಸ್ಥಾಪಕರು ಮತ್ತು ಸಂಪಾದಕರು ತಮ್ಮ ಪತ್ರದಲ್ಲಿ ಬರೆದು ಕ್ಷಮೆ ಕೋರಿದ್ದಾರೆ.

೧೯೪೯ ಎಪ್ರಿಲ್ ತಿಂಗಳ ಕೊನೆಯವರೆಗೆ ಪೂರ್ವಪಾಕಿಸ್ತಾನದಿಂದ ಪಶ್ಚಿಮಬಂಗಾಲಕ್ಕೆ ೧೯೫ ಸಾವಿರ ನಿರಾಶ್ರಿತರು ಬಂದಿರುವರೆಂದು ತಿಳಿಯುತ್ತದೆ ಈ ಅವಧಿಯಲ್ಲಿ ಕಲಕತ್ತೆಯ ಜನಸಂಖ್ಯೆ ೯೭೦ ಸಾವಿರದಷ್ಟು ಹೆಚ್ಚಿದೆ.

### ಬಿಹಾರ

ಮುಜಫರಪುರ ಜಿಲ್ಹೆಯಲ್ಲಿ ನದಿಗಳಿಗೆ ಮಹಾಪೂರು ಬಂದುದರಿಂದ ೧೫ ಸಾವಿರ ಜನರು ಮತ್ತು ೨೫೦ ಗ್ರಾಮಗಳು ಹಾವಳಿಗೆ ತುತ್ತಾಗಿವೆ ಭತ್ತದ ಬೆಳೆಯೆಲ್ಲ ಹಾಳಾಗಿ ಹೋಗಿದೆ.

ಕೋಸಿ ನದಿಗೆ ಮಹಾಪೂರ ಬಂದದ್ದರಿಂದ ದರ್ಭಂಗಾ ಮೊಂಘೇರ, ಸಹರ್ಸ ಜಿಲ್ಹೆಗಳಲ್ಲಿ ೫೫೦೦ ಚದುರ ಮೈಲು ಪ್ರದೇಶವು ನೀರಲ್ಲಿ ಮುಳುಗಿದೆ. ಭತ್ತದ ಪೈರು ನೀರಲ್ಲಿ ಮುಳುಗಿ ಬಹಳ ಹಾನಿಯಾಗಿದೆ.

ಉಚ್ಚ ಅಧಿಕಾರದಲ್ಲಿರುವ ಬಿಹಾರ ಕಾಂಗ್ರೆಸ್ಸಿಗರು ತಮ್ಮ ಸಂಬಳದಲ್ಲಿ ೧೦೦ ಕ್ಕೆ ೧೨ರಷ್ಟು (ಉತ್ಪನ್ನ ಕರ ಮತ್ತು ಮನೆಬಾಡಿಗೆ ವಜಾ ಕಳೆದು) ಹಣವನ್ನು ಬಿಹಾರ ಕಾಂಗ್ರೆಸ ಸಮಿತಿಗೆ ಕೊಡಬೇಕೆಂದು ನಿಧಿ ಸಂಗ್ರಹ ಯೋಜನೆ ಸಿದ್ಧಪಡಿಸಲು ನೇಮಿಸಲ್ಪಟ್ಟಿದ್ದ ಉಪಸಮಿತಿಯವರು ಸೂಚಿಸಿದ್ದಾರೆ. ಘಟನಾ ಸಮಿತಿಯ ಸದಸ್ಯರು ಮೊದಲಾದವರೂ ಇಂತಿಷ್ಟು ಹಣವನ್ನು ಕೊಡಬೇಕೆಂದು ಸೂಚಿಸಲಾಗಿದೆ. ಪ್ರಾಂತೀಯ ಸಮಿತಿಯಲ್ಲಿ ಇದರ ವಿಚಾರವಾಗುವದು.

### ಮದ್ರಾಸ

ಆಂಧ್ರ ಶಿಷ್ಟಮಂಡಲದವರಿಗೆ ನೆಹರೂ ಇವರು ಕೊಟ್ಟ ಅಸಮಾಧಾನಕರ ಉತ್ತರದಿಂದ ಆಂಧ್ರರಲ್ಲಿ ಗಡಿಬಿಡಿಯುಂಟಾಗಿದೆ. ಮುಂದಿನ ಕ್ರಮವನ್ನು ನಿರ್ಧರಿಸಲು ಮದ್ರಾಸ ಇಲಾಖೆ ಹೈದರಾಬಾದ ಸಂಸ್ಥಾನ ಹಾಗು ನೆರೆಹೊರೆಯ ಆಂಧ್ರ ಭಾಗಗಳಲ್ಲಿಯ ಪ್ರಮುಖ ಆಂಧ್ರ ಸಂಸ್ಥೆಗಳು ಚುನಾಯಿತ ಪ್ರತಿನಿಧಿಗಳನ್ನೊಳಗೊಂಡ ಅಖಿಲ ಆಂಧ್ರ ಮಹಾಜನ ಸಭೆ ಬೇಗನೆ ಕೂಡುವುದೆಂದು ಅಧಿಕೃತವಾಗಿ ತಿಳಿಯುತ್ತದೆ.

ಮದರಾಸದ ಅರ್ಥಸಚಿವರಾದ ಬಿ. ಗೋಪಾಲರೆಡ್ಡಿಯವರು ಮಂತ್ರಿಪದಕ್ಕೆ ರಾಜೀನಾಮೆ ಕೊಟ್ಟು ಆಂಧ್ರವಿಶ್ವವಿದ್ಯಾಲಯದ ಉಪಕುಲಗುರುಗಳಾಗುವರೆಂದು ವಿಶ್ವಸನೀಯವಾಗಿ ತಿಳಿಯುತ್ತದೆ. ಈಗ ಆಂಧ್ರ ವಿಶ್ವವಿದ್ಯಾಲಯದ ಉಪಕುಲಗುರುಗಳಾದ ಶ್ರೀ ಸಿ ಆರ್ ರೆಡ್ಡಿಯವರು ಮೈಸೂರು ಸಂಸ್ಥಾನದಲ್ಲಿ ಶಿಕ್ಷಣ ಸಲಹೆಗಾರರಾಗಿ ಹೋಗಲಿರುವರು.

ತಮಿಳರು ಈವರೆಗೆ ಮದರಾಸ ನಗರದ ಸಂಬಂಧದಲ್ಲಿ ಮೌನದಿಂದ ಇದ್ದದ್ದನ್ನು ತಪ್ಪಾಗಿ ತಿಳಿದುಕೊಳ್ಳದಿರಲಿ. ಮದರಾಸ ನಗರದ ಒಂದು ಅಂಗುಲ ಭೂಮಿಯನ್ನೂ ನಾವು ಬಿಟ್ಟುಗೊಡಲಾರೆವು ಎಂದು ಘಟನಾ ಸಮಿತಿಯ ೧೦ ಜನ ಮದರಾಸ ಸದಸ್ಯರು ಸಂಯುಕ್ತಪ್ರಕಟನೆಯ ಮೂಲಕ ಸಾರಿದ್ದಾರೆ ನಗರದ ಯಾವದೇ ಭಾಗದಲ್ಲಿ ೧೦೦ ಕ್ಕೆ ೨೦ ಕ್ಕಿಂತ ಕಡಮೆ ಇರುವ ಆಂಧ್ರರು ಮದರಾಸಿನ ಅರ್ಧಭಾಗ ಬೇಡುವದು ನ್ಯಾಯ್ಯವಲ್ಲೆಂದು ಇದರಲ್ಲಿ ಬರೆದಿರುವರು. ನಗರದಲ್ಲಿ ೧೦೦ ಕ್ಕೆ ೭೦ ರಷ್ಟು ತಮಿಳರಿರುವದರಿಂದ ಇದು ತಮಿಳರ ನಗರವೇ ಎಂದೂ ಅವರು ಹೇಳಿರುವರು.

ಆಹಾರ ಉಳಿತಾಯದ ಸಂಬಂಧದಲ್ಲಿ ಪ್ರಾಂತೀಯ ಸರಕಾರ ಕೈಕೊಳ್ಳುವ ಕ್ರಮದಲ್ಲಿ ಏಕರೂಪತೆ ಬೇಕು ಎಂದು ಹಿಂದುಸ್ತಾನ ಸರಕಾರವು ನಿರ್ಧರಿಸಿದೆಯೆಂದು ತಿಳಿಯುತ್ತದೆ. ವಿವಾಹ ಮತ್ತು ಅಂತ್ಯಕ್ರಿಯೆಯ ಸಂದರ್ಭದಲ್ಲಿ ೫೦ ಕ್ಕಿಂತ ಹೆಚ್ಚು ಜನರಿಗೆ ಭೋಜನದ ಏರ್ಪಾಡುಮಾಡ ಬಾರದು ಉಳಿದ ಸಮಾರಂಭಗಳಲ್ಲಿ ೨೫ ಕ್ಕಿಂತ ಹೆಚ್ಚು ಜನರನ್ನು ಕರೆಯಬಾರದೆಂದು ಸದ್ಯಕ್ಕೆ ಗೊತ್ತುಪಡಿಸಲಾಗಿದೆ. ಇತರ ಸಮಾರಂಭಗಳಲ್ಲಿ ಪಾನೀಯಗಳಲ್ಲದೆ ತಾಜಾ ಮತ್ತು ಒಣಗಿದ ಹಣ್ಣುಗಳನ್ನೂ ಕೊಡಬಹುದೆಂದು ತಿಳಿಸಲಾಗುವದು.

ಮದರಾಸ ಮಂತ್ರಿಗಳ ಮೇಲಿನ ಆರೋಪಗಳ ಸಂಬಂಧದಲ್ಲಿ ಮುಖ್ಯಮಂತ್ರಿ ಕುಮಾರಸ್ವಾಮಿ ರಾಜಾ ಇವರು ವಿಚಾರಣೆ ಮುಗಿಸಿದ್ದು ಮುಂದಿನವಾರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆವರದಿಯನ್ನೊಪ್ಪಿಸುವರು. ಹಿಂದಿನ ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂರಿಗೆ ಸರಕಾರಿ ಕಾಗದಪತ್ರಗಳನ್ನು ಕೋರಿಸಿದ್ದು ಅವರು ಸಿದ್ಧಪಡಿಸಿದ ಹೇಳಿಕೆಯನ್ನು ತಮ್ಮ ವರದಿಯ ಜೊತೆಯಲ್ಲಿ ರಾಜಾ ಇವರು ಕಳಿಸುವರು. ತ್ರಿಮೂರ್ತಿ ಸಮಿತಿಯವರು ಯಥಾವಕಾಶ ಅದರ ವಿಚಾರಣೆ ಮಾಡುವರು.

### ಹೊಸದಿಲ್ಲಿ

ಹಿಂದುಸ್ತಾನದಲ್ಲಿಯ ಪ್ರಸಿದ್ಧ ಸಾಹಿತಿಗಳು ಮತ್ತು ಸಾಹಿತ್ಯಕ ಸಂಸ್ಥೆಗಳ ಪ್ರತಿನಿಧಿಗಳ ಪರಿಷತ್ತು ಸಪ್ಟೆಂಬರ ಕೊನೆಯ ವಾರದಲ್ಲಿ ಹೊಸದಿಲ್ಲಿಯಲ್ಲಿ ಕೂಡಲಿದೆ. ಸರಕಾರದ ಪರವಾಗಿ ಈ ಪರಿಷತ್ತು ಸೇರಿಸಲಾಗುವದು. ಇದಲ್ಲದೆ ಕಲಾಪರಿಷತ್ತು ಮತ್ತು ವಿಜ್ಞಾನ ಪರಿಷತ್ತು ಸೇರಲಿವೆ.

ಹೈದರಾಬಾದ ಸಂಸ್ಥಾನದಲ್ಲಿ ಬೇಗನೆ ಪ್ರಜಾಸತ್ತಾತ್ಮಕ ಆಡಳಿತೆಯನ್ನು ಸಂಸ್ಥಾಪಿಸಬೇಕೆಂದು ಸ್ವಾಮೀ ರಮಾನಂದತೀರ್ಥರು ಸಂಸ್ಥಾನ ಪಾಲಕರನ್ನು ಕಂಡು ಕೇಳಿಕೊಂಡರು. ಅವರು ಮುಖ್ಯ ಮಂತ್ರಿಗಳನ್ನು ಭೆಟ್ಟಿಯಾಗಲಿರುವರು. ಕಮ್ಯುನಿಸ್ಟರ ಹಾವಳಿ ಇನ್ನೂ ನಡೆದಿದೆಯೆಂದೂ ಅವರು ನಿವೇದಿಸಿದರು.

ರೇಲ್ವೆಗಳಲ್ಲಿ ಹೊಸ ವರ್ಗೀಕರಣದಿಂದ ಆದಾಯವು ಕಡಮೆಯಾದ್ದರಿಂದ ರೇಲ್ವೆ ಬೋರ್ಡಿನವರು ಈ ಬಗ್ಗೆ ವಿಚಾರ ನಡೆಸಿ ಹೊಸ ತರಗತಿಯ ವಿಶಿಷ್ಟ ಎರಡನೇ ವರ್ಗವನ್ನು ಪ್ರಾರಂಭಿಸಬೇಕೆಂದು ಗೊತ್ತುಪಡಿಸಿದ್ದಾರೆ ೧೦ ರೂ. ಗಳನ್ನು ಹೆಚ್ಚು ಕೊಟ್ಟಲ್ಲಿ ಊಟೋಪಹಾರ ಮುಂತಾದ ಸ್ಥಳದ ಅನುಕೂಲತೆಯನ್ನು ಒದಗಿಸಲಾಗುವದಿಲ್ಲೆಂದು ತಿಳಿಯುತ್ತದೆ.

ವೃತ್ತಪತ್ರಗಳ ಜಾಹೀರಾತಿನ ಮೇಲೆ ಕರ ಹೇರುವ ಅಧಿಕಾರವನ್ನು ಕೇಂದ್ರ ಸರಕಾರ ಕೈಕೊಳ್ಳಬೇಕೆಂಬ ಬಗ್ಗೆ ಕೇಂದ್ರ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಸಭೆಯಲ್ಲಿ ಚರ್ಚೆಯಾಗಿ ಸ್ವೀಕೃತವಾಯಿತು.

ವಿಶಾಖಪಟ್ಟಣದಲ್ಲಿಯ ಹಡಗ ಕಟ್ಟುವ ಕಾರಖಾನೆಯನ್ನು ಹಿಂದುಸ್ತಾನ ಸರಕಾರವು ಬೇಗನೆ ತನ್ನ ವಶಕ್ಕೆ ತೆಗೆದುಕೊಳ್ಳುವದೆಂದು ಮಂತ್ರಿವರ್ಯ ಶ್ಯಾಮಪ್ರಸಾದ ಮುಕರ್ಜಿಯವರು ಕಲಕತ್ತೆಯಲ್ಲಿಯ ಒಂದು ಭಾಷಣದಲ್ಲಿ ಹೇಳಿದರು.

### ಪೂರ್ವ ಪಂಜಾಬ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಮುಖ್ಯಸ್ಥರಾದ ಎಂ ಎಸ್ ಗೋಳವಲಕರರು ಅಮೃತಸರದಲ್ಲಿಯ ಮಾನಪತ್ರಕ್ಕೆ ಉತ್ತರ ಕೊಡುವಾಗ ಪ್ರತಿಫಲಾಪೇಕ್ಷೆಯಿಲ್ಲದೆ ಶಾಂತರೀತಿಯಿಂದ ನಿಜವಾದ ಹಿಂದು ಪದ್ಧತಿಯಿಂದ ಕಾರ್ಯಮಾಡುವದೇ ಸಂಘದ ಉದ್ದೇಶವೆಂದು ಹೇಳಿದರು.

# ವಿಶ್ವಶಾಂತಿ ಮತ್ತು ಭಾರತ

ಲೇ— ಶ್ರೀ. ಮಹಾಬಲೇಶ್ವರ ಭಟ್ಟ

ಅಮೇರಿಕ ಮತ್ತು ರಶಿಯಾ ಈ ಎರಡೂ ರಾಷ್ಟ್ರಗಳು ವಿಶ್ವಂತಕ ಕಾರ್ಯದಲ್ಲಿ ನಿರತವಾಗಿವೆ ಎಂದು ತಿಳಿದರೆ ತಪ್ಪಾಗಲಾರದು. ಅಧ್ಯಕ್ಷ ಟ್ರುಮನ್ನರು ಈ ವರುಷದ ಬಜೆಟ್ ಯೋಜನೆಯ ಪ್ರಕಾರ ೨,೩೩೫, ೩೪೧,೦೦೦ ಡಾಲರನ್ನು ವೆಚ್ಚಮಾಡಲು [illegible] ಅನುಮತಿ ಪಡೆದಿರುವರು. ಅತ್ತ ರಶಿಯಾ ಕೂಡ ಯುದ್ಧದ ತಯಾರಿ ಮಾಡುತ್ತಲಿರುವುದು. ಈಗ ೧೫,೦೦೦ ಯುದ್ಧ ವಿಮಾನಗಳು ಸಿದ್ಧವಿರುವವೆಂದೂ ವಾರ್ತೆ [illegible] ಬಂದಿತ್ತು. ಸಂಕ್ಷೇಪದಲ್ಲಿ [illegible] ತೃತೀಯ ಮಹಾಯುದ್ಧಕ್ಕೆ ಎಂದು [illegible]ವಾದರೆ ತೀವ್ರದಿಂದ ಅನುಚಿತವಾಗ ಲಾರದು.

ಇಂತಹ ವಿಷಮ ಸ್ಥಿತಿಯಲ್ಲಿ ವಿಶ್ವಶಾಂತಿಯ ಸಮಸ್ಯೆಯು ನಮ್ಮ ಮುಂದೆ ಬರುವದು ಸ್ವಾಭಾವಿಕ. ಇತಿಹಾಸದ ಕೆಲವು ಪ್ರಮುಖ ಘಟನೆಗಳನ್ನು ಇಲ್ಲಿ ನಿರೂಪಿಸಬಯಸುವೆನು. ಅದರಿಂದ ನಮಗೆ ವಿಶ್ವಶಾಂತಿಯ ಸಮಸ್ಯೆಯನ್ನು ತಿಳಿಯಲು ಅನುವಾಗುವದು.

ವಿಶ್ವಶಾಂತಿಯ ಕಲ್ಪನೆಯು ಕ್ರಿ. ಶ. ೧೪ ನೇ ಶತಮಾನಕ್ಕಿಂತಲೂ ಮುಂಚಿತವಾಗಿ ವಿದಿತವಾಗಿತ್ತು. ಅಲ್ಫ್ರೆಡ್ ಟೆನಿಸನ್ನನು ಹೇಳಿದಂತೆ—

"Till the war drums throbb's no longer and the flags were furl'd. In the parliament of man, the federation of the world."

ಟೆನಿಸನ್ನನು ಬಹುದಿನಗಳ ಹಿಂದೆಯೇ ಜಾಗತಿಕ ಪಾರ್ಲಿಯಾಮೆಂಟ ಮತ್ತು ಫೆಡರೇಶನ್ನಿನ ಕಲ್ಪನೆ ಮಾಡಿದ್ದನು. ಸಭ್ಯತೆಯ ಆಗಮನದ ಕಾಲದಿಂದಲೆಯೇ ಆದರ್ಶವಾದಿಗಳು ವಿಶ್ವಶಾಂತಿ ಮತ್ತು ಸುರಕ್ಷಿತತೆಯ ಸಂಬಂಧವಾಗಿ [illegible]ಯೋಚಿಸಿದ್ದರು. ಆದರೆ ಆ ವಿಚಾರ ಅಸಂ[illegible] ಘಟಿತವಾಗಿತ್ತು. ಅದು ನಿರರ್ಥಕವಾಯಿತು.

## ಯುದ್ಧವಾದೀ ಶಾಂತಿದೂತರು

ಯುದ್ಧವಾದೀ ಶಾಂತಿದೂತರಲ್ಲಿ ವಿಶೇಷವಾಗಿ ನಾಲ್ಕು ಜನರನ್ನು ಎಣಿಸಬಹುದು. (೧) [illegible] (೨) ಸೀಜರ (೩) ನೆಪೋಲಿಯನ್ (೪) ಹಿಟ್ಲರ್ ಇವರೆಲ್ಲರ ಉದ್ದೇಶವೂ [illegible]ವನ್ನು ಸೈನ್ಯಬಲದಿಂದ ಗೆದ್ದು ವಿಶ್ವ [illegible]ಶಾಂತಿಯನ್ನು ಸ್ಥಾಪಿಸುವದಿತ್ತು. ಆದರೆ ಈ ಯುದ್ಧವಾದೀ ಶಾಂತಿದೂತರ (war minded pacifists) ಕನಸು ಮನಸಿನಲ್ಲಿಯೇ ಮುಗ್ಗಿಹೋಯಿತು. ವಿಶ್ವದಲ್ಲಿ [illegible] ಶಕ್ತಿಯ ಬಲದಿಂದ ಇತರರನ್ನು ಅಧೀನದಲ್ಲಿಟ್ಟುಕೊಳ್ಳುವ ಶಕ್ತಿ-ಸಾಧನಗಳು ಯಾವ ರಾಷ್ಟ್ರದಲ್ಲಿವೆ?

ವಿಶ್ವದ ಸಂರಕ್ಷಣೆಯನ್ನು ಸಂಸ್ಥಾಪಿಸುವ [illegible] ಆದರ್ಶ ವಿಚಾರವು ಪೂರ್ವದ [illegible]ದಲ್ಲಿ ಮೂಡಿತು. ಶಾಂತರೀತಿಯಿಂದ, [illegible]ಪೂರಿತ ಹೃದಯದಿಂದ, ಭ್ರಾತೃತ್ವದ [illegible]ಯಿಂದ ಗೆಲ್ಲುವ ವಿಚಾರವದು. ಈ [illegible] ಪ್ರತಿನಿಧಿಯು [illegible]ವಾಗಿಯೂ [illegible]ಯ ದೂತನಿದ್ದನು. ಅವನು ಮಹಾ[illegible] ಅಶೋಕನು.

ಯುದ್ಧದಲ್ಲಿ [ಕಲಿಂಗ] ಅಶೋಕನು ಪೂರ್ಣ [illegible]ನು. ಆದರೆ ಆ ಯುದ್ಧವು [illegible] ವಿಚಾರವನ್ನೇ ಆಮೂಲವಾಗಿ ಪರಿವರ್ತ[illegible] ಈ ರಕ್ತ-ಪಾತದ ಅನಂತರ ಅಶೋಕನು [illegible]ವನ್ನು ಗೆಲ್ಲಲು ಬೇರೆ ಅಸ್ತ್ರವೊಂದನ್ನು [illegible]. ಆ ಅಸ್ತ್ರವು ಸತ್ಯ ಮತ್ತು [illegible] ಅಸ್ತ್ರ. ಧರ್ಮಬುದ್ಧಿಯಿಂದ ಮತ್ತು [illegible]ರೀತಿಯಿಂದ [illegible]. ಒಂದು ಕೈಯಲ್ಲಿ [illegible] ಇನ್ನೊಂದರಲ್ಲಿ ತ್ರಿಪಿಟಕವನ್ನು ಹಿಡಿದು [illegible] ತನ್ನ ಧರ್ಮಪ್ರಚಾರ ಮಾಡಲಿಲ್ಲ. [illegible] ಉದ್ದೇಶವು ವಿಶ್ವದಲ್ಲಿ ಪ್ರೇಮ ಮತ್ತು [illegible]ತ್ವದ ಆಧಾರದ ಮೇಲೆ ಶಾಂತಿಸ್ಥಾಪಿಸು[illegible]. ಕೇವಲ ವಿಚಾರದಲ್ಲೇ ಮಾತ್ರ ಅಹಿಂ[illegible]ಗಿರದೆ ಕರ್ಮ[illegible]ದಲ್ಲಿಯೂ ಆಗಿ[illegible].

[illegible]ದಲ್ಲಿ [illegible]ಪೂರ್ವ [illegible] ಇಂದು ಅಶೋಕನ ರಾಜಕೀಯ [illegible] ವಿಲೀನವಾಗಿದೆ. ಅದರಂತೆ [illegible] ರಾಜ್ಯವೂ. ಆದರೆ ಕೋಟ್ಯ[illegible]ಗಳ ಹೃದಯದಲ್ಲಿ ಅಶೋಕನು ಮನೆ[illegible]ದಿರುವನು. ಇದು ಅಶೋಕನ [illegible] ವಿಜಯ.

ಕಿಪಸಂತರ ಮಧ್ಯಕಾಲದಲ್ಲಿ ಯುರೋಪಿನಲ್ಲಿ ಕ್ರಿಶ್ಚಿಯನ್ ಮುಖಂಡರುಗಳು ವಿಶ್ವಶಾಂತಿ ಗೋಸ್ಕರ ಧಾರ್ಮಿಕ ಸಂಘ (Religious Society) ಗಳನ್ನು ಸ್ಥಾಪಿಸಿದರು. ಆದರೆ ಅವರು ಕ್ರೈಸ್ತ ಮಠಕ್ಕೆ (Church ಅಧೀನವಾಗಿರಬೇಕೆಂದರು. ಯಾಕೆಂದರೆ ಅದರಲ್ಲಿ ಅವರಿಗೆ ಪೂರ್ಣ ವಿಶ್ವಾಸವಿತ್ತು. ಕೇಂದ್ರ ಶಕ್ತಿ (Central Power) ಯಿಲ್ಲದೆ ವಿಶ್ವಶಾಂತಿಯನ್ನು ಸ್ಥಾಪಿಸುವದು ಅಸಂಭವವೆಂದು ಅವರು ಮನಗಂಡಿದ್ದರು. ಅವರ ಹೇಳಿಕೆಯಂತೆ ಆ ಶಕ್ತಿಯು ಕ್ರೈಸ್ತ ಮಠದಲ್ಲಿತ್ತು. ಈ ಸಂಕುಚಿತ ವಿಚಾರವು ಜನತೆಗೆ ರುಚಿಸಲಿಲ್ಲ. ಪ್ರಗತಿಶೀಲ ಜಗತ್ತಿನಲ್ಲಿ ನಿರಂಕುಶ ಪ್ರಭುತ್ವವೆಂದೂ ಬೇರೂರಲಾರದು.

## ಅಂತಾರಾಷ್ಟ್ರೀಯ ನ್ಯಾಯಸ್ಥಾನ

ಕಾಲಚಕ್ರದ ಪರಿವರ್ತನೆಯಾಯಿತು. ಕೇಂದ್ರ ಶಕ್ತಿಯ ಬದಲು ಈಗ ಸರಕಾರಗಳ ಸಂಘವೊಂದರ ಕಲ್ಪನೆಯಾಯಿತು. ಕ್ರಿ. ಶ. ೧೪ ನೇ ಶತಮಾನದಲ್ಲಿ ಪೆರೀ ಡ್ಯುಬೋಇಸ್ (Pierre Dubois) ಎಂಬವನ್ನು The Recovery of the holy land" ಎಂಬ ಪುಸ್ತಕದಲ್ಲಿ ಅಂತಾರಾಷ್ಟ್ರೀಯ ನ್ಯಾಯಸ್ಥಾನ (International Court of justice) ವನ್ನು ಸ್ಥಾಪಿಸಲು ಸೂಚಿಸಿದನು. ವಿಭಿನ್ನ ರಾಷ್ಟ್ರಗಳ ತಂಟೆ ತಕರಾರುಗಳನ್ನು ಶಾಂತರೀತಿಯಿಂದ ಬಗೆಹರಿಸುವದೇ ಅದರ ಉದ್ದೇಶ. ಇದನ್ನು ಉಲ್ಲಂಘಿಸಿದವರಿಗೆ ಆರ್ಥಿಕ ದಿಗ್ಬಂಧನೆ ಹಾಕಬೇಕೆಂದು ಅವನು ಸೂಚಿಸಿದನು.

೧೭ ನೇ ಶತಮಾನದಲ್ಲಿ ವಿಭಿನ್ನ ರಾಷ್ಟ್ರಗಳ ನಡುವೆ ಮೈತ್ರಿಸಂಬಂಧವನ್ನು ಸ್ಥಾಪಿಸಲು ಚರ್ಚೆಗಳಾದವು. ಎಮೇರಿಕ್ ಕ್ರೂಸೆ, ಸೆಲಿ, ಮತ್ತು ವಿಲಿಯಮ್ ಪೆನ್ನ ಮೊದಲಾದವರು ತಮ್ಮ ಲೇಖಗಳ ಮೂಲಕ ಅಂ. ರಾ. ನ್ಯಾಯಾಲಯವನ್ನು ಸ್ಥಾಪಿಸುವದು ಸೂಕ್ತವೆಂದು ನುಡಿದರು. ಸನ್ ೧೭೧೦ ರಲ್ಲಿ ಜಾನ್ ಬೆಲರ್ಸನು ಒಂದು ಚಿಕ್ಕ ಹೊತ್ತಿಗೆಯಲ್ಲಿ ಯುರೋಪೀಯ ರಾಷ್ಟ್ರಗಳ ಸಂಘವನ್ನು ಸ್ಥಾಪಿಸಲು ಒತ್ತರವಿಟ್ಟನು.

ಆದರೆ ಎಲ್ಲಕ್ಕೂ ಮೊದಲು ಪ್ರಸಿದ್ಧ ದಾರ್ಶನಿಕ ಗ್ರೊಟಿಯಸ್ (Grotius) ನು ಅಂತಾರಾಷ್ಟ್ರೀಯ ಕಾನೂನನ್ನು ಲಿಖಿತ ರೂಪದಲ್ಲಿ ಜನತೆಯ ಮುಂದಿಟ್ಟನು. ಅಂದಿನಿಂದಲೇ ಇತರ ರಾಷ್ಟ್ರಗಳೊಡನೆ ಮೈತ್ರಿ ಸಂಬಂಧವನ್ನಿಡುವ ಕಲ್ಪನೆ ಉಂಟಾಯಿತು.

ಜರ್ಮನಿಯ ಪ್ರಸಿದ್ಧ ದಾರ್ಶನಿಕ ಇಮೆನ್ಯುಅಲ್ ಕ್ಯಾಂಟ್ ನು ತನ್ನ "Perpetual peace" ಎಂಬ ಪುಸ್ತಕದಲ್ಲಿ ರಾಷ್ಟ್ರಸಂಘವನ್ನು ಉಲ್ಲೇಖಿಸಿದನು.

ಆದರೆ ಇವೆಲ್ಲ ಕೇವಲ ಆದರ್ಶವಾದಿ ದಾರ್ಶನಿಕರ ವಿಚಾರ ಮಾತ್ರವಾಗಿತ್ತು. ಇವರೇನೂ ರಾಜನೀತಿಪಟುಗಳಲ್ಲ. ಅಲ್ಲದೆ ತಮ್ಮ ವಿಚಾರಗಳನ್ನು ಕಾರ್ಯರೂಪಕ್ಕೆ ತರುವ ಶಕ್ತಿ ಯಾದರೂ ಇವರಲ್ಲಿರಲಿಲ್ಲ. ೧೮ ನೇ ಶತಮಾನದ ತನಕ ಸ್ಥಿತಿಯು ಯಥಾವತ್ತಾಗಿ ಉಳಿಯಿತು.

## ಫ್ರಾನ್ಸಿನ ರಾಜ್ಯಕ್ರಾಂತಿಯ ನಂತರ

ನೆಪೋಲಿಯನ್ನನ ಪೂರ್ಣ ಪರಾಜಯದ ನಂತರ ತಮ್ಮ ರಕ್ಷಣೆಗಾಗಿ ರಶಿಯಾ, ಆಸ್ಟ್ರಿಯಾ ಮತ್ತು ಪ್ರಶಿಯಗಳಲ್ಲಿ ಒಂದು ಒಪ್ಪಂದವಾಯಿತು. ಅದಕ್ಕೆ Holy Alliance ಎಂತ ಹೇಳುತ್ತಾರೆ [೧೮೧೫]. ಇದರ ಮುಖ್ಯ ಉದ್ದೇಶವು ವಿಯೇನಾ ಕಾಂಗ್ರೆಸ್ಸಿನ (೧೮೧೪-೧೫) ತೀರ್ಮಾನವನ್ನು ಕಾರ್ಯರೂಪಕ್ಕೆ ತರುವದು. ಅಲ್ಲದೆ ತಮ್ಮ ಹಿಂದಿನ ರಾಜರನ್ನು ಪಟ್ಟಕ್ಕೇರಿಸುವದು. ಅಂತೂ ಈಗ ಜನರಿಗೆ ಇಂತಹ ಸಂಘಗಳಿಂದಾಗುವ ಲಾಭ ಹಾನಿಗಳ ಅರಿವಾಗತೊಡಗಿತು. ಸಹಕಾರದಿಂದ ದೊಡ್ಡ ದೊಡ್ಡ ಕೆಲಸಗಳೂ ಸುಲಭವಾಗಿ ಆಗುವವೆಂದು ಅರಿತರು.

೧೮೯೯ ರಲ್ಲಿ ಯುರೋಪಿನ ರಾಷ್ಟ್ರಗಳ ಸಭೆಯೊಂದು ರಶಿಯಾದ ಆಮಂತ್ರಣದ ಮೇರೆಗೆ ಹಾಗ್ (ಹಾಲೆಂಡ್) ದಲ್ಲಿ ಸೇರಿತು. ಅದರಲ್ಲಿ ೨೬ ರಾಷ್ಟ್ರಗಳು ಭಾಗವಹಿಸಿದ್ದವು. ಮುಖ್ಯ ಉದ್ದೇಶವು ಯುದ್ಧ ಸಾಮಗ್ರಿಗಳನ್ನು ಕಡಿಮೆ ಮಾಡಲು ಒತ್ತರವನ್ನಿಡುವದು. ಒಂದು ನ್ಯಾಯ ಪಂಚಾಯತಿಕೋರ್ಟನ್ನು



೧೦೫ ಜನ ಪ್ರಯಾಣಿಕರನ್ನು ಹೊರಬಲ್ಲ ಈ ಭಾರಿ ಬ್ರಿಟಿಶ ವಿಮಾನ "ಹಾರುವ ಹಡಗು" ಈಚೆಗೆ ಸಿದ್ಧವಾಗಿದೆ. ಇದರ ಭಾರ ೧೪೦ ಟನ್ ಉದ್ದ ೧೪೮ ಅಡಿ, ಎತ್ತರ ೫೬ ಅಡಿ, ರೆಕ್ಕೆಯ ಅಳತೆ ೨೧೯॥ ಅಡಿ

ಸ್ಥಾಪಿಸಲಾಯಿತು. ೧೯೦೭ ರಲ್ಲಿ ಅದರ ಕಾರ್ಯಕಲಾಪಗಳನ್ನು ವಿಸ್ತರಿಸಲಾಯಿತು. ೪೪ ರಾಷ್ಟ್ರಗಳು ಇದರಲ್ಲಿ ಭಾಗ ವಹಿಸಿದವು. ಈ ಸಮ್ಮೇಳನದಲ್ಲಿ ಅತಿ ಮಹತ್ವಪೂರ್ಣ ನಿರ್ಣಯಗಳಾದವು. ಎರಡು ರಾಷ್ಟ್ರಗಳ ಮಧ್ಯೆ ಏನಾದರೂ ಬಿಡಿಸಲಾರದ ಸಮಸ್ಯೆಗಳು ಬಂದಲ್ಲಿ ಮೂರನೇ ಪಕ್ಷವು ಮಧ್ಯಸ್ಥಿಕೆ ಮಾಡಿ ಅದನ್ನು ಸಮಾಧಾನ ಪಡಿಸುವದು. ಇಂತಹ ಸಮಸ್ಯೆಗಳನ್ನು ಪರಿಶೀಲಿಸಲು ಅಂತಾರಾಷ್ಟ್ರೀಯ ಪರಿಶೀಲನ ಸಮಿತಿಯೊಂದನ್ನು ನೇಮಿಸಬೇಕೆಂದೂ ನಿರ್ಣಯವಾಯಿತು.

## ಪ್ರಥಮ ಮಹಾಯುದ್ಧದ ನಂತರ

ಇಷ್ಟರಲ್ಲಿ ಪ್ರಥಮ ಮಹಾಯುದ್ಧವು ಆರಂಭವಾದುದರಿಂದ ಈ ಮೇಲ್ಕಾಣಿಸಿದ ಯೋಜನೆಗಳು ಕಾಗದದಲ್ಲೇ ಉಳಿದವು.

ಯುದ್ಧದ ಪರಿಸಮಾಪ್ತಿಯಾದನಂತರ ಪ್ರೆಸಿಡೆಂಟ ವಿಲಸನ್ನರ ಸತಪ್ರಯತ್ನದಿಂದ ಲೀಗ್ ಆಫ್ ನೇಶನ್ಸ ಸ್ಥಾಪಿಸಲಾಯಿತು. ಒಬ್ಬರಿಗೊಬ್ಬರು ನೆರವಾಗಿ ಸಹಕಾರದಿಂದ ಕೆಲಸಮಾಡುವದೇ ಅದರ ಮುಖ್ಯ ಉದ್ದೇಶವಾಗಿತ್ತು. ಸರಿಯಾಗಿ, ನಿಷ್ಪಕ್ಷವಾಗಿ ಕಾರ್ಯ ಮಾಡಲು ಈ ಅಂತಾರಾಷ್ಟ್ರೀಯ ಸಂಸ್ಥೆಯು ಸ್ಥಾಯೀ ನ್ಯಾಯಾಲಯ (೧೯೨೦) ವೊಂದನ್ನು ಸ್ಥಾಪಿಸಿತು. ಆದರೆ ರಾಜನೀತಿಜ್ಞರ ಮನಸ್ಸು-ಮನೋವೃತ್ತಿಯು-ಬದಲಾಗಿರಲಿಲ್ಲ. ಎಲ್ಲರಲ್ಲೂ ಸಂಶಯಪಿಶಾಚಿಯು ಗುಡಿಮಾಡಿಕೊಂಡಿತ್ತು. ಎಲ್ಲರಾಷ್ಟ್ರಗಳೂ ಒಳಗಿಂದೊಳಗೆ ತಮ್ಮ ಸೈನಿಕ ಮತ್ತು ಶಸ್ತ್ರಶಕ್ತಿಯನ್ನು ಬೆಳಸಿಕೊಳ್ಳತೊಡಗಿದರು. ಇಂತಹ ವಾತಾವರಣದಲ್ಲಿ ವಿಶ್ವಶಾಂತಿ ಮತ್ತು ಸುರಕ್ಷೆಯ ಯೋಜನೆಗಳು, ಪ್ರಸ್ತಾವಗಳು ನಿರರ್ಥಕವೇ. ಅವುಗಳಲ್ಲಿ ಏನೂ ಹುರುಳಿಲ್ಲ.

ಈ ಅಂತಾರಾಷ್ಟ್ರೀಯ ಸಂಘದ ಸ್ಥಾಪನೆಯಾಗಿ ೨೦ ವರ್ಷಗಳೊಳಗೇ ದ್ವಿತೀಯ ಮಹಾಯುದ್ಧವು ತನ್ನ ವಿಷಾಕ್ತ ದಂಷ್ಟ್ರಗಳೊಡನೆ ವಿಶ್ವವನ್ನು ನುಂಗಲು ಬಾಯಿ ತೆರೆದಿತು. ಇದರಿಂದ ಅಂತಾರಾಷ್ಟ್ರೀಯ ಶಾಂತಿಯ ಎಲ್ಲ ಚರ್ಚೆಗಳೂ ಮೂಲೆಹಿಡಿದವು.

ದ್ವಿತೀಯ ಮಹಾಯುದ್ಧದ ನಂತರ ಶಾಂತಿ ಸ್ಥಾಪನೆಗಾಗಿ ಸಂಯುಕ್ತ ರಾಷ್ಟ್ರಸಂಘದ ನಾಮಕರಣವಾಯಿತು. ಇದರ ಮೊದಲನೇ ಸಮ್ಮೇಳನವು ೧೯೪೬ ರಲ್ಲಿ ಆಯಿತು. ಅಂದಿನಿಂದ ಇಂದಿನವರೆಗೂ ಅದು ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಬಗೆಹರಿಸಲು ಯತ್ನಿಸುತ್ತಿದೆ. ಮುಖ್ಯ ಸಮಸ್ಯೆಗಳು ಇಂತಿವೆ. (೧) ಪಾಲಿಸ್ತಾನ ಸಮಸ್ಯೆ. (೨) ದಕ್ಷಿಣ ಆಫ್ರಿಕಾ ಮತ್ತು ಭಾರತೀಯರ ಸಮಸ್ಯೆ. ಮೇಲ್ಕಾಣಿಸಿದ ಸಮಸ್ಯೆಗಳಲ್ಲಿ ಒಂದನ್ನೂ ಸಮಾಧಾನಕರವಾಗಿ ಬಗೆಹರಿಸಲು ಅದು ಅಸಮರ್ಥವಾಯಿತೆಂದು ಹೇಳಲು ತುಂಬ ವಿಷಾದವಾಗುತ್ತದೆ.

## ಭಾರತದ ಶಾಂತಿದೂತ

ಇಂತಹ ನಿರಾಶಾಜನಕ ಪರಿಸ್ಥಿತಿಯಲ್ಲಿ ಯುರೋಪೀಯ ರಾಷ್ಟ್ರಗಳು ಘೋರ ಅಂಧಕಾರದಲ್ಲಿರುವಾಗ ಒಂದು ಆಶಾಕಿರಣವು ಪೂರ್ವದ ಕ್ಷಿತಿಜದಲ್ಲಿ ಗೋಚರವಾಯಿತು. ಅದರ ಪ್ರಕಾಶವು ಮಂದವಾಗಿತ್ತು. ಕಾಲಕ್ರಮೇಣ ವಿಶ್ವವನ್ನೇ ಆಕರ್ಷಿಸುವ ಶಕ್ತಿ ಈ ಕಿರಣಕ್ಕೆ ಬಂದಿತು.

ನಿಜವಾದ ಶಾಂತಿದೂತರು ಭಾರತದಲ್ಲಿ ಕಾಣಿಸಿಕೊಂಡರು. ಅವರು ತಮ್ಮ "ಸತ್ಯ- ಅಹಿಂಸೆ" ಯ ಬಲದಿಂದ ವಿಶ್ವವನ್ನೇ ಚಕಿತ ಮಾಡಿದರು. ಅವರು ಮಹಾತ್ಮಾ ಗಾಂಧಿ. ಅವರ "ರಾಷ್ಟ್ರೀಯತೆ" ಯು "ಉದಾರ" ರಾಷ್ಟ್ರೀಯತೆಯಾಗಿತ್ತು.

ಗಾಂಧೀಜಿಯ ಪ್ರಯೋಗದಿಂದ ಯುರೋಪೀಯ ರಾಜಪಟುಗಳಿಗೆ ಸಮಸ್ಯೆಗಳನ್ನು ಬಗೆಹರಿಸಲು ಅಂತರ್ದೃಷ್ಟಿದೊರೆಯಿತು.

ಕೆಲದಿನಗಳ ಹಿಂದೆ ಜರ್ಮನಿಯ ಒಂದು ಪತ್ರಿಕೆಯಲ್ಲಿ ಹೀಗೆ ಉದ್ಗಾರ ಬಂದಿತ್ತು. "If we could cry "quit Germany" Unfortunately Germany is not India and we have no Gandhi among ourselves"

ಇಂದು ರಶಿಯಾವು ಅಮೇರಿಕೆಯ ಮಾರ್ಶಲ ಯೋಜನೆಯನ್ನು ಕಡ್ಡಾಯವಾಗಿ ವಿರೋಧಿಸುತ್ತಿದೆ. ಅದರಂತೆ ಅಟ್ಲಾಂಟಿಕ್ ಒಪ್ಪಂದವನ್ನು ಪ್ರೆಸಿಡೆಂಟ ಟ್ರುಮನ್ನರು ಸಾಮ್ಯವಾದಿಗಳ ಪ್ರಸಾರವನ್ನು ತಡೆಯಲು ಯುರೋಪಿಯ ರಾಷ್ಟ್ರಗಳಿಗೆ ಸೈನಿಕ ಮತ್ತು ಶಸ್ತ್ರಶಕ್ತಿಯನ್ನು ಬೆಳಸಿಕೊಳ್ಳಲು ಅಪರಿಮಿತ ಡಾಲರುಗಳನ್ನು ನೀಡುತ್ತಿದ್ದಾರೆ. ಏನೇ ಇರಲಿ. ಅಮೇರಿಕೆಯು ಡಾಲರ ಬಂಡವಾಳಶಾಹಿ ಪದ್ಧತಿಯನ್ನು ಹಬ್ಬಿಸಲು ಹವಣಿಸುತ್ತಿದೆ ಎಂದು ಸ್ಪಷ್ಟವಾಗುತ್ತಿದೆ.

ಲುಯೀ ಫಿಶರ ಹೇಳಿದಂತೆ "ಕಾರಾಗೃಹಗಳು ಸಾಮ್ಯವಾದವನ್ನು ನಾಶಮಾಡಲಾರವು- ಬ್ರಿಟಿಶ ಕಾರಾವಾಸವು ಗಾಂಧಿಯನ್ನು ಕೊಲ್ಲಲಿಲ್ಲ. ಒಬ್ಬ ಭಾರತೀಯ (?) ನು ಅವರನ್ನು ಕೊಂದನು."

ಆದುದರಿಂದ ಇಂದು ಕಮ್ಯುನಿಜ್ಮ ಮತ್ತು ಫಾಸಿಜ್ಮ ಮನೋವೃತ್ತಿಯನ್ನು ದೂರ ಮಾಡಲು ರಚನಾತ್ಮಕ ಕಾರ್ಯಗಳು ಬೇಕು. ಜುಲುಮೆ (oppression) ಬೇಡ.

ಇಂದಿನ ಆರ್ಥಿಕ ವಿಷಮತೆಯೇ ವಿಶ್ವಶಾಂತಿಗೆ ಬಾಧಕವಾಗಿದೆ. ಕಾರಣ ಇಂದು ಅಮೇರಿಕೆಯಂತಹ ಸಮೃದ್ಧ ರಾಷ್ಟ್ರದ ಕರ್ತವ್ಯವು ಬಡರಾಷ್ಟ್ರಗಳಿಗೆ ರಚನಾತ್ಮಕ ಕಾರ್ಯಕ್ಕೆ ಸಹಾಯನೀಡುವದು. ಆರ್ಥಿಕ ವಿಷಮತೆಯನ್ನು ದೂರಮಾಡಿದ ಹೊರತು ವಿಶ್ವಶಾಂತಿಯು ಅಸಂಭವ.

ಈ ವಿಷಮತೆಯನ್ನು ದೂರಮಾಡಲು ಗಾಂಧಿಯವರು ಜೀವನದ ಅಂತ್ಯದವರೆಗೆ ಹೆಣಗಿದರು. ಅವರ ಪ್ರಯೋಗಗಳು ನಮ್ಮ ಮುಂದಿವೆ. ಅವನ್ನು ನಾವು ಚನ್ನಾಗಿ ಉಪಯೋಗಿಸಿಕೊಳ್ಳಬಹುದು.

---

ಪಾಕಿಸ್ತಾನದಲ್ಲಿಯ ಗುರುದ್ವಾರಗಳು ತಮ್ಮ ಕರೆಗೆ ಬರುವಂತೆ ಸಂಯುಕ್ತರಾಷ್ಟ್ರ ಸಂಘದ ಮುಖಾಂತರ ಹೋರಾಡಬೇಕೆಂದು ಅಂಬಾಲಾ ಜಿಲ್ಹೆಯಲ್ಲಿಯ ಗುರುದ್ವಾರ ಕಮಿಟಿಗಳು ೩೦೦ ಅಧಿಕಾರಿಗಳು ಸಭೆ ಸೇರಿ ನಿರ್ಣಯಿಸಿದರು. ಈ ಬಗ್ಗೆ ತಜ್ಞರ ಒಂದು ಸಮಿತಿಯನ್ನು ನೇಮಿಸಲಾಯಿತು

## ರೂಪರಂಗ

# ಭಾರತದ ಚಲಚ್ಚಿತ್ರ ಉದ್ದಿಮೆ

### ಕೆಲ ಕುಂದು ಕೊರತೆಗಳು

ಈಚೆಗೆ ಭಾರತದ ಚಲಚ್ಚಿತ್ರ ಸಂಘದವರು ಭಾರತ ಸರಕಾರಕ್ಕೆ ಒಂದು ಮನವಿಯನ್ನೊಪ್ಪಿಸಿ ಉದ್ಯಮಕ್ಕೆ ಸಂಬಂಧಿಸಿದ ಕೆಲ ಅಂಶಗಳನ್ನು ಸರಕಾರದ ಗಮನಕ್ಕೆ ತಂದಿದ್ದಾರೆ.

ಸ್ವಾಭಾವಿಕವಾಗಿ, ಈ ಮನವಿಯಲ್ಲಿ ಒತ್ತಿ ಹೇಳಿದ ವಿಷಯವೆಂದರೆ, ಕರಭಾರದ್ದು. ಕರಭಾರದ ಪ್ರಶ್ನೆಯನ್ನು ಇಡಿಯಾಗಿ ಪುನರ್ವಿಮರ್ಶಿಸಬೇಕೆಂದು ಅದರಲ್ಲಿ ಕೇಳಿಕೊಳ್ಳಲಾಗಿದೆ. ಆದರೆ ಇತರ ಉದ್ದಿಮೆಗಳ ಮೇಲೆ ಹೇರಿದ ಮೇರೆಗೇ ಕರವನ್ನು ಹೇರಲು ಸಂಘವು ಯಾವ ಆಕ್ಷೇಪವನ್ನೂ ಎತ್ತಿಲ್ಲ. ಈ ಉದ್ದಿಮೆಯ ಮೇಲೆಯೆ ವಿಶೇಷವಾಗಿ ಹೊರಿಸಲ್ಪಟ್ಟಿರುವ ಕರಗಳ ಬಗೆಗಷ್ಟೇ ಅದರ ಆಕ್ಷೇಪವಿತ್ತು.



"ಫೇವರಿಟ್ ಫಿಲ್ಮ್" ನವರ "ರೂಪಲೇಖಾ" ಚಿತ್ರದಲ್ಲಿ ಶ್ಯಾಮಾ ಮತ್ತು ಗುಲ್ನಾರರ ನಡುವೆ ಸಾಹಸನಟ ಭಗವಾನ್

ಉದಾಹರಣೆಗಾಗಿ, ಸ್ವದೇಶೀ ಉದ್ಯೋಗವಾದ ಉಜ್ವಲ ಭವಿತವ್ಯವುಳ್ಳ ಈ ಉದ್ದಿಮೆಯ ಮೇಲೆ ಕಚ್ಚಾ ಸರಕುಗಳಿಗೂ ಯಂತ್ರಾದಿ ಮೂಲ ಸಾಮಗ್ರಿಗಳ ಮೇಲೂ ಪ್ರಾಂತಿಕ ಸರಕಾರಗಳೂ ನಗರ ಸಭೆಗಳೇ ಮೊದಲಾದ ಸಂಸ್ಥೆಗಳೂ ಕರ ಹೊರಿಸುವುದು ಉಚಿತವಲ್ಲೆಂದು ಮನವಿಯ ಅಭಿಪ್ರಾಯ. ಸಾಮಾನ್ಯ ಕರಗಳಲ್ಲದೆ ಮನೋರಂಜನ ತೆರಿಗೆ, ಥಿಯೇಟರ ತೆರಿಗೆ, ಸುಂಕ, ಆಯಾತ ಸುಂಕ, ಮೊದಲಾದ ಅನೇಕ ಕರಗಳನ್ನು ತೆರಬೇಕಾಗುತ್ತದೆ. ಮುಖ್ಯವಾಗಿ ಮನೋರಂಜನ ತೆರಿಗೆಗಳನ್ನು ಯುದ್ಧಕಾಲಕ್ಕಿಂತ ಎಷ್ಟೋ ಹೆಚ್ಚು ಮಾಡಲಾಗಿದೆ. ಇದು ತಾತ್ಕಾಲಿಕ ಕ್ರಮವೆಂದು ಆಗ ಪ್ರಾಂತಿಕ ಸರಕಾರಗಳು ಭರವಸೆ ಕೊಟ್ಟಿದ್ದರೂ ಅದು ಶಾಶ್ವತವಾಗುವ ಲಕ್ಷಣಗಳಿವೆ. ಕೆಲ ಪ್ರಾಂತಗಳಲ್ಲಿ ಇದು ನೂರಕ್ಕೆ ಎಪ್ಪತ್ತೈದರಷ್ಟೂ ಇದೆ. ಯುದ್ಧಪೂರ್ವದಲ್ಲಿ ಇದು ಕೇವಲ ೧೨॥ ಇತ್ತು. ಎಲ್ಲ ಕಡೆಗೂ ಆರ್ಥಿಕ ಮುಗ್ಗಟ್ಟು ತಲೆಯೆತ್ತಿರುವ ಈ ಕಾಲದಲ್ಲಿ ಈ ಬಗೆಯ ತೆರಿಗೆಯಿಂದ ಉದ್ದಿಮೆಗೆ ಧಕ್ಕೆ ತಗಲುತ್ತಿದೆ. ಈಗಾಗಲೆ ಕೆಲ ಪ್ರಾಂತಗಳಲ್ಲಿ ಈ ತೆರಿಗೆಯಿಂದ ಬರುವ ಉತ್ಪನ್ನ ಇಳಿಮುಖವಾಗಿದೆಯಂತೆ.

ಚಿಕ್ಕ ಪುಟ್ಟ ನಗರಗಳಲ್ಲಿರುವ ಪ್ರದರ್ಶನ ಮಂದಿರಗಳಿಗೆ ಈ ಮನೋರಂಜನಕರದಿಂದ ವಿಶೇಷ ಹಾನಿಯಾಗಿದೆ. ಈ ಕರಭಾರವನ್ನು ಹೊತ್ತು ಅವು ಲಾಭಕರವಾಗಿ ನಡೆಯಲಾರವಾದುದರಿಂದ ಅವುಗಳ ವಿಚಾರವನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕೆಂದು ಒತ್ತಾಯಪಡಿಸಲಾಗಿದೆ. ಈ ವಿಷಯದಲ್ಲಿ ಮನವಿಯು ಬ್ರಿಟಿಶ ಸರಕಾರದ ಕ್ರಮವನ್ನು ಭಾರತ ಸರಕಾರದ ಪರಾಂಬರಿಕೆಗಾಗಿ ಉದಾಹರಿಸಿದೆ. ಅಲ್ಲಿ ೪೦೦ ಕ್ಕಿಂತ ಕಡಿಮೆ ಆಸನಗಳಿರುವ ಮಂದಿರಗಳಿಗೆ ಮತ್ತು ಚೌ. ಮೈಲಿಗೆ ೩೪೦ ಕ್ಕಿಂತ ಕಡಿಮೆ ಜನಸಂಖ್ಯೆಯಿರುವ ಪ್ರದೇಶಗಳಲ್ಲಿ ಮನೋರಂಜನಕರವನ್ನು ಮಾಫಿ ಮಾಡಲಾಗಿದೆ. ಅದೇ ಪ್ರಕಾರ ಇಲ್ಲಿಯೂ ೪೦,೦೦೦ ಕ್ಕಿಂತ ಕಡಿಮೆ ವಸತಿಯುಳ್ಳ ಸ್ಥಳಗಳಲ್ಲಿ ಚಿತ್ರಮಂದಿರಗಳ ಮೇಲಿನ ಕರಭಾರವನ್ನು ಕಡಿಮೆ ಮಾಡಬೇಕೆಂದು ಒತ್ತಾಯಗೊಳಿಸಲಾಗಿದೆ.

## ನ್ಯೂ ಥಿಯೇಟರ್ಸಿನವರ "ಭೋಟಾ ಭಾಯಿ"

ಹಲಗಾಲದಿಂದ ಹಿಂದೀ ಭಾಷೆಯ ಚಿತ್ರರಂಗದಿಂದ ಅಸ್ತಂಗತವಾಗಿರುವ "ನ್ಯೂ ಥಿಯೇಟರ್ಸ್" ಕಂಪನಿಯವರು ಈಗ ಪುನಃ ತಮ್ಮ ಹಳೆಯ ಪ್ರಸಿದ್ಧಿಯನ್ನು ಪುನರುಜ್ಜೀವಿಸಬಲ್ಲ ಚಿತ್ರಗಳನ್ನು ರಚಿಸತೊಡಗಿರುವುದು ಭಾಗ್ಯವೇ ಸರಿ. ಚಲಚ್ಚಿತ್ರ ಕ್ಷೇತ್ರದಲ್ಲಿ ಬುದ್ಧಿಗೂ ಕಣ್ಣಿಗೂ ಸೇರಿಯೆ ಹಬ್ಬ ಮಾಡುವ ಚಿತ್ರಗಳನ್ನು ತಯಾರಿಸುತ್ತಿದ್ದ ಕಂಪನಿಗಳು ಮೂರಕ್ಕಿಂತ ಹೆಚ್ಚು ಯಾವ ಕಾಲದಲ್ಲಿಯೂ ಇದ್ದಿಲ್ಲವೆನ್ನಬಹುದು. ಅದರಲ್ಲಿ ಕಲಕತ್ತೆಯ ನ್ಯೂಥಿಯೇಟರ್ಸ್ ಕಂಪನಿ ಒಂದಾಗಿತ್ತು. ದೇವಕಿ ಬೋಸ, ನಿತಿನ ಬೋಸ, ಬರುವಾರಂಥ ಉದ್ದಾಮ ದಿಗ್ದರ್ಶಕರೂ ದಿವಂಗತ ಸೈಗಾಲ, ಸನ್ಯಾಲ, ಕೆ. ಸಿ. ಡೇ, ಕಾನನಬಾಲಾ, ಉಮಾ ಮೊದಲಾದ ಅಮರ ನಟನಟಿಯರೂ ಆ ಕಂಪನಿಯ ಮೂಲಕ ಬೆಳಕಿಗೆ ಬಂದರು, ಬೆಳಕು ನೀಡಿದರು. ಕೇವಲ ಅಗ್ಗವಾದ ಜನಪ್ರಿಯತೆಗಾಗಲಿ ಹಣಕ್ಕಾಗಲಿ ಮರುಳಾಗದೆ ನಿಜವಾದ ಕಲೆಯನ್ನು ನಿರ್ಮಿಸಲು ಹೆಣಗುತ್ತಿದ್ದುದು ಅದರ ವೈಶಿಷ್ಟ್ಯವಾಗಿತ್ತು. ಆದರೆ ಈಚೆಗೆ ಕೆಲಕಾಲದಿಂದ ಅದು ಹಿಂದೀ ಚಿತ್ರಗಳನ್ನು ನಿರ್ಮಿಸುವದನ್ನು ಬಿಟ್ಟುಕೊಟ್ಟಿದ್ದರಿಂದ ಅನೇಕ ರಸಿಕರಿಗೆ ತುಂಬಾ ನಿರಾಶೆಯಾಗಿತ್ತು.

ಈಗ "ಭೋಟಾಭಾಯಿ"ಯೆಂಬ ಹೊಸ ಚಿತ್ರದೊಡನೆ ನ್ಯೂ ಥಿಯೇಟರ್ಸಿನವರು ಪುನಃ ಚಲಚ್ಚಿತ್ರಾಕಾಶದಲ್ಲಿ ಉದಯಿಸಿದ್ದಾರೆ. ಮುಂಬಯಿಯಲ್ಲಿ ಸಾಮಾನ್ಯವಾಗಿ ನ್ಯೂ ಥಿಯೇಟರ್ಸಿನ "ರಹಸ್ಯವಾದಿ" ಚಿತ್ರ"ಗಳನ್ನು ಮನೋರಂಜನೆಯ ಅಭಾವಕ್ಕಾಗಿ ಟೀಕಿಸುತ್ತಿದ್ದ ವಿಮರ್ಶಕರು ಕೂಡ ಈ ಚಿತ್ರವನ್ನು ಹೊಗಳಿದ್ದಾರೆ. ಈ ಚಿತ್ರ ಕೆನಡಾದಲ್ಲಿ ರಾಷ್ಟ್ರೀಯ ಪ್ರದರ್ಶನದಲ್ಲಿ ಪ್ರದರ್ಶಿಸಲು ಆರಿಸಲ್ಪಟ್ಟಿದೆಯೆಂದ ಮೇಲೆ ಅದರ ಯೋಗ್ಯತೆ ಗೊತ್ತಾದೀತು.

"ಭೋಟಾಭಾಯಿ"ಯ ಕಥೆ ಪ್ರಸಿದ್ಧ ಬಂಗಾಲಿ ಕಾದಂಬರಿಕಾರ ಶರಚ್ಚಂದ್ರ ಚಟರ್ಜಿಯವರ "ರಾಮಲಾಲೇರ ಸುಮತಿ"ಯ ರೂಪಾಂತರ "ಸುಮತಿ"ಯೆಂಬ ಹೆಸರಲ್ಲಿ ಈ ಕತೆ ಕನ್ನಡದಲ್ಲಿಯೂ ಈಗಾಗಲೆ ಪ್ರಕಟವಾಗಿದೆ. ಇದು ಪ್ರಣಯಕಥೆಯೂ ಅಲ್ಲ. ವೀರಕಥೆಯೂ ಅಲ್ಲ. ಉಗ್ರ ಸ್ವಭಾವದ ರಾಮಲಾಲನೆಂಬ ತಾಯಿಲ್ಲದ ತುಂಟ ಹುಡುಗನನ್ನು ಅವನ ಮಲತಾಯಿ ಅತ್ಯಂತ ಪ್ರೇಮದಿಂದ ಸಾಕಿ ಸಲಹಿ ಅವನನ್ನು ಸರಿದಾರಿಗೆ ಹಚ್ಚಿ ಪಳಗಿಸುವದೇ ಕಥೆಯ ವಸ್ತು. ಅದನ್ನು ದಿಗ್ದರ್ಶಕ ಕಾರ್ತಿಕ ಚಟರ್ಜಿ (ಅವರ ಹೆಸರನ್ನು ಚಲಚ್ಚಿತ್ರ ಜಗತ್ತು ಇದೇ ಮೊದಲು ಕೇಳುತ್ತಿರುವುದಾದರೂ ಅತ್ಯಂತ ಕೌಶಲದಿಂದ ಚಿತ್ತವೇಧಕವಾಗುವಂತೆ ಚಿತ್ರೀಕರಿಸಿದ್ದಾರೆ. ಮಲಿನಾ ರಾಜಲಕ್ಷ್ಮಿ, ಠಕೂರ, ಪಾಲ ಮಹೀಂದ್ರ ಮೊದಲಾದ ನಟ ನಟಿಯರು ಅಭಿನಯಿಸಿದ್ದಾರೆ.

## ಜೆಮಿನಿಯವರ ಹೊಸ ಸಾಹಸ

"ಚಂದ್ರಲೇಖಾ" ದಿಂದ ಅಖಿಲ ಭಾರತದಲ್ಲಿ ಪ್ರಸಿದ್ಧಿ ಹೊಂದಿದ ಮದ್ರಾಸಿನ ಜೆಮಿನಿ ಕಂಪನಿಯವರು ಇದೀಗ ಇನ್ನೊಂದು ಹೊಸ ಹಿಂದೀ ಚಿತ್ರವನ್ನು ತೆಗೆಯ ಹೊರಟಿದ್ದಾರೆಂದು ಸುದ್ದಿ ಬಂದಿದೆ. "ಚಂದ್ರಲೇಖಾ" ಯಂತೆ ಇದೂ ಉಭಯ ಭಾಷೆಗಳಲ್ಲಿ (ತಮಿಳು—ಹಿಂದೀ) ಹೊರಡಲಿದೆ. ಈಗಾಗಲೆ ಕಾರ್ಯಪ್ರಾರಂಭವಾದ ಈ ಚಿತ್ರದ ಹೆಸರು "ನಿಶಾನ್" ಎಂದಿರುವುದು. ಪ್ರಸಿದ್ಧ ಫ್ರೆಂಚ್ ಕಾದಂಬರಿಕಾರನಾದ ಅಲೆಗ್ಝಾಂಡರ್ ಡ್ಯೂಮಾಸನ ಒಂದು ಕಥೆಯನ್ನು ಅವಲಂಬಿಸಿ ರಚಿಸಲಾದ ಈ ಕಥಾಸನ್ನಿವೇಶ ತುಂಬ ಆಕರ್ಷಕವಾಗಿದೆಯೆಂದು ಹೇಳಲಾಗಿದೆ. ಅಧಿಕಾರಪಿಪಾಸೆ, ಪ್ರಣಯ, ದ್ವೇಷ, ಪ್ರತೀಕಾರ ಮೊದಲಾದ ಮಾನವ ವಿಕಾರಗಳನ್ನು ಚಿತ್ರಿಸುವ ಈ ಕಥೆಯನ್ನು ಅತ್ಯಂತ ಚಾತುರ್ಯದಿಂದ ಚಿತ್ರೀಕರಿಸಿ ಅಕ್ಟೋಬರ ಮಧ್ಯದಲ್ಲಿ ಉತ್ತರ ಭಾರತದಲ್ಲಿ ಪ್ರದರ್ಶನಕ್ಕೆ ತೆಗೆಯಲಾಗುವದು. ಈ ಕಥೆಯನ್ನು ಚಲನಚಿತ್ರಕ್ಕೆ ಸರಿ ಹೋಗುವಂತೆ ರಚಿಸಲು ನಾಲ್ಕು ವರ್ಷಕಾಲ ತಗಲಿದೆಯೆಂದು ಜೆಮಿನಿ ಕಂಪನಿಯವರು ತಿಳಿಸುತ್ತಾರೆ.

# ಮೂಲೆ ಮೂಲೆಗಳಿಂದ

ಭಾರತದ ಮಾಸ್ಕೋ ರಾಯಭಾರಿ **ಡಾ. ರಾಧಾಕೃಷ್ಣನ್ನರು** ಮುಂಬಯಿಯಿಂದ ಆಕಾಶಮಾರ್ಗವಾಗಿ ಲಂಡನ್ನಿನಲ್ಲಿಳಿದವರು ವಿಶ್ವಶಾಂತಿಯೇ ತಮ್ಮ ಧ್ಯೇಯವಾಗಿರುವದರಿಂದ ತಾವು ಮಾಸ್ಕೋದಲ್ಲಿ ಆಂಗ್ಲೋ-ಅಮೇರಿಕನ್ನರಿಗೂ ರಶಿಯಕ್ಕೂ ಇರುವ ವೈಮನಸ್ಯವನ್ನು ಕಡಿಮೆ ಮಾಡಲು ಪ್ರಯತ್ನಿಸುವದಾಗಿ ಹೇಳಿದರು.

ಈಚೆಗೆ ಭಾರತದಲ್ಲಿ ಹಬ್ಬುತ್ತಿರುವ **ಶಿಶುಗಳ ಪಾರ್ಶ್ವವಾತ** (ಪೋಲಿಯೋ) ರೋಗದ ಚಿಕಿತ್ಸೆಗೆ ಉಪಯೋಗ ಬೀಳುವ ಕಬ್ಬಿಣದ ೨೪ ಪುಪ್ಪುಸಗಳನ್ನು ಅಮೇರಿಕೆಯಿಂದ ಭಾರತಕ್ಕೆ ಕಳಿಸಲಾಗಿದೆ. ಅಮೇರಿಕೆಯಲ್ಲಿಯೂ ಈ ಪಿಡುಗು ಈ ವರ್ಷ ಹೆಚ್ಚಿದೆಯಂತೆ.

ಕಮ್ಯುನಿಸ್ಟ ಶಿಬಿರದಲ್ಲಿ "ದಂಗೆಗಾರ"ನಾದ ಯುಗೋಸ್ಲಾವಿಯದ ಸರ್ವಾಧಿಕಾರಿ **ಟಿಟೋನ** ವಿರುದ್ಧ ಮಾಸ್ಕೋ ದೇವತೆಗಳು ಕೈಕೊಂಡಿರುವ ಈಚಿನ ಕ್ರಮಗಳೆಂದರೆ, ರಶಿಯದ ಮತ್ತು ರುಮೇನಿಯದ ಸೈನ್ಯಗಳನ್ನು ಯುಗೋಸ್ಲಾವಿಯ ಗಡಿಯತ್ತ ಸಾಗಿಸುತ್ತಿರುವದೂ ಕಾಮಿನ್‌ಫಾರ್ಮ ಸಂಸ್ಥೆಯ ಸಭೆ ಕರೆದು ಅವನ ವಿರುದ್ಧ ಇನ್ನಷ್ಟು ಉಗ್ರ ಪ್ರಚಾರ ಕ್ರಮ ಕೈಕೊಳ್ಳುವದೂ ಆಗಿವೆ. ಯುಗೋಸ್ಲಾವಿಯದ ಮುಖ್ಯ ಕಲ್ಲಿದ್ದಲ ಗಣಿಗಳಲ್ಲಿ ಈಚೆಗೆ ಆದ ಬೆಂಕಿ ಅನಾಹುತ ಮತ್ತು ಕೆಲ ರೇಲ್ವೆ ಅಪಘಾತಗಳು ರಶಿಯಾ ಪ್ರೇರಿತ ಗುಪ್ತಚಾರರ ಕಾರ್ಯವಿರಬೇಕೆಂದು ಊಹಿಸಲ್ಪಟ್ಟಿವೆ.

ಸ್ಟ್ರಾಸ್‌ಬರ್ಗಿನ **ಯೌರೋಪ್ಯ ಪರಿಷತ್ತಿನಲ್ಲಾದ** ಮಹತ್ವದ ನಿರ್ಣಯಗಳಲ್ಲಿ, ಪಶ್ಚಿಮ ಯುರೋಪಿನ ರಾಷ್ಟ್ರಗಳ ನಡುವೆ ದೃಢತರವಾದ ರಾಜಕೀಯ ಒಕ್ಕೂಟವನ್ನು ಸಾಧಿಸುವ ಉಪಾಯಗಳನ್ನೊಳಗೊಂಡ ವರದಿಯನ್ನು ಸಿದ್ಧಪಡಿಸಲು ಒಂದು ಸಮಿತಿಯನ್ನು ನೇಮಿಸಿದ್ದಾಗಿದೆ.

**ಬ್ರಿಟನ್ನಿನ ಡಾಲರ ಕೊರತೆಯ** ಬಿಕ್ಕಟ್ಟಿನ ವಿಷಯದಲ್ಲಿ ಬ್ರಿಟಿಶ-ಅಮೇರಿಕನ್ ಸರಕಾರಗಳ ನಡುವೆ ವಾಶಿಂಗ್‌ಟನ್ನಿನಲ್ಲಿ ಚರ್ಚೆ ಪ್ರಾರಂಭವಾಗಿದೆ.

ಭಾರತದಲ್ಲಿ **ದರಿದ್ರ ಮಕ್ಕಳ** ಸಹಾಯಾರ್ಥ ಸಂ. ರಾ. ಸಂಘದ ಮಕ್ಕಳ ನಿಧಿಯಿಂದ ೭,೫೦,೦೦೦ ಡಾಲರುಗಳನ್ನು (ರೂ. ೨೫ ಲಕ್ಷ) ವೆಚ್ಚ ಮಾಡಬೇಕೆಂದು ನಿರ್ಣಯಿಸಲಾಗಿದೆ. ಕ್ಷಯರೋಗ ನಿವಾರಣೆ, ಮಲೇರಿಯ ಜ್ವರ ನಿವಾರಣೆ, ಮಕ್ಕಳ ಡಾಕ್ಟರರ ತರಬೇತಿಗೆ ಶಿಷ್ಯವೃತ್ತಿಗಳೇ ಮೊದಲಾದವುಗಳಿಗೆ ಈ ಹಣದ ವಿನಿಯೋಗವಾಗುವದು.

ಮಲಯದಲ್ಲಿ ತಮ್ಮ ಸುರಕ್ಷಿತತೆಗಾಗಿ ಭಯೋತ್ಪಾದಕರಿಗೆ "ಕಪ್ಪಕಾಣಿಕೆ" ಕೊಟ್ಟದ್ದಕ್ಕಾಗಿ ಬಂಧಿಸಲ್ಪಟ್ಟ ೧೮ ಶ್ರೀಮಂತ ಭಾರತೀಯರ **ಚೆಟ್ಟಿಯಾರ** ರಲ್ಲಿ ೧೦ ಜನರ ಬಿಡುಗಡೆಯಾಗಿದೆ.

ಬ್ರಹ್ಮದೇಶದಲ್ಲಿ ಡಕಾಯಿತರು ಮಹಮದ ಹಾಶಿಮ ಇಸ್ಮಾಯಿಲರೆಂಬ ಭಾರತೀಯ ವ್ಯಾಪಾರಿಯನ್ನು ಅಪಹರಿಸಿಕೊಂಡು ಹೋಗಿ ಅವರನ್ನು ಬಿಡಬೇಕಾದರೆ ೧೦ ಲಕ್ಷ ರೂಪಾಯಿಯ ಕಾಣಿಕೆ ಬೇಡಿದ್ದಾರೆ. ಈ ಸಂಬಂಧದಲ್ಲಿ ಮೂವರು ಬ್ರಹ್ಮೀಯರ ಬಂಧನವಾಗಿದೆ.

**ಇಂಡೋನೇಶಿಯದ ಸ್ವಾತಂತ್ರ್ಯದ** ಸಂಬಂಧದಲ್ಲಿ ಹೇಗ (ಹಾಲಂಡ್) ದಲ್ಲಿ ನಡೆದಿರುವ ದುಂಡುಮೇಜಿನ ಪರಿಷತ್ತಿನಲ್ಲಿ ಪ್ರಜಾರಾಜ್ಯ ಮತ್ತು ಸಂಯುಕ್ತ ರಾಜ್ಯವಾದಿ ಪಕ್ಷಗಳು ಒಂದಾಗಿ ಇಂಡೋನೇಶಿಯದ ಸ್ವತಂತ್ರ ಸಂಯುಕ್ತ ಪ್ರಜಾರಾಜ್ಯದ ಘಟನೆಯ ವಿಷಯದಲ್ಲಿ ಒಮ್ಮತದ ಪ್ರಯತ್ನ ಮಾಡುತ್ತಿವೆ. ಈ ವರೆಗೆ ಪರಿಷತ್ತಿನಲ್ಲಿ ಒಳಿತಿನ ಸುದ್ದಿಯುಂಟು.

**ಉತ್ತರ ಅಟ್ಲಾಂಟಿಕ ಒಪ್ಪಂದದ** ಉದ್ದೇಶ ಶಾಂತಿ ರಕ್ಷಣೆಯೇ ಆಗಿದೆಯೆಂದು ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರು ಒಂದು ಸಮಾರಂಭದಲ್ಲಿ ಹೇಳಿದರು. ಒಪ್ಪಂದದಲ್ಲಿ ಭಾಗಿಗಳಾದ ೧೨ ರಾಷ್ಟ್ರಗಳೂ ಈಗ ಅದಕ್ಕೆ ಅಂಕಿತವಿಕ್ಕಿದ್ದು ಅದು ಈಗಾಗಲೆ ಜಾರಿಗೆ ಬಂದಿದೆ.

ಭಾರತದ ವಿಭಜನೆಯ ಮೊದಲೇ ಪಡಗಿಪನಾವಿಕರಾಗಿ ಅಮೇರಿಕೆಗೆ ಹೋಗಿದ್ದ **೩೭ ಮುಸ್ಲಿಮರು** ಪಾಕಿಸ್ತಾನದ ಪ್ರಜೆಗಳಾಗಿ ಮರಳುವುದಕ್ಕಿಂತ ಬ್ರಿಟನ್ನಿನ ಪ್ರಜೆಗಳಾಗಲು ಅಪೇಕ್ಷಿಸಿ ಅಮೇರಿಕೆಯಲ್ಲೇ ಉಳಿದಿದ್ದಾರೆ. ಅವರನ್ನು ಬಂಧನದಲ್ಲಿರಿಸಲಾಗಿದೆ.

ಆಗ್ನೇಯ ಏಶಿಯವನ್ನೂ ಅನಂತರ ಸಮಸ್ತ ಏಶಿಯವನ್ನೂ ಕಮ್ಯುನಿಸ್ಟರು ನುಂಗಬಾರದೆಂದಿದ್ದರೆ **ಬ್ರಿಟಿಶ್ ಸರಕಾರಕ್ಕೆ** ಮಿಲಿಟರಿ ಸಹಾಯ ನೀಡುವುದೊಂದೇ ಪಾಶ್ಚಾತ್ಯ ರಾಷ್ಟ್ರಗಳಿಗಿರುವ ಹಾದಿಯೆಂದು ಬ್ರಿಟಿಶ್ ಉಪಮುಖ್ಯ ಮಂತ್ರಿ ಜನರಲ್ ನೇ ವಿನ್ನರು ಕರಾಚಿಯಲ್ಲಿ ಹೇಳಿದರು.

ಭಾರತಕ್ಕೆ ಇಂಗ್ಲಂಡಿನಿಂದ ಬರಬೇಕಾದ ಯುದ್ಧಕಾಲದ **ಸ್ಟರ್ಲಿಂಗ್ ಸಾಲಗಳ ಹೊಣೆಯನ್ನು** ಅಮೇರಿಕೆ ತಾನೇ ವಹಿಸಿಕೊಳ್ಳಬಹುದೆಂದು ಸುದ್ದಿಯಿದ್ದಿದೆ.

ಸಂ. ರಾ. ಸಂಘದ ಸದಸ್ಯತ್ವಕ್ಕೆ ನೇಪಾಳದ ಅರ್ಜಿಯನ್ನು ಸ್ವೀಕರಿಸಲು ಸೋವಿಯೆಟ್ ಪ್ರತಿನಿಧಿ ವಿರೋಧಾಭಿಪ್ರಾಯಪಟ್ಟನು. ಪೂರ್ವ ಯುರೋಪಿನ ರುಮೇನಿಯಾ, ಬಲ್ಗೇರಿಯಾ ಮೊದಲಾದ ರಾಷ್ಟ್ರಗಳಿಗೆ ಪ್ರವೇಶ ಕೊಡದಿರುವುದೇ ಈ ವಿರೋಧಕ್ಕೆ ಕಾರಣ. ಸದಸ್ಯತ್ವ ಸಮಿತಿ ಈ ಅರ್ಜಿಯನ್ನು ಸ್ವೀಕರಿಸಿದ್ದರೂ ಭದ್ರತಾ ಮಂಡಲದಲ್ಲಿ ಅದರ ವಿರುದ್ಧ ರಶಿಯ ತನ್ನ ಪ್ರತಿಬಂಧಾಧಿಕಾರವನ್ನು ಪ್ರಯೋಗಿಸುವುದು ಖಂಡಿತವೆಂದು ತೋರುತ್ತದೆ.

ಭಾರತದ **ಉಪವಿದೇಶಮಂತ್ರಿ ಡಾ. ಬಿ. ವಿ. ಕೇಸಕರರು** ಅಫಗಾನಿಸ್ತಾನಕ್ಕೆ ಹೋಗಿದ್ದು ಕಾಬೂಲಿನಲ್ಲಿ ಅಫಗಾನ ಅರಸರನ್ನು ಕಂಡು ಭಾರತದ ಶುಭಾಶಯಗಳನ್ನರ್ಪಿಸಿದರು.

**ಚಿಯಾಂಗ್ ಕೈಶೇಕರು** ಚೀನದಲ್ಲಿ ಕಮ್ಯುನಿಸ್ಟರ ವಿರುದ್ಧ ಪ್ರತಿದಾಳಿಯನ್ನು ಕೈಕೊಳ್ಳುವ ಸಲುವಾಗಿ ಯೋಜನೆಯನ್ನು ಸಿದ್ಧಗೊಳಿಸುತ್ತಿರುವರಂತೆ. ಅದಕ್ಕಾಗಿ ಕಳೆದ ವಾರ ಕ್ಯಾಂಟನ್ನಿನಲ್ಲಿ ಸೇನಾಪತಿಗಳ ಪರಿಷತ್ತು ಸೇರಿತ್ತು.

**ಹಿಂದೀ ಸರಕುಗಳನ್ನು ಬಹಿಷ್ಕರಿಸಬೇಕೆಂಬ** ಪಾಕಿಸ್ತಾನ ಪತ್ರಿಕೆಗಳ ಪ್ರಯತ್ನದಲ್ಲಿ ಪಾಕಿಸ್ತಾನ ಸರಕಾರದ ಅಂಗವನ್ನು ಕುರಿತು ಭಾರತ ಸರಕಾರದವರು ಕೇಳಿದ ಸ್ಪಷ್ಟೀಕರಣಕ್ಕೆ ಉತ್ತರವಾಗಿ ಪಾಕಿಸ್ತಾನ ಸರಕಾರವು ವ್ಯಾಪಾರಿ ಒಪ್ಪಂದಗಳನ್ನು ಪೂರ್ಣವಾಗಿ ಪಾಲಿಸಲಿಚ್ಛಿಸುತ್ತಿದೆಯೆಂದು ಆಶ್ವಾಸನ ಬಂದಿದೆ.

ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರು **ಯುರೋಪಿಗೆ ಶಸ್ತ್ರಾಸ್ತ್ರಸಹಾಯ** ಮಾಡಲಿರುವ ಯೋಜನೆಗೆ ಅಮೇರಿಕೆಯ ಕಾಂಗ್ರೆಸ್ಸು (ಶಾಸನ ಸಭೆ) ತಡಮಾಡದೆ ಒಪ್ಪಿಗೆ ಕೊಡಬೇಕೆಂದೂ ಬೆಕ್ಕಿನ ವಿಚಾರ ಬೇರೆಯೆಂದು ಅಮೇರಿಕೆ ಕೂತಿರುವುದು ಕ್ಷೇಮವಲ್ಲೆಂದೂ ಹೇಳಿದರು.

ಇಂಡೋಚೀನದ ಸ್ವಾತಂತ್ರ್ಯವಾದಿ ವಿಯಟ್ ಮಿನ್ಹ ಸರಕಾರದ ಅಧ್ಯಕ್ಷರಾದ **ಡಾ. ಹೋಚಿ ಮಿನ್ಹರು** ಏಶಿಯದಲ್ಲಿ ರಶಿಯಕ್ಕೂ ಆಂಗ್ಲೋ ಅಮೇರಿಕನ್ನರಿಗೂ ನಡೆಯುವ ರಾಜಕೀಯ ತಿಕ್ಕಾಟದಲ್ಲಿ ತಾವು ತಟಸ್ಥರಾಗಿರುವದಾಗಿ ಸಾರಿದ್ದಾರೆ. ಆದರೆ ಇಂಡೋಚೀನದ ಭವಿತವ್ಯದ ಬಗ್ಗೆ ಫ್ರೆಂಚರೊಡನೆ ಒಪ್ಪಂದಮಾಡಿಕೊಂಡ ಹಿಂದಿನ ಅನ್ನಂ ಚಕ್ರವರ್ತಿ ಬಾವೋಡಾಯಿಯನ್ನು ಅವರು ದೇಶದ್ರೋಹಿಯೆಂದು ಕರೆದರು.

**ಪಶ್ಚಿಮ ಜರ್ಮನಿಯ** ಸರಕಾರಕ್ಕೆ ಕ್ರಿಶ್ಚನ್ ಪ್ರಜಾತಂತ್ರ ಪಕ್ಷದ ಡಾ. ಕೊನ್ರಾಡ್ ಅಡೆನಾವರು ಮುಖ್ಯ ಮಂತ್ರಿಗಳಾಗುವರು.

## ಕರ್ನಾಟಕದಲ್ಲಿ

### ಧಾರವಾಡ

ಅಮ್ಮಿನಭಾವಿಯಲ್ಲಿ ಸ್ವಾತಂತ್ರ್ಯೋತ್ಸವದ ದಿನ ಶ್ರೀ ಬಸವರಾಜ ಕೊಲ್ಲಾಪುರ ದೇಸಾಯಿ ಇವರು ಹರಿಜನರನ್ನು ಮೆರವಣಿಗೆಯಿಂದ ಗ್ರಾಮದ ಗುಡಿಗಳಲ್ಲಿ ಪ್ರವೇಶ ಮಾಡಿಸಿದ ಕೆಂದು ೧೭ ಕ್ಕೆ ಮನೆಯಿಂದ ಅವರನ್ನು ಹೊರಗೆಳೆದು ಥಳಿಸಿದರೆಂದು ಅಲ್ಲಿಯ ೧೭ ಜನರ ಮೇಲೆ ಖಟ್ಲೆ ದಾಖಲಾಗಿದೆ. ಮತ್ತು ನಾಲ್ವರನ್ನು ಬಂಧಿಸಿ ಜಾಮೀನಿನ ಮೇಲೆ ಬಿಡಲಾಗಿದೆ.

ಭಾರತ ಸರಕಾರದ ಶಿಷ್ಯವೃತ್ತಿಯನ್ನು ಪಡೆದು ಅಮೇರಿಕೆಗೆ ಹೋಗಿರುವ ಶ್ರೀ ವಿ ಕೇ. ಜವಳಿಯವರು ಈಗ ಹಿಂದುಸ್ಥಾನಕ್ಕೆ ಮರಳಿರುವರು. ಅವರು ಕೊಲಂಬಿಯಾ ವಿಶ್ವವಿದ್ಯಾಲಯದ ಎಂ ಎ ಪದವಿಯನ್ನು ಸಂಪಾದಿಸಿರುವರು. ಅಮೇರಿಕೆಯಿಂದ ಬರುವಾಗ ಇವರು ಇಂಗ್ಲಂಡ ಫ್ರಾನ್ಸನ್ನು ಸಂದರ್ಶಿಸಿ ಬಂದಿರುವರು. ಮುಂಬಯಿ ಸರಕಾರದವರು ಅವರನ್ನು ಅಸಿಸ್ಟಂಟ ಇನಸ್ಪೆಕ್ಟರ ಅಫ್ ಸ್ಕೂಲ್ಸರನ್ನಾಗಿ ನೇಮಿಸಿರುವರು.

ಹಾನಗಲ್ಲಿನಿಂದ ೫ ಮೈಲುಗಳ ಮೇಲಿರುವ ಕೊಪ್ಪರಸಿ ಕೊಪ್ಪದಲ್ಲಿ ಕಳೆದ ಮಂಗಳವಾರ ರಾತ್ರಿ ಜಹದ ಅಂಗಡಿಯ ಪುಟ್ಟಪ್ಪ ಎಂಬವನನ್ನು ಯಾರೋ ಕೊಂದು ಸಾವಿರಾರು ರೂಪಾಯಿಗಳನ್ನು ಅಪಹರಿಸಿಕೊಂಡುಹೋಗಿರುವರೆಂದು ತಿಳಿಯುತ್ತದೆ.

ಹುಬ್ಬಳ್ಳಿ ಸಿನೇಮಾ ಥಿಯೇಟರಿನಲ್ಲಿ ಬೀಡಿ ಸೇದುತಿರುವಾಗ ಹಿಡಿಯಲ್ಪಟ್ಟ ೯ ಜನರಿಗೆ ತಲಾ ೫ ರೂ. ದಂಡ ವಿಧಿಸಲಾಯಿತು. ಬೀಡಿ ಸೇದಕೂಡದೆಂದು ಕಲೆಕ್ಟರರು ನಿರ್ಬಂಧಕ ಹುಕುಮು ಹೊರಡಿಸಿರುವರು.

ಧಾರವಾಡ ತಾಲೂಕಿನ ಬೇಗೂರಲ್ಲಿ ತಾಲೂಕ ಸಬ್ ಇನಸ್ಪೆಕ್ಟರರು ಗುರುಪಾದಯ್ಯಾ ಹಿರೇಮಠ ಇವರ ಮನೆಯನ್ನು ಝಡತಿಮಾಡಲು ಬಂದೂಕು ಸಿಕ್ಕಿತೆಂದೂ ಅದಕ್ಕಾಗಿ ಅವನನ್ನೂ ಅವನ ತಮ್ಮನನ್ನೂ ಬಂಧಿಸಿ ಜಾಮೀನಿನ ಮೇಲೆ ಬಿಟ್ಟರೆಂದೂ ತಿಳಿಯುತ್ತದೆ.

ಪ್ರಾಥಮಿಕ ಶಿಕ್ಷಣಕ್ಕಾಗಿ ಸರಕಾರದವರು ಈಗ ಕೊಡುತಿರುವ ಗ್ರ್ಯಾಂಟು ಸಾಕಷ್ಟಿಲ್ಲ ಅದನ್ನು ಹೆಚ್ಚಿಸಬೇಕು. ಇಲ್ಲವೆ ಶಿಕ್ಷಣದ ಆಡಳಿತೆಯನ್ನು ವಹಿಸಿಕೊಳ್ಳಬೇಕು ಎಂದು ಧಾರವಾಡ ನಗರಸಭೆಯವರು ಸರಕಾರವನ್ನು ಕೇಳಿಕೊಂಡಿದ್ದಕ್ಕೆ ಸರಕಾರದವರು ಎರಡೂ ಬೇಡಿಕೆಗಳಿಗೆ ನಕಾರದ ಉತ್ತರ ಕೊಟ್ಟಿರುವರು. ಕರ ಹೆಚ್ಚಿಸಿ ವೆಚ್ಚ ಪೂರಯಿಸಿಕೊಳ್ಳಬೇಕೆಂದು ಸೂಚಿಸಲಾಗಿದೆಯಲ್ಲದೆ ಹೀಗೆ ಹೊಣೆಯನ್ನು ಹಾರಿಸಿಕೊಳ್ಳದೆಂದೂ ನಗರ ಸಭೆಗೆ ತಿಳಿಸಲಾಗಿದೆಯಂತೆ. ಈ ಬಗ್ಗೆ ಶಿಷ್ಟ ಮಂಡಲವು ಸರಕಾರವನ್ನು ಕಾಣಲಿದೆ.

ಸರಕಾರದವರು ಈ ವರ್ಷದ ಕೊನೆಯೊಳಗಾಗಿ ಧಾರವಾಡ ಬೆಳಗಾವಿ ಜಿಲ್ಲೆಗಳಲ್ಲಿಯ ಬಸ್ಸ್ ಸರ್ವಿಸ್ಸನ್ನು ರಾಷ್ಟ್ರೀಕರಿಸುವವರಿದ್ದುದರಿಂದ ಹುಬ್ಬಳ್ಳಿಯಲ್ಲಿಯ ಮೋಟರ ಸಾರಿಗೆಯ ಬಗ್ಗೆ ಖಾಸಗಿ ಸಂಸ್ಥೆಗೆ ಲಾಯಸೆನ್ಸು ಕೊಡಲಾಗುವದಿಲ್ಲ ಎಂದು ಸಾರಿಗೆ ಅಧಿಕಾರಿಗಳು ಹುಬ್ಬಳ್ಳಿಯಲ್ಲಿಯ ಮೋಟರ ಒಡೆಯರಿಗೆ ತಿಳಿಸಿರುವರು.






### ವಿಜಾಪುರ

ಬಾಗಲಕೋಟಿ ವಾಸುದೇವ ವಿನೋದಿನಿ ಸಭೆಯವರ ೩೩ ನೇ ವರ್ಷದ ಉತ್ಸವವು ಕಳೆದ ಗಣೇಶಚತುರ್ಥಿಯ ದಿನ ಶ್ರೀ ಉರುವಕೊಂಡದ ಮಹಾಸ್ವಾಮಿಗಳ ನೇತೃತ್ವದಲ್ಲಿ ಸಾಂಗವಾಯಿತು. ಸ್ವಾಮಿಗಳು ಸಂಸ್ಥೆಯ ಚಟುವಟಿಕೆಗಳನ್ನು ಬಹಳವಾಗಿ ಪ್ರಶಂಸಿಸಿ ಉಪದೇಶದ ಮಾತುಗಳನ್ನು ಹೇಳಿದ್ದಲ್ಲದೆ ಪ್ರೋತ್ಸಾಹನವೆಂದು ೧೦೧ರೂಪಾಯಿಗಳನ್ನು ಕೊಟ್ಟರು.

ಉರುವಕೊಂಡದ ಮಹಾಸ್ವಾಮಿಗಳು ಬಾಗಲಕೋಟೆಯ ಸಕ್ರಿ ಹಾಯಸ್ಕೂಲನ್ನು ಸಂದರ್ಶಿಸಿ ಗಾಂಧಿ ನೆಹರು ಇವರ ಭಾವಚಿತ್ರಗಳ ಅನಾವರಣವನ್ನು ಮಾಡಿದರು. ಶಾಲೆಯ ಪ್ರಗತಿಯನ್ನು ನೋಡಿ ಸಂತೋಷಪಟ್ಟರು. ಈ ಶಾಲೆಯಿಂದ ಕಳೆದ ಎಸ್. ಎಸ್. ಸಿ. ಪರೀಕ್ಷೆಯಲ್ಲಿ ಕೇಂದ್ರಕ್ಕೆ ಮೊದಲು ಬಂದ ಶ್ರೀ ಬಾಸುತಕರ ಎಂಬ ವಿದ್ಯಾರ್ಥಿಗೆ ಶ್ರೀ ಸಕ್ರಿ ವೆಂಕಪ್ಪನವರು ೧೦೧ ರೂಪಾಯಿಗಳನ್ನು ಕೊಟ್ಟದ್ದಲ್ಲದೆ ಈ ಪರೀಕ್ಷೆಯಲ್ಲಿ ಪ್ರತಿವರ್ಷ ಬಾಗಿಲುಕೋಟೆಯ ಯಾವುದೇ ಹೈಸ್ಕೂಲಿನಿಂದ ವಿಜಾಪುರ ಕೇಂದ್ರಕ್ಕೆಪ್ರಥಮಸ್ಥಾನ ಪಡೆಯುವ ವಿದ್ಯಾರ್ಥಿಗೆ ೧೦೧ರೂ. ಕರ್ನಾಟಕಕ್ಕೆ ಮೊದಲನೆ ಸ್ಥಾನ ಪಡೆಯುವ ವಿದ್ಯಾರ್ಥಿಗೆ ೫೦೧ ರೂ ಕೊಡುವದಾಗಿಯೂ ಸಾರಿದರು.

ಉರುವಕೊಂಡದ ಮಹಾಸ್ವಾಮಿಗಳು ಬಾಗಲಕೋಟೆಯಲ್ಲಿಯ ಬಸವೇಶ್ವರ ಕಾಲೇಜಿನಲ್ಲಿ ಕರ್ನಾಟಕ ಸಂಘದ ಉದ್ಘಾಟನವನ್ನು ಮಾಡುತ್ತ ಕನ್ನಡಿಗರು ಕರ್ನಾಟಕಪ್ರಾಂತವನ್ನು ಪಡೆದು ಭಾರತದ ಶಕ್ತಿಯನ್ನು ಬೆಳೆಸಬೇಕೆಂದು ಉಪದೇಶಿಸಿದರು.

ಬಳೂಟಿ ಗ್ರಾಮದಲ್ಲಿ ವ್ಹಾಲಂಟ್ರಿ ಸ್ಕೂಲಿನ ಹೆಡ್‌ಮಾಸ್ತರ ಶ್ರೀ ವಿ. ವಿ. ಹಿರೇಮಠ ಇವರ ನೇತೃತ್ವದಲ್ಲಿ ಸ್ವಾತಂತ್ರ್ಯ ದಿನವಾಚರಿಸಲ್ಪಟ್ಟಿತು. ಎಚ್. ಎಸ್. ಪಾಟೀಲ, ಬಿ. ಡಿ. ಪಾಟೀಲ, ಬಿ. ಕೆ. ಬಿರಾದಾರ ಇವರು ಪ್ರೌಢ ಶಿಕ್ಷಣದಲ್ಲಿ ಆಸ್ಥೆ ತೋರಿಸಿದರು.

ವಿಜಾಪುರ ಜಿಲ್ಲೆಯಲ್ಲಿ ಈ ವರೆಗೆ ಮಳೆಯೇ ಆಗಿದ್ದಿಲ್ಲ. ಕಳೆದ ವಾರ ಸರ್ವಸಾಧಾರಣ ಎಲ್ಲ ಕಡೆಗೆ ಮಳೆಯಾಗಿದ್ದು ಹತ್ತಿಬಿತ್ತನೆಯು ಪ್ರಾರಂಭವಾಗಿದೆ. ಮುಂಗಾರಿ ಬೆಳೆ ಮಾತ್ರ ಕೆಟ್ಟು ಹೋಗಿದೆ.

### ಬೆಳಗಾವಿ

ಬೆಳಗಾವಿಯ ಸರದಾರ ಹಾಯಸ್ಕೂಲಿನ ಶತಸಾಂವತ್ಸರಿಕೋತ್ಸವವು ಜರುಗಲಿದ್ದು ಹಿಂದಿನ ವಿದ್ಯಾರ್ಥಿಗಳು ತಮ್ಮ ವಿಳಾಸವನ್ನು ತಿಳಿಸಬೇಕೆಂದು ಶಾಲೆಯ ಮುಖ್ಯಾಧ್ಯಾಪಕರು ಪ್ರಸಿದ್ಧಿಸುತ್ತಾರೆ.

ಬೆಳಗಾವಿ ನಗರಸಭೆಯ ಸೀದಾ ಅಂಗಡಿಯಲ್ಲಿಯ ನಗದಿ ಶ್ರೀ ಶಂಕರ ಮಲ್ಲಪ್ಪಾ ತಾನಾಜೀಚೆ ಇವರಿಗೆ ೨ ವರ್ಷ ಸಶ್ರಮಶಿಕ್ಷೆ ಮತ್ತು ೧೦೦೦ ರೂ. ದಂಡ, ಕೊಡದಿದ್ದರೆ ಮತ್ತೆ ೬ ತಿಂಗಳ ಶಿಕ್ಷೆ ವಿಧಿಸಲಾಯಿತು. ೧೯೪೭ ಸಪ್ಟಂಬರದಲ್ಲಿ ಆರೋಪಿಯು ಅಂಗಡಿಯಲ್ಲಿಯ ೨೫೧೫ ರೂ. ಎತ್ತಿಕೊಂಡು ಓಡಿಹೋಗಿದ್ದನು. ಕಳೆದ ಎಪ್ರೀಲದಲ್ಲಿ ಪುಣೆಯ ಪೋಲೀಸರು ಅವನನ್ನು ಸೆರೆಹಿಡಿದಿದ್ದರು.

ಒಕ್ಕಲತನ ಮಂತ್ರಿಗಳಾದ ಶ್ರೀ ಮಲ್ಲನಗೌಡಾ ಪಾಟೀಲರು ಹುಕ್ಕೇರಿ ರೋಡಿನ ಹತ್ತರ ಇರುವ ಘಟಪ್ರಭಾ ಎಡದಂಡೆಯ ಕಾವಲಿಯ ಸ್ಥಳವನ್ನು ಸಂದರ್ಶಿಸಿದರು. ಹೆಚ್ಚು ಆಹಾರಧಾನ್ಯ ಬೆಳೆಯುವ ಯೋಜನೆಯನ್ವಯ ಇದನ್ನು ಕೈಕೊಂಡಿದ್ದು ಇದರಿಂದ ೧೨೧೦೦೦ ಎಕರೆ ಭೂಮಿಗೆ ನೀರು ದೊರೆವುದಲ್ಲದೆ ೬೦ ಸಾವಿರ ಟನ್ನ ಹೆಚ್ಚು ಧಾನ್ಯ ಬೆಳೆವುದು. ಇದರ ವೆಚ್ಚ ೫॥ ಕೋಟಿ ರೂಪಾಯಿ ಆಗುವದು.

ಬೆಳಗಾವಿಯಲ್ಲಿ ಇತ್ತೀಚೆ ನಡೆದ ಸ್ತ್ರೀಯರ ಆಭರಣಗಳ ಅಪಹಾರ ಸಂಬಂಧದಲ್ಲಿ ಪೋಲೀಸರು ದುಂಡಯ್ಯ ಹಿರೇಮಠ ಎಂಬ ಪೋಲೀಸನನ್ನೇ ಹಿಡಿದಿದ್ದು ಅವನಲ್ಲಿ ಕಳವಿನ ಮಾಲು ಸಿಕ್ಕಿರುವದು.

ಶ್ರೀ ಚನ್ನಪ್ಪಾ ವಾಲಿಯವರ ಮೇಲೆ ನೋಟೀಸು ಪ್ರಯೋಗಿಸಿ ನಾಲ್ಕು ದಿನಗಳಲ್ಲಿ ಅದನ್ನು ಹಿಂತೆಗೆದುಕೊಂಡದ್ದೇಕೆ ಎಂದು ಪತ್ರಿಕಾ ಪರಿಷತ್ತಿನಲ್ಲಿ ಕಲೆಕ್ಟರರಿಗೆ ಕೇಳಿದಾಗ ಅವರು, ಶಾಂತಿಯನ್ನು ಕಾಯುವದರ ಸಲುವಾಗಿ ಹಿಂದಿನ ಕಲೆಕ್ಟರರು ಈ ಹುಕುಮನ್ನು ಹೊರಡಿಸಿರಬೇಕು, ಅದೇ ದೃಷ್ಟಿಯಿಂದಲೆ ನಾನು ಅದನ್ನು ಹಿಂತೆಗೆದುಕೊಂಡಿದ್ದೇನೆ. ಇದರಿಂದ ಸರಕಾರದ ಗೌರವಕ್ಕೆ ಭಂಗಬಂತೆಂದು ನನಗನಿಸುವದಿಲ್ಲ ವಶೀಲಿ ಮುಂತಾದವುಗಳ ಬಗ್ಗೆ ಕೆದರಿ ಕೆದರಿ ಕೇಳಬೇಡಿರಿ ಎಂದು ಮುಂತಾಗಿಯೂ ಕಲೆಕ್ಟರರು ಹೇಳಿದರು.

ರಾವಸಾಹೇಬ ಎನ್, ಆಯ ಚಿಮಡೆ, ಬಸಪ್ಪ ಅರಗಾವಿ ಮತ್ತೂ ಸರದಾರ್ಸ ಹಾಯಸ್ಕೂಲಿನ ಹೆಡ್‌ಮಾಸ್ತರ ಶ್ರೀ ಕೊಪ್ಪೀಕರ ಈ ಮೂವರು ಬೆಳಗಾವಿ ಸ್ಕೂಲಬೋರ್ಡಿನ ಸರಕಾರೀ ಸದಸ್ಯರಾಗಿ ನೇಮಿಸಲ್ಪಟ್ಟಿರುವರು.

### ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲಾ ಪಂಡಿತ ಸಂಘದ ವಾರ್ಷಿಕ ಮಹಾಸಭೆಯು ದಿನಾಂಕ ೨೧ ರಂದು ಶ್ರೀ ಸೇಡಿಯಾಪು ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯದರ್ಶಿಗಳ ಸ್ವಾಗತ ವರದಿಗಳಾದ ಮೇಲೆ ಲೆಕ್ಕಪತ್ರ ಸ್ವೀಕಾರವಾಯಿತು. ಆಸ್ಥಾನ ಕವಿ ಶ್ರೀ ಗೋವಿಂದ ಪೈಗಳನ್ನು ಅಭಿನಂದಿಸುವ ಹಾಗೂ ಬಿ. ಓ. ಎಲ್ ಆದವರು ಬಿ. ಟಿ. ಯಲ್ಲಿಯಾವಯಾವ ವಿಷಯಗಳಲ್ಲಿ ತಜ್ಞತೆಯನ್ನು ಪಡೆಯುತ್ತಾರೊ ಅವುಗಳನ್ನು ಹೈಸ್ಕೂಲುಗಳಲ್ಲಿ ಕಲಿಸುವಂತಾಗಬೇಕೆನ್ನುವ ಗೊತ್ತುವಳಿಗಳಾದವು.

ಸಸಿಸಪ್ತಾಹ ಸಮಿತಿಯ ಸಭೆಯು ದಿನಾಂಕ ೧೮ ರಂದು ಕಲೆಕ್ಟರರ ಕಚೇರಿಯಲ್ಲಿ ಶ್ರೀ ಎಲ್. ಸಿ. ಪಾಯಿಸರ ಅಧ್ಯಕ್ಷತೆಯಲ್ಲಿ ಜರಗಿತು. ಸಸಿ ನೆಡುವ ಸಪ್ತಾಹದಲ್ಲಿ ಅತ್ಯಧಿಕ ಸಸಿಗಳನ್ನು ನೆಟ್ಟ ತೋಟಗಳಿಗೆ ಸಂಭಾವನೆ ಕೊಡುವ ನಿರ್ಧಾರವಾಗಿ ಸಪ್ತಾಹದ ವರದಿಗಳನ್ನು ಸ್ವೀಕರಿಸಲು ಶ್ರೀ ಕೆ. ಕೃಷ್ಣಯ್ಯ ಹೆಗ್ಗಡೆಯವರಿಗೆ ಅಧಿಕಾರವೀಯಲಾಯ್ತು.

ಉದುಪಿಯ ಹೊರವಲಯದಲ್ಲೇ ಇರುವ ಮಣಿಪಳ್ಳಕ್ಕೆ ದಿನಾಂಕ ೨೦ ರಂದು ಮದ್ರಾಸು ಸರಕಾರದ ಆಹಾರ ಮಂತ್ರಿಗಳು ಆಗಮಿಸಿ, ಅಲ್ಲಿನ ಕೈಗಾರಿಕೆ ಶಾಲೆಯನ್ನು ಸಂದರ್ಶಿಸಿದರು. ಬಳಿಕ ಅವರು ಉಡುಪಿಗೆ ಆಗಮಿಸಿ, ಮಲ್ಪೆಗೆ ಹೋಗಿ ಅಲ್ಲಿನ ಫಿಶರಿ ಶಾಲೆಯನ್ನೂ ಮೀನು ಒಣಗಿಸುವ ಅಂಗಣವನ್ನೂ ಸಂದರ್ಶಿಸಿದರು. ಆಹಾರ ಸಮಿತಿಯ ಸಭೆಯಲ್ಲೂ ಸಾರ್ವಜನಿಕ ಸಭೆಯಲ್ಲೂ ಭಾಗವಹಿಸಿ, ನೆಟ್ಟ ಸಸಿಗಳನ್ನು ದಕ್ಷತೆಯಿಂದ ಪಾಲಿಸಬೇಕೆಂದು ಕೇಳಿಕೊಂಡರು.

ಕಾಸರಗೋಡು ತಾಲೂಕಿನ ಮೊಯಿಪ್ಪಾಡಿಯಲ್ಲಿ ಬುನಾದಿ ಶಿಕ್ಷಕ ತರಬೇತಿ ಶಾಲೆಯೊಂದು ಇದೀಗ ಸರಕಾರದಿಂದ ತೆರೆಯಲ್ಪಟ್ಟಿದೆ. ಇದಲ್ಲದೆ ಜಿಲ್ಲೆಯಲ್ಲಿ ಉಡುಪಿಗೆ, ಮಂಗಳೂರು ಮುಂತಾದೆಡೆಗಳಲ್ಲಿ ಇನ್ನೂ ಎರಡು ತರಬೇತಿ ಶಾಲೆಗಳಿವೆ.

ದಕ್ಷಿಣ ಕನ್ನಡ ಹಾಗೂ ಅಖಿಲ ಕರ್ನಾಟಕದಲ್ಲೇ ಪ್ರಸಿದ್ಧರಾದ ಆಯುರ್ವೇದ ಭೂಷಣ ಡಾ. ಎಂ. ವಿ. ಶಾಸ್ತ್ರಿಯವರು ದಿನಾಂಕ ೨೨ ರಂದು ಹೃದಯಸ್ತಂಭನದಿಂದಾಗಿ ಪರಂಧಾಮವನ್ನೈದಿದರು. ದಿವಂಗತರಾದಾಗ ಶ್ರೀಯುತರಿಗೆ ೬೯ ವರ್ಷ ವಯಸ್ಸು. ಏಳುಮಂದಿ ಕುಮಾರರ, ಏಳುಮಂದಿ ಕುಮಾರಿಯರ ತಂದೆಯಾಗಿ ಅವರೆಲ್ಲರಿಗೂ ಸಾಕಷ್ಟು ವಿದ್ಯಾಬುದ್ಧಿಗಳನ್ನು ಇವರು ಒದಗಿಸಿ ಕೊಟ್ಟಿರುತ್ತಾರೆ. ಕಾಶಿಯಲ್ಲಿ ಸಂಸ್ಕೃತವನು ಕಲಿತು, ಬಂಕೀಪುರದಲ್ಲಿ ವ್ಯಾಕರಣ ಕಲಿತು, 'ಶಾಸ್ತ್ರಿ' ಉಪಾಧಿಯನ್ನು ಪಡೆದರಲ್ಲದೆ ಮುಂದೆ ಉಡುಪಿಯಲ್ಲೂ ಶಾಸ್ತ್ರಾಭ್ಯಾಸ ಮಾಡಿದರು. ಆ ಮೇಲೆ ಮದ್ರಾಸಿನಲ್ಲಿ ಸಂಸ್ಕೃತವನೂ ಆಯುರ್ವೇದವನ್ನೂ ಕಲಿತರು.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ ಚುನಾವಣೆಯಲ್ಲಿ ೪೪ ಸ್ಥಳಗಳಿಗೆ ೧೦೦ ಹುರಿಯಾಳುಗಳು ನಾಮಪತ್ರ ಕೊಟ್ಟಿರುವರು. ಅದರಲ್ಲಿ ಕಾಂಗ್ರೆಸ್ಸಿನವರು ೪೨ ಜನರಿರುವರು. ಇವರಲ್ಲಿ ೧೫ ಜನ ಕಾಂಗ್ರೆಸ್ಸಿಗರು ಮತ್ತು ಓರ್ವ ಯುರೋಪಿಯನ್ನರು ಅವಿರೋಧ ಆರಿಸಿ ಬಂದಿರುವರು.

ನಾರಾವಿಯಲ್ಲಿ ಸ್ವಾತಂತ್ರ್ಯ ದಿನೋತ್ಸವವು ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು. ನಗರ ಸಂಕೀರ್ತನ ಧ್ವಜವಂದನೆಯಾಗಿ ಶ್ರೀ ಕೆ. ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ಸಭೆಕೂಡಿತು. ಲಾವಣಿ, ಬಾಲಕರ ಕಾರ್ಯಕ್ರಮದ ಬಳಿಕ ಶ್ರೀ ಅಣ್ಣಪ್ಪ ಕಿಣಿ ಮೊದಲಾದವರು ಭಾಷಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯರು ವಂದನೆಗಳನ್ನು ಸಮರ್ಪಿಸಿದ ಬಳಿಕ ರಾಷ್ಟ್ರಗೀತೆಯೊಡನೆ ಕಾರ್ಯಕ್ರಮ ಕೊನೆಗಂಡಿತು.


# ೧೯೪೯ನೇ ವರ್ಷದಲ್ಲಿ ಏನಾಗುವುದಿದೆ?



೧೯೪೯ ನೆ ವರ್ಷದ ನಿಮ್ಮ ಸುಖ ದುಃಖ ಮುಂಚೆಯೇ ತಿಳಿಯುವದಿದ್ದರೆ ಪೋಸ್ಟ ಕಾರ್ಡಿನ ಮೇಲೆ ನಿಮ್ಮ ವಿಳಾಸ ಬರೆದು, ಯಾವದೇ ಹಣ್ಣಿನ ಹೆಸರು ಬರೆದು ಕಳಿಸಿರಿ. ಅಷ್ಟರಿಂದಲೇ ಜ್ಯೋತಿಷ್ಯದ ಬಲದಿಂದ ನಿಮಗೆ ಬರುವ ೧೨ ತಿಂಗಳಲ್ಲಿಯ ಲಾಭಾಲಾಭ, ವ್ಯಾಪಾರದಲ್ಲಿ ಹಾನಿ, ದ್ರವ್ಯಲಾಭ, ನೌಕರಿ ಬಡತಿ ಹಿಂಬಡತಿ ವರ್ಗಾವರ್ಗಿ, ಹೆಂಡಿರು ಮಕ್ಕಳ ಸುಖ, ಆರೋಗ್ಯ, ಆಜಾರಿ, ದೂರಿನ ಪ್ರವಾಸ, ಖಟ್ಲೆ, ಪರೀಕ್ಷೆಗಳಲ್ಲಿ ಯಶ, ಲಗ್ನ, ಹೊಲ ಮನೆಗಳ ಸುರಕ್ಷಿತೆ, ಹೊಸ ಸಂಬಂಧ ಅಥವಾ ಲಾಭ, ಸಟ್ಟಾ ಇಲ್ಲವೆ ಇತರ ಅನಿರೀಕ್ಷಿತ ದ್ರವ್ಯ ಲಾಭ ಮುಂತಾದ್ದನ್ನು ನಿಮ್ಮ ಪತ್ರದ ತಾರೀಖಿನಿಂದ ಒಂದು ವರ್ಷದ ಎಲ್ಲ ಘಟನೆ ಸವಿಸ್ತರ ಬರೆದು, ನಿಮಗೆ ೧೨ ತಿಂಗಳ ಪೂರ್ಣ ಭವಿಷ್ಯ ತಯಾರಿಸಿ ಕೇವಲ ಒಂದು ರೂಪಾಯಿ ನಾಲ್ಕಾಣೆಗೆ ವ್ಹಿ. ಪಿ. ಕಳಿಸಲಾಗುವದು. ಪೋಸ್ಟ ವೆಚ್ಚ ಬೇರೆ. ಜೊತೆಗೆ ನಿಮ್ಮ ಮುಂದ ಭಾಗ್ಯವನ್ನು ಉಜ್ವಲಗೊಳಿಸುವ ಉಪಾಯ ತಿಳಿಸುವೆವು. ಅದರಿಂದ ಮುಂಬರುವ ಸಂಕಟಗಳಿಂದ ಪಾರಾಗಲು ಹಗುರಾಗುವದು. ಇದೊಂದೇ ಅನುಭವದಿಂದ ನಮ್ಮ ಜ್ಯೋತಿಷ್ಯ ಜ್ಞಾನದ ಖಾತ್ರಿಯಾಗುವದು. ಸುಳ್ಳೆಂದು ಸಿದ್ಧಮಾಡಿದರೆ ಹಣ ವಾಪಸ ಕೊಡುವೆವು.

**Shri Swami Sat Narain Jotish Ashram** (K. V. H.)
JULLUNDUR CITY



## ಶ್ರೀ ಬಸವರಾಜ ಮೆಡಿಕಲ್ ಫಾರ್ಮಸಿ

**ಇವರ ಅತ್ಯಮೋಘವಾದ ತಯಾರಿಕೆ**

# ಅಪಿನಾ

**ಬೆಲೆ ೧ ಬಾ. ೫—೦—೦ ರೂ. ಅಂಚೇ ವೆಚ್ಚ ಬೇರೆ.**

ಅನಿಯಮಿತ ಆಹಾರ ವಿಹಾರದಿಂದ ಮತ್ತು ಅಪಾಯಕಾರಕ ಪದಾರ್ಥ ಮಿಶ್ರಿತ ಆಹಾಗದ ಸೇವನೆಯಿಂದ ಅಥವಾ ಚಹಾ ಹಾಗು ಕಾಫಿಯ ಅತಿ ಸೇವನೆಯಿಂದ ಪಚನಾಗ್ನಿಯ ಶಕ್ತಿಯನ್ನು ಕುಂಠಿಸಿ ಅಪಚನ, ಮಲಬದ್ಧತೆ, ಎದೆಯಲ್ಲಿ ಹುಳಿಸಿಟ್ಟಂತಾಗುವದು, ಕಣ್ಣಿಗೆ ಕತ್ತಲು ಬಂದಂತಾಗಿ ಬವಳಿಕೆ, ಮೇಲಿಂದ ಮೇಲೆ ತಲೆಶೂಲಿ, ವಾಂತಿ ಭ್ರಾಂತಿ, ಹೊಟ್ಟೆಯಲ್ಲಿ ಅಥವಾ ಎದೆಯಲ್ಲಿ ಉರಿ ಮುಂತಾದ ವಿಕಾರಗಳು ಉತ್ಪನ್ನವಾಗಿ ಹಸಿವೆಯೇ ಇಲ್ಲದಂತಾಗಿ ಮನುಷ್ಯನು ದಿನದಿನಕ್ಕೆ ರಕ್ತಹೀನನಾಗಿ ನಿಸ್ತೇಜ ಮತ್ತು ಕೃಶನಾಗುತ್ತ ಹೋಗುವನು.

ಈ ಔಷಧದ ಸೇವನೆಯಿಂದ ಮೇಲೆ ಬರೆದ ಎಲ್ಲ ರೋಗಗಳು ನಾಶವಾಗಿ ಪಚನಶಕ್ತಿಯನ್ನು ಬೆಳೆಸುವದಲ್ಲದೆ ಹಸಿವು ಆಗಿ ಉಂಡ ಆಹಾರ ಪಚನವಾಗಿ ನಿಯಮಿತ ಮಲಶುದ್ಧಿ ಆಗುತ್ತದೆ ಮತ್ತು ಕಳೆದು ಹೋದ ಆರೋಗ್ಯ ಪ್ರಾಪ್ತವಾಗಿ ರಕ್ತ ಮತ್ತು ಶಕ್ತಿ ವೃದ್ಧಿಯಾಗಿ ಮನುಷ್ಯನು ಸದೃಢನಾಗುತ್ತಾನೆ. ಸ್ತ್ರೀಪುರುಷರಿಗೂ ಸರಿಸಮಾನವಾದ ಗುಣಕಾರಿ ಎಂದು ಪ್ರಖ್ಯಾತಿಹೊಂದಿದೆ. ಅನುಪಾನ ಪತ್ರಿಕೆ ಔಷಧದ ಸಂಗಡ.

ವಿಳಾಸ— ವೈದ್ಯರಾಜ ಎ. ಬಿ. ಸಿದನಾಳ,
ಮನೆ ನಂ. ೧೩೮೯ (ಕೆ.ವಿ.) ಬಸವಣಗಲ್ಲಿ, ಬೆಳಗಾವಿ

# ನಿಯಂತ್ರಣಗಳ ಪುನರ್ವಿವೇಚನೆ

[ ಈ ಲೇಖನವನ್ನು ಬರೆದವರು ಕಳೆದ ವರ್ಷ "ಹರಿಜನ"ದಲ್ಲಿ "ಜಾಗರೂಕನಾಗಿರುವವನು" ಎಂಬ ಗುಪ್ತನಾಮದಿಂದ ನಿಯಂತ್ರಣಗಳ ವಿವೇಚನೆ ಮಾಡಿದ್ದರು. ಈ ವರ್ಷ ಅವರು ಅದನ್ನೇ ಇನ್ನಷ್ಟು ವಿಸ್ತಾರವಾಗಿ ವಿಚಾರಿಸಿ ಅವು ಹೇಗೆ ನಮ್ಮ ಆರ್ಥಿಕ ಸ್ಥಿತಿಯ ಮೇಲೂ ಸೌಕರ್ಯಗಳ ಮೇಲೂ ಪರಿಣಾಮ ಮಾಡಿವೆಯೆಂದು ತೋರಿಸಿ ಕೊಟ್ಟಿದ್ದಾರೆ. ಈ ಲೇಖಮಾಲೆ ಮುಗಿಯುವ ವರೆಗೆ ನಾವು ನಮ್ಮ ಅಭಿಪ್ರಾಯಗಳನ್ನು ತಡೆಹಿಡಿಯುತ್ತಿದ್ದೇವೆ.—ಸಂ.]

ಜನಸಾಮಾನ್ಯರು ಇನ್ನೂ ಅನೇಕ ಅಡಚಣಿಗಳಿಂದ ಪೀಡಿತರಾಗಿಯೇ ಇದ್ದಾರೆ. ಅವುಗಳಲ್ಲಿ ಅತಿ ಮಹತ್ವದ್ದೆಂದರೆ ಜೀವನದ ವೆಚ್ಚ ಹೆಚ್ಚಾಗಿರುವುದು. ಬೆಲೆಗಳನ್ನು ಇಳಿಸುವ ಉದ್ದೇಶದಿಂದ ಸರಕಾರ ಅನೇಕ ಉಗ್ರ ಅತಿಪ್ರಸರಣ ನಿರೋಧಕ ಉಪಾಯಗಳನ್ನು ಕೈಕೊಂಡಿದೆ. ಆದರೂ ಸ್ಥಿತಿಗತಿ ಇದ್ದಂತೆಯೇ ಇದೆ. ಜೀವನ ವೆಚ್ಚದ ಅಂಕೆಗಳು ವಿಶೇಷ ಬದಲಾಗಿಲ್ಲ. ಮತ್ತು ಸಾಮಾನ್ಯರ ಕಷ್ಟನಿಷ್ಠುರಗಳು ಪರಿಹಾರ ಹೊಂದುವ ಲಕ್ಷಣಗಳು ಸದ್ಯಕ್ಕಂತೂ ತೋರುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಈ ಸಮಸ್ಯೆಯನ್ನು ನಿವಾರಿಸುವದಕ್ಕೆ ಕಲ್ಪಿಸಿದ ಮೂಲ ರೀತಿಯೇ ತಪ್ಪು. ಇದೇ ಬಗೆಯಾದ ಉಪಾಯಗಳನ್ನೇ ಬಳಸಿದರೆ ಹತ್ತು ವರ್ಷಗಳವರೆಗೆ ಹೆಣಗಿದರೂ ಭಾರತದ ಜನತೆಯ ದುಃಖಗಳು ಸಮಾಧಾನ ಹೊಂದುವಂತೆ ತೋರುವುದಿಲ್ಲ. ಪ್ರತಿಯೊಂದು ಅಂಶವನ್ನು ಬೇರೆಬೇರೆಯಾಗಿಯೇ ಈ ಕೆಳಗೆ ವಿವೇಚಿಸುತ್ತೇನೆ.

### ಆಹಾರ

ಆಹಾರದ ಕೊರತೆ ಭಾರತಕ್ಕೇನೂ ಹೊಸ ಸಮಸ್ಯೆಯಲ್ಲ. ಏಕೆಂದರೆ ಹಿಂದೆಯೇ ನಾವು ಬ್ರಹ್ಮದೇಶದಿಂದ ಹತ್ತಿಪ್ಪತ್ತು ಲಕ್ಷ ಟನ್ ಅಕ್ಕಿಯನ್ನು ತರಿಸುತ್ತಿದ್ದೆವು. ಯುದ್ಧ ಕಾಲದಲ್ಲಿಯೂ ಅದರಿಂದೀಚೆಗೂ ಈ ಆಸರೆ ನಿಂತು ಹೋಗಿದೆ. ಈ ಕೊರತೆಯನ್ನು ಬಾಯಿಗೂಡಿಸಲು ನಾವು "ಹೆಚ್ಚು ಆಹಾರ ಬೆಳೆಯಿರಿ" ಎಂಬ ಸತ್ರವನ್ನು ಪ್ರಾರಂಭಿಸಿ ಹೊಸ ಹೊಸ ಜಮೀನುಗಳನ್ನು ಕೃಷಿಗೆ ತಂದುದಲ್ಲದೆ ಯುದ್ಧಾನಂತರ ಹೊರಗಿನಿಂದಲೂ ಧಾನ್ಯವನ್ನು ತರಿಸಿಕೊಂಡೆವು; ಆದರೂ ನಮಗೆ ಬೇಕಾದ ಮಾದರಿಯ ಅಥವಾ ಬೇಕಾದ ಪ್ರಮಾಣದಲ್ಲಿ ಧಾನ್ಯ ದೊರಕುತ್ತ ಇಲ್ಲ. ಅಗ್ಗವಾಗಿ ಮತ್ತು ಸಮವಾಗಿ ಹಂಚಬೇಕೆಂದು ಜನಸಂಖ್ಯೆಯಲ್ಲಿ ಸುಮಾರು ಮೂರರಲ್ಲೊಂದಂಶ ಜನರಿಗೆ ಅನ್ವಯಿಸುವಂತೆ ಆಹಾರ ಸೀದಾವನ್ನು ಪ್ರಾರಂಭಿಸಲಾಯಿತು. ಮತ್ತು ಧಾನ್ಯದ ಬಳಕೆಯನ್ನು ಕಡಿಮೆ ಮಾಡುವ ಮತ್ತು ಸರಾಗ ಸಾಗಾಟವನ್ನು ನಿರೋಧಿಸುವ ಅನೇಕ ಕಠೋರ ಶಾಸನಗಳನ್ನು ಜಾರಿಯಲ್ಲಿ ತಂದುದೂ ಆಯಿತು. ಸೀದಾ ಪದ್ಧತಿಗಾಗಿ ಹೊರಗಿಂದ ಧಾನ್ಯಗಳನ್ನು ಆಯಾತ ಮಾಡಿದುದು ಸಾಲದ್ದಕ್ಕೆ ಒತ್ತಾಯದ ಅಥವಾ ಐಚ್ಛಿಕ ಧಾನ್ಯ ಎತ್ತುವಳಿಯ ಕ್ರಮಗಳನ್ನೂ ಕೈಕೊಳ್ಳಲಾಯಿತು. ಇಷ್ಟೆಲ್ಲ ಆದರೂ ಜನರಿಗೆ ದೊರೆಯುವ ಆಹಾರಕ್ಕೆ ಹಿಂದಿಗಿಂತ ಮೂರುನಾಲ್ಕು ಪಟ್ಟು ಬೆಲೆ ಬೀಳುತ್ತಿದೆ. ಇಷ್ಟು ತೆತ್ತರೂ ಅವರಿಗೆ ರೂಢಿಬಿದ್ದ ಧಾನ್ಯಗಳೂ ಸಿಗಲಿಲ್ಲ, ಉತ್ತಮ ಧಾನ್ಯಗಳೂ ಸಿಗಲಿಲ್ಲ. ಸಿಗುತ್ತಿದ್ದುದು ಕೆಟ್ಟ ಸರಕು ಇಲ್ಲವೆ ರೂಢಿಯಿಲ್ಲದ ಬೇರೆ ಬಗೆಯ ಧಾನ್ಯ. ಈ ಬಗೆಯಲ್ಲಿ ಕೊರತೆಯನ್ನು ನೀಗಿಸಹೋದುದರ ದೋಷಗಳು ತತ್‌ಕ್ಷಣ ಪ್ರಕಾಶಕ್ಕೆ ಬಂದವು. ಧಾನ್ಯ ಎತ್ತುವಳಿಯಲ್ಲಿ ರೈತನಿಗೆ ಕೊಟ್ಟ ಬೆಲೆಗಳು ತೀರ ಕಡಿಮೆಯಾಗಿದ್ದವು. ಅವು ಏರಿಸಲ್ಪಟ್ಟಾಗಲೂ ಮಾರಾಟದ ಬೆಲೆಗಳಿಗೂ ಎತ್ತುವಳಿಯಲ್ಲಿ ಸರಕಾರ ಕೊಟ್ಟ ಬೆಲೆಗಳಿಗೂ ಬಹಳ ಅಂತರವಿತ್ತು. ಇದಕ್ಕೆ ಕಾರಣವೇನೋ ಊಹಿಸುವುದು ದುಷ್ಕರವಾಗಿದೆ. ಒಂದಾನೊಂದು ಜಿಲ್ಲೆಯಲ್ಲಿ ಬಂಗಾಲಿ ಮಣಕ್ಕೆ ರೂ ೧೨-೮-೦ ರಿಂದ ರೂ. ೧೨-೧೨-೦ ರಂತೆ ಅಕ್ಕಿಯನ್ನು (ಗಿರಣಿ ವೆಚ್ಚ ಸೇರಿ) ಎತ್ತಿದರೂ ಅದೇ ಅಕ್ಕಿಯನ್ನು ಅದೇ ಜಿಲ್ಲೆಯಲ್ಲಿ ಜನರಿಗೆ ೧೭—೧೮ ರೂಪಾಯಿಯಂತೆ ಮಾರಲಾಗುತ್ತಿದೆಯೆಂದು ಕೇಳುತ್ತೇನೆ. ಭತ್ತದ ಬೆಲೆ ಮಣಕ್ಕೆ ೭ ರೂಪಾಯಿಯೆಂದು ಗೊತ್ತುಪಡಿಸಲಾಗಿತ್ತು. ಆ ಲೆಕ್ಕದಿಂದ ಅಕ್ಕಿಯ ಮಾರುವ ಬೆಲೆ ಮಣಕ್ಕೆ ೧೨ ರೂಪಾಯಿಯಾಗಬೇಕಿತ್ತು. ಸಾಮಾನ್ಯ ದಿನಗಳಲ್ಲಿ ಭತ್ತದ ಬೆಲೆಗೂ ಅಕ್ಕಿಯ ಬೆಲೆಗೂ ನೂರಕ್ಕೆ ೫೦ ಕ್ಕಿಂತ ಹೆಚ್ಚು ಅಂತರವಿರುತ್ತಿದ್ದಿಲ್ಲ. ಈಗ ಅದೇಕೆ ನೂರಕ್ಕೆ ೧೨೫ ರಿಂದ ೧೫೦ ರಷ್ಟು ಹೆಚ್ಚಾಗಬೇಕೋ ತಿಳಿಯದಾಗಿದೆ. ಬಡ ರೈತರಿಗೆ ಲಂಚಬಡಕರಾದ ಕೆಳ ಅಧಿಕಾರಿಗಳ ಮತ್ತು ಗುತ್ತಿಗೆದಾರರ ಕಾಲದಲ್ಲಿ ಗೊತ್ತುಪಡಿಸಿದ ಬೆಲೆಗಳು ಕೂಡ ಪೂರ್ತಿ ಕೈಗೆ ಬರುವವೋ ಇಲ್ಲವೋ ದೇವರೇ ಬಲ್ಲ. ಆದರೆ ಸರಕಾರದವರ ಕೊಳ್ಳುವ ಮತ್ತು ಮಾರುವ ಬೆಲೆಗಳಿಗಿರುವ ಅಂತರವನ್ನು ಕಂಡುಕೊಳ್ಳುವಷ್ಟು ಮಟ್ಟಿಗಾದರೂ ರೈತರು ಜಾಣರಾಗಿದ್ದಾರೆ. ಅದರಿಂದಲೇ ಸರಕಾರದ ಎತ್ತುವಳಿಯ ಯೋಜನೆಗಳಿಗೆ ಅವರಿಂದ ದೊರೆಯುವ ಬೆಂಬಲ ಅರೆಮನಸಿನದಾಗಿದೆ. ಈಚೆಗೆ ಈಯೋಜನೆಗಳ ಬಗ್ಗೆ ಅವರ ವಿರೋಧವೂ ಒಮ್ಮೊಮ್ಮೆ ಹಿಂಸಾಚಾರವೂ ಕೂಡ ಕಾಣಬರುತ್ತಿದೆ. ಈ ಪ್ರಕಾರ ಎತ್ತುವಳಿಯ ಯೋಜನೆಗಳು ಆಯಶಸ್ವಿಯಾಗಿ ಸರಕಾರದ ಲಂಚಗುಳಿ ಕೆಳ ನೌಕರರ ಮತ್ತು ಪೋಲೀಸರ ಅನುಮತಿಯಿಂದಲೇ ಎಷ್ಟೋ ಕಾಳು ಕಳ್ಳಪೇಟೆಯ ದಾರಿ ಹಿಡಿದಿದೆ. ಮೇಲಾಗಿ ಸರಕಾರದ ಅಡಳಿತದಲ್ಲಾಗುವ ದೀರ್ಘಸೂತ್ರದಿಂದ ಕೊಂಡ ಧಾನ್ಯಗಳಿಗೆ ಹಣ ಮುಟ್ಟಿಸುವುದು ತಡವಾಗಿ ಬಹಳ ಧಾನ್ಯಗಳು ಕೊಂಡಲ್ಲಿಯೆ ಹುಳ ಹಿಡಿದು ಹಾಳಾಗುವವು, ಇಲ್ಲವೆ ಸಾಗಿಸುವಾಗ ನಷ್ಟವಾಗುವವು.

ಸರಕಾರಿ ದೀರ್ಘಸೂತ್ರವಲ್ಲದೆ, ಧಾನ್ಯ ಎತ್ತುವಳಿ ಮತ್ತು ವಿದೇಶಿ ಧಾನ್ಯಗಳ ಕ್ರಯದಲ್ಲಿ ಬೇರೆದೋಷಗಳೂ ಇವೆ. ಬೆಳೆಗಳು ಕೆಟ್ಟು ಹೋಗಿದ್ದರೂ ಸರಕಾರಿ ಅಧಿಕಾರಿಗಳು ಗೊತ್ತುಪಡಿಸಿದ ಪ್ರಮಾಣದಲ್ಲಿ ಧಾನ್ಯ ಕೊಟ್ಟೇತೀರಬೇಕೆಂದು ರೈತರನ್ನು ಬಲಾತ್ಕರಿಸಿದ ಫಲವಾಗಿಯೂ ಹಳ್ಳಿಗಳಲ್ಲಿ ಸರಕಾರದ ಎತ್ತುವಳಿಗೆ ಎಷ್ಟೋವೇಳೆ ಪ್ರತಿಭಟನೆ ಬಂತು. ವಿದೇಶಿ ಧಾನ್ಯಗಳನ್ನು ಕೊಳ್ಳುವ ಕೆಲಸವನ್ನು ಅನನುಭವಿಗಳ ಕೈಗೊಪ್ಪಿಸಿದ್ದರಿಂದ ಅವರು ನಮಗೆ ಉಪಯೋಗ ಬೀಳಲಿ, ಬೀಳದಿರಲಿ, ಸಿಕ್ಕ ಧಾನ್ಯಗಳನ್ನೆಲ್ಲ ಬೇಡಿದ ಬೆಲೆ ಕೊಟ್ಟು ಕೊಂಡುಕೊಂಡರು. ಮನುಷ್ಯನು ತಿನ್ನಲಾರದಂಥ ಕೆಟ್ಟ ಗೋವಿನ ಜೋಳವನ್ನು, ಕೆಲ ವೇಳೆ ಹುಳುಕು ಗೋದಿಯನ್ನೂ ಕೂಡ, ದೊಡ್ಡ ಪರಿಮಾಣದಲ್ಲಿ ಕೊಳ್ಳಲಾಯಿತು. ಇಲ್ಲಿಯೂ ಸರಕಾರದ ಕೊಳ್ಳುವ ದರಕ್ಕೂ ಮಾರುವ ದರಕ್ಕೂ ತುಂಬ ಅಂತರವಿದೆ; ಅದರ ಕಾರಣ ಸಾಮಾನ್ಯ ಜನರಿಗೆ ತಿಳಿಯದಾಗಿದೆ. ಒಂದು ಬುಶೆಲ್ (೬೬ ಪೌಂ.) ಗೋದಿಯ ಮೂಲ ಬೆಲೆ ೧.೮೦ ಡಾಲರು ಇದ್ದರೆ, ಅದನ್ನು ಸಾಗಿಸುವ ಹಡಗಿನ ವೆಚ್ಚಗಳೇ ಮೊದಲಾದ್ದು ಸೇರಿ ಅದರ ಬೆಲೆ ಹೆಚ್ಚಾಗುವುದೆಂದು ಒಪ್ಪಿಕೊಂಡರೂ ಈ ಈ ದೇಶದಲ್ಲಿ ಬಂದಿಳಿದಾಗಿನ ಬೆಲೆಗಿಂತ ಗಿರಾಕಿಗೆ ಮಾರುವ ಬೆಲೆ ನೂರಕ್ಕೆ ೫೦—೬೦ ರಷ್ಟು ಹೆಚ್ಚೇಕೆ ಅಗಬೇಕು? ಇಷ್ಟಾದರೂ ಧಾನ್ಯದ ವ್ಯಾಪಾರದಿಂದ ಆಗುವ ಹಾನಿ ಕೇಂದ್ರ ಮತ್ತು ಪ್ರಾಂತಿಕ ಮುಂಗಡ ಪತ್ರಿಕೆಗಳೆರಡರಲ್ಲೂ ದೊಡ್ಡದೊಡ್ಡದಾಗಿತೋರುತ್ತದೆ. ಹೀಗೆ, ನಾಗರಿಕನು ಪ್ರತ್ಯಕ್ಷಮತ್ತು ಅಪ್ರತ್ಯಕ್ಷಕರಗಳರೂಪದಲ್ಲಿ ಈ ಧಾನ್ಯಗಳ ಮಾರಾಟದ ಧಾರಣೆಗಿಂತಲೂ ಎಷ್ಟೋ ಹೆಚ್ಚು ಬೆಲೆಯನ್ನು ತೆತ್ತಿರುತ್ತಾನೆ. ಈ ಸಮಸ್ಯೆಯನ್ನು ಪರೀಕ್ಷಿಸಿ ಈ ಅಂತರದ ಹಣವೆಲ್ಲಿ ಹೋಯಿತು, ಪ್ರತ್ಯಕ್ಷ ಅಪ್ರತ್ಯಕ್ಷ ರೂಪದಲ್ಲಿ ತೆರುವ ಎಲ್ಲ ಹಣವನ್ನು ಲೆಕ್ಕಕ್ಕೆ ಹಿಡಿದರೆ ಗಿರಾಕಿಗೆ ನಿಜವಾಗಿ ಬೀಳುವ ಬೆಲೆಯೆಷ್ಟು ಎಂಬೀ ಮೊದಲಾದ ಸಂಗತಿಗಳನ್ನು ಹೊರಗೆಳೆಯುವ ಕಾಲ ಬಂದಿದೆ. ಆಹಾರದ ಬೆಲೆ ಈಗಿದ್ದ ಮಟ್ಟದಲ್ಲಿಯೇ ಇರುವಾಗ ಮತ್ತು ಮೇಲೆ ಸರಕಾರಿ ಬೊಕ್ಕಸದಿಂದ ಅದರ ಆಡಳಿತೆಗಾಗಿ ತುಂಬ ಹಣ ಸುರಿದು ನಷ್ಟಮಾಡಿಕೊಳ್ಳುತ್ತಿರುವಾಗ ಅತಿಪ್ರಸರಣನಿರೋಧಕ ಉಪಾಯಗಳು ಸಫಲವಾಗುವ ಸಂಭವವಾದರೂ ಎಲ್ಲಿ ?

### ಸೀದಾಪದ್ಧತಿಯ ಲೋಪದೋಷ

ಸೀದಾಪದ್ಧತಿಯಲ್ಲಿ ಜನರಿಗೆ ಬೇಕಾದುದು—ಪರಿಮಾಣದಲ್ಲಾಗಲಿ ಗುಣದಲ್ಲಾಗಲಿ—ಎಂದೂ ದೊರೆಯಲಿಲ್ಲ. ಕಾರ್ಡಿನ ಮೇಲೆ ಸೀದಾ ಹಂಚುವದರಿಂದ ಅನೇಕ ಕಷ್ಟ ಕಾರ್ಪಣ್ಯಗಳುಂಟಾಗಿ ಅನೇಕರಿಗೆ ಅದರಿಂದಲೇ ಹೊಟ್ಟೆ ಹೊರೆದುಕೊಳ್ಳಲೆಡೆಯಾಯಿತು. ಹೋಟೇಲು ಉಪಾಹಾರ ಮಂದಿರಗಳಿಗೆ ಕೊಡುವ ಆಹಾರ ಪ್ರಮಾಣವನ್ನು ಬೇಕೆಂದೇ ತೀರ ಕಡಿಮೆ ಮಾಡಿದುದರ ಫಲವಾಗಿ ಅವು ಕಳ್ಳಪೇಟೆಯನ್ನು ಆಶ್ರಯಿಸಲೇಬೇಕಾಗಿ ಬಂತು. ರೇಲ್ವೆಯಿಂದಲೇ ಇರಲಿ ಮೋಟಾರುಗಳಿಂದಲೇ ಇರಲಿ ಧಾನ್ಯವನ್ನು ಸಾಗಿಸುವಾಗ ಎಷ್ಟೋ ಧಾನ್ಯ ನಷ್ಟವಾಗಿ ಹೋಗಿ ಅದೆಲ್ಲ ಕಳ್ಳಪೇಟೆ ಸೇರಿತು. ಸೀದಾ ಪದ್ಧತಿಯ ಮೇಲಿನ ಇನ್ನೊಂದು ದೂರೆಂದರೆ ಆಯಾ ಪ್ರದೇಶದ ಜನರಿಗೆ ಆಯಾ ಪ್ರದೇಶದಲ್ಲಿ ಬೆಳೆದ ಧಾನ್ಯ ಸಿಗುವದೇ ಇಲ್ಲವೆಂಬುದು. ಆಹಾರ ಧಾನ್ಯದ ಸಂಘಟನೆಯ ಹೊಣೆ ಹೊತ್ತವರು ಹಳೆಯ ಅಂಕೆಸಂಖ್ಯೆಗಳನ್ನೇ ಅಧರಿಸಿ ದಂತೆಯೂ ಅವರು ಖಚಿತವಾದ ಯಾವ ಕಾರ್ಯಕ್ರಮವನ್ನೂ ಮಾಡಿಕೊಳ್ಳದೆ ಸಾಗಿದಂತೆಯೂ ಕಾಣುತ್ತದೆ. ಕೇಂದ್ರಕ್ಕೂ ಪ್ರಾಂತಗಳಿಗೂ ಸರಿಯಾದ ಸಹಕಾರವಿಲ್ಲ; ಪ್ರಾಂತಗಳು ಕೊರತೆಯ ಪ್ರದೇಶಗಳಿಗಾಗಿ ಆಹಾರ ಕಳಿಸಲು ಕೇಂದ್ರವನ್ನು ಒತ್ತಾಯಪಡಿಸುವವೇ ಹೊರತು ತಮ್ಮ ಪಾಲಿನ ಕೆಲಸವನ್ನು—ಅಂದರೆ ಹೆಚ್ಚು ಕ್ಷೇತ್ರವನ್ನು ಕೃಷಿ ಮಾಡುವದು, ಎತ್ತುವಳಿ ಮತ್ತು ಆಹಾರ ಸಾಗಾಟವನ್ನು ತ್ವರಿತಗೊಳಿಸುವದೇ ಮೊದಲಾದವುಗಳನ್ನು—ಸರಿಯಾಗಿ ಪೂರೈಸುವದಿಲ್ಲ. ವಸ್ತುತಃ ಹಳ್ಳಿಯಿಂದ ಹಳ್ಳಿಗೂ ಜಿಲ್ಲೆಯಿಂದ ಜಿಲ್ಲೆಗೂ ಧಾನ್ಯ ಸಾಗಿಸುವುದಕ್ಕೆ ಅವು ಹಾಕಿದ ಪ್ರತಿಬಂಧಗಳ ಫಲವಾಗಿ ಧಾನ್ಯದ ಚಲಾವಣಿ ತಡೆದುಬಿದ್ದು ಒಮ್ಮೊಮ್ಮೆ ರೈತರಲ್ಲಿಯೇ ಧಾನ್ಯ ಸಂಗ್ರಹಕ್ಕೆ ನುಸಿ ಹತ್ತಿಯೋ ಅಥವಾ ಅದು ಕೆಟ್ಟೋ ಹೋಯಿತು. ಇದೆಲ್ಲದರ ಕೊನೆಯ ಫಲಿತಾಂಶವೆಂದರೆ ಧಾನ್ಯದ ಕೊರತೆಯನ್ನು ಇದ್ದುದಕ್ಕಿಂತ ಹೆಚ್ಚುಮಾಡಿ ತೋರಿಸಿ ಶಾಶ್ವತಗೊಳಿಸುವ ಮೂಲಕ ಸ್ವಾರ್ಥ ಹಿತ ಸಂಬಂಧಗಳಿಗೆ ಲಾಭ ಮಾಡಿಕೊಡುವ ಪ್ರಯತ್ನಗಳಾಗಿವೆ.

### ಆಹಾರ ಸಮಸ್ಯೆಯ ಪರಿಹಾರ

ನಮಗೆ ನಿಜವಾಗಿ ಬೀಳುವ ಆಹಾರ ಕೊರತೆಯೆಂದರೆ ನೂರಕ್ಕೆ ೫—೧೦ ರಷ್ಟು ಅಥವಾ ಇಪ್ಪತ್ತು ಮೂವತ್ತು ಲಕ್ಷ ಟನ್ ಮಾತ್ರ. ಭಾರತವು ಕೃಷಿಪ್ರಧಾನ ದೇಶವಾಗಿದ್ದು ನಮಗೆ ಬೇಕಾದುದರಲ್ಲಿ ಅಧಿಕಾಂಶ ಧಾನ್ಯವನ್ನು ನಾವೇ ಬೆಳೆಯುತ್ತಿರುವುದರಿಂದ ಇದೇನೂ ದೊಡ್ಡ ಕೊರತೆಯಲ್ಲ. ತಲಾ ಲೆಕ್ಕವನ್ನು ತೆಗೆದರೆ ದಿನಕ್ಕೆ ತಲಾ ಅರ್ಧ ಛಟಾಕಿಗಿಂತ ಹೆಚ್ಚು ಕೊರತೆ ಬೀಳದೆಂದು ಹೇಳಬಹುದು. ಕೊರತೆ ತೀರ ಕಡಿಮೆಯಾಗಿದ್ದರೂ ನಿಯಂತ್ರಣ ಮತ್ತು ಸೀದಾ ಪದ್ಧತಿಗಳಿಲ್ಲದೆ ಹೋದರೆ ಬೆಲೆ ಹೆಚ್ಚುವುದಕ್ಕೂ ವ್ಯಾಪಾರಿಗಳು ಕೂಡಹಾಕುವುದಕ್ಕೂ ಶ್ರೀಮಂತರು ಸಿಕ್ಕಾಬಟ್ಟೆ ಕೊಂಡುಕೊಂಡು ಧಾನ್ಯವನ್ನು ದುಂದು ಮಾಡಲಿಕ್ಕೂ ಕಾರಣವಾಗಬಹುದೆಂದು ಸಾಮಾನ್ಯವಾಗಿ ವಾದಿಸುವದುಂಟು. ಈ ಚಿಕ್ಕ ಕೊರತೆಯಿಂದ ಬೆಲೆಗಳು ಏರಬಹುದೆಂದು ನಾನು ಒಪ್ಪುವೆ. ಅದರಿಂದ ವ್ಯಾಪಾರಿಗಳು ಕೂಡಹಾಕುವರೆಂದಾಗಲಿ ಶ್ರೀಮಂತರು ಹೆಚ್ಚು ತಿಂದು ಅಥವಾ ಭೋಜನ ಸಮಾರಂಭಗಳನ್ನು ಮಾಡಿ ಅಪವ್ಯಯಿಸುವರೆಂದಾಗಲಿ ಭಾವಿಸಲು ಕಾರಣವಿಲ್ಲ. ನಿಯಂತ್ರಣ ಮತ್ತು ಸೀದಾಪದ್ಧತಿಯಿದ್ದರೂ ಶ್ರೀಮಂತರು ಬೇಕಾದುದನ್ನು ಬೇಕಾದಷ್ಟು ಕೊಳ್ಳದಂತೆ ಅಥವಾ ಗುಟ್ಟಾಗಿ ಬೇಕಾದ ಸಮಾರಂಭಗಳನ್ನು ಏರ್ಪಡಿಸದಂತೆ ತಡೆಯಲು ಸಾಧ್ಯವಾಗಿಲ್ಲೆಂದು ಎಲ್ಲರಿಗೂ ಗೊತ್ತಿದೆ. ಇನ್ನು ವ್ಯಾಪಾರಿಗಳು ಸಂಗ್ರಹ ಮಾಡುವ ಬಗ್ಗೆ ಹೇಳಬೇಕಾದರೆ, ಪೇಟೆಗೆ ಧಾನ್ಯಗಳು ಏಕಪ್ರಕಾರವಾಗಿ ಬರುತ್ತಿದ್ದರೆ, ಅದೂ ಸರಕಾರದವರು ವಿದೇಶದಿಂದ ಕೊರತೆ ಬಿದ್ದ ಅಂಶವನ್ನು ಆಯಾತ ಮಾಡುತ್ತಿರುವಾಗ, ಆಹಾರ ಧಾನ್ಯಗಳನ್ನು ಕೂಡಹಾಕಿ ಬೆಲೆಗಳನ್ನು ಏರಿಸಲು ಬೇಕಾಗುವ ಹಣ (೧೦೦೦ ಕೋಟಿ ರೂಪಾಯಿ) ವ್ಯಾಪಾರಿಗಳಲ್ಲಿಲ್ಲ. ಏನೇ ಆದರೂ ಈ ಅಲ್ಪ ಕೊರತೆಯನ್ನು ಎದುರಿಸುವ ಸಲುವಾಗಿ, ಇಷ್ಟೆಲ್ಲ ಎತ್ತುವಳಿ ಯೋಜನೆಗಳನ್ನು ಮಾಡಿ ಅದಕ್ಕೆ ಬರುವ ವಿರೋಧವನ್ನೂ ಅದರಿಂದಾಗುವ ಹಾನಿಯನ್ನೂ ಸಹಿಸುವುದಾಗಲಿ ಅವಶ್ಯಕತೆಗಳನ್ನು ಪೂರೈಸದಿರುವುದರಿಂದ ಜನರಿಗೆ ತೊಂದರೆಯುಂಟು ಮಾಡುವುದಾಗಲಿ ಮೂರರಲ್ಲೊಂದಂಶ ಪ್ರಜೆಗಳನ್ನು ಸೀದಾ ಪದ್ಧತಿಗೆ ಒಳಪಡಿಸುವುದಾಗಲಿ ಶುದ್ಧ ಅನವಶ್ಯಕವೇ ಸರಿ. ಇದಕ್ಕೆ ಇನ್ನೂ ಸರಳವಾದ ಯುಕ್ತಿಯನ್ನು ಯೋಜಿಸಿ ಕೇಂದ್ರ ಮತ್ತು ಪ್ರಾಂತಗಳಲ್ಲಿ ಈ ಬಗ್ಗೆ ನಿರ್ಮಿಸಿರುವ ಆಡಳಿತೆಯ ಭಾರವನ್ನು ಕಡಿಮೆ ಮಾಡಬಹುದು. ನಾನು ಇದಕ್ಕೊಂದು ಸುಲಭೋಪಾಯವನ್ನು ಹೇಳಬಲ್ಲೆ. ನಿಯಂತ್ರಣ ಮತ್ತು ಸೀದಾವನ್ನು ಜನಸಂಖ್ಯೆಯಲ್ಲಿ ನೂರಕ್ಕೆ ೫-೧೦ ಅಂಶಕ್ಕಷ್ಟೇ ಮುಖ್ಯವಾಗಿ ಕೊರತೆಯ ಪ್ರದೇಶಗಳಿಗೂ ದೊಡ್ಡ ದೊಡ್ಡ ನಗರಗಳಿಗೂ ಮಿತಗೊಳಿಸಬೇಕು. ಮತ್ತು ಪರದೇಶದಿಂದ ತರಿಸಿದ ಧಾನ್ಯವನ್ನೇ ಉಪಯೋಗಿಸಬೇಕು. ಸಮಾಜದ ಉಳಿದ ವರ್ಗಗಳನ್ನು ನಿಯಂತ್ರಣಗಳಿಂದ ಪೂರ್ತಿಯಾಗಿ ಹೊರಗಿಡಬೇಕು. ಭಾರತದೊಳಗೆ ಎಲ್ಲಿಂದ ಎಲ್ಲಿಗೂ ಅಹಾರಧಾನ್ಯವನ್ನು ಸಾಗಿಸಲು ಅವಕಾಶವಿರಕೂಡದು. ಆದರೆ ಗಡಿ ಪ್ರದೇಶಗಳಲ್ಲಿ, ಮುಖ್ಯವಾಗಿ ಕೊರತೆಯ ಪ್ರದೇಶವಾಗಿರುವ ಪೂರ್ವ ಬಂಗಾಲ ಸೀಮೆಯಲ್ಲಿ, ಆಹಾರ ಧಾನ್ಯಗಳು ಕಳ್ಳ ತಪ್ಪಿಸಿ ಹೊರಗೆ ಸಾಗದಂತೆ ಮಾತ್ರ ಸರಕಾರ ಎಚ್ಚರಿಕೆ ವಹಿಸಬೇಕು. ಸರಕಾರ ಪರದೇಶಗಳಿಂದ ಅಕ್ಕಿಯನ್ನೋ ಗೋದಿಯನ್ನೋ ಕೊಂಡರೆ ಅದನ್ನು ಇಲ್ಲಿಗೆ ಬಂದಿಳಿದಾಗಿನ ಬೆಲೆಯ ಮೇಲೆ ಸಾಗಮಜೂರಿಯನ್ನಷ್ಟೇ ತೆಗೆದುಕೊಂಡು ಮಾರಬೇಕು. ಮಾತ್ರವಲ್ಲ, ಅದನ್ನು ಸರಕಾರಿ ನೌಕರಗಳ ಮುಖಾಂತರ ಮಾರದೆ, ಗಿರಣಿಗಳೇ ಮೊದಲಾದ ವ್ಯಾಪಾರಿ ಸಂಸ್ಥೆಗಳಿಗೇ ವಹಿಸಿಬಿಟ್ಟು ಬಂದರಗಳಿಂದಲೇ ನೇರವಾಗಿ ಧಾನ್ಯಗಳನ್ನು ಕೊಂಡೊಯ್ಯುವಂತೆ ಅವರಿಗೆ ಹೇಳಬೇಕು. ಹೀಗಾದರೆ ಅವುಗಳನ್ನು ಜೋಪಾನ ಮಾಡುವ ವೆಚ್ಚವೂ ಮಧ್ಯದಲ್ಲಾಗುವ ನಷ್ಟವೂ ಉಳಿಯುವುದು. ಸರಕಾರದವರು ಕೊಳ್ಳುವ ರಾಗಲಿ ವ್ಯಾಪಾರಿಗಳಾಗಲಿ ಅಲ್ಲಿನ ಜನರಿಗಾಗಿ ತಮ್ಮದೇ ಅಗ್ಗದರದ ಅಂಗಡಿಗಳನ್ನೂ ನಡೆಸಬಹುದು. ಇದಲ್ಲದೆ ಈ ವಿದೇಶಿ ಧಾನ್ಯಗಳನ್ನು ಬಂದರಗಳಲ್ಲಿ ಅಥವಾ ಸುತ್ತು ಮುತ್ತಲಿನ ಪ್ರದೇಶಗಳಲ್ಲಿಯೂ ಹೆಚ್ಚಾಗಿ ರೊಕ್ಕದ ಬೆಳೆಗಳನ್ನೇ ಬೆಳೆಯುವ ಭಾಗಗಳಲ್ಲಿಯೂ ವ್ಯಾಪಾರಿಗಳಲ್ಲಿ ಲಾಭಬಡಕತನದ ಮನೋವೃತ್ತಿಯಿರುವ ಕ್ಷೇತ್ರಗಳಲ್ಲಿಯೂ ಮಾರಬೇಕೆಂದೂ ನನ್ನ ಸೂಚನೆಯುಂಟು. ಮೊದಲೆ ಹೇಳಿದಂತೆ, ಸೀದಾ ಕ್ಷೇತ್ರಗಳಲ್ಲಿ ಕೂಡ ಆಹಾರ ಧಾನ್ಯದ ಸಾಗಾಟಕ್ಕೆ ಆತಂಕವಿರತಕ್ಕದ್ದಲ್ಲ. ವಿದೇಶಿ ಧಾನ್ಯಗಳ ಮೇಲೆ ಮನಸಿಲ್ಲದವರಿಗೆ ಸ್ಥಳೀಯ ಸರಕನ್ನೆ ಕೊಳ್ಳಲು ಇದರಿಂದ ಅವಕಾಶವಾಗುವುದು. ವಿದೇಶಗಳಲ್ಲಿ ಅಹಾರ ಧಾನ್ಯದ ಪೇಟೆಗಳಲ್ಲಿ ನಿಯಂತ್ರಣವಿಲ್ಲದಿದ್ದರೆ, ಅಲ್ಲಿಂದ ಕೊಂಡು ತರುವ ಕೆಲಸವನ್ನು ಕೂಡ ಸರಕಾರ ಹೊತ್ತುಕೊಳ್ಳದೆ ವ್ಯಾಪಾರಿ ಸಂಸ್ಥೆಗಳಿಗೇ ಬಿಟ್ಟುಕೊಡಬೇಕು. ಆದರೆ ಈಗ ಜಗತ್ತಿನಲ್ಲೆಲ್ಲ ಆಹಾರದ ನಿಜವಾದ ಅಥವಾ ಕೃತಕವಾದ ಕೊರತೆ ಹಬ್ಬಿರುವುದರಿಂದ ವಿದೇಶೀ ಸರಕಾರಗಳು ಈ ಪರಿಸ್ಥಿತಿಯಿಂದ ಸಾಧ್ಯವಾದಷ್ಟು ಲಾಭ ದೋಚಿಕೊಳ್ಳಲು ಪ್ರಯತ್ನಿಸುತ್ತವೆ. ಸರಕಾರಕ್ಕೆ ಅನಿವಾರ್ಯವಾಗಿ ಧಾನ್ಯವನ್ನು ಎತ್ತುವ ಪ್ರಸಂಗವೇ ಬಂದರೂ ಸರಕಾರದ ಎತ್ತುವಳಿಯ ಧಾರಣೆಗೂ ಅದು ಮಾರುವ ಧಾರಣೆಗೂ ಎಲ್ಲ ಸೇರಿ ನೂರಕ್ಕೆ ೧೦—೨೦ ಕ್ಕಿಂತ ಹೆಚ್ಚು ಅಂತರವಿರಕೂಡದು, ಅರ್ಥಾತ್ ಎತ್ತುವಳಿ ಮತ್ತು ಮಾರಾಟದ ದರಗಳಲ್ಲಿನ ಅಂತರ ಸೀದಾಪೂರ್ವದ ಪ್ರಮಾಣಕ್ಕಿಂತ ಹೆಚ್ಚಾಗಿರಕೂಡದು.

ಸದ್ಯದ ಪದ್ಧತಿಯಲ್ಲಿ ಆಗುವ ಕೆಲ ಸಾಗಿಗೆ ಮತ್ತು ಜೋಪಾನದ ವೆಚ್ಚಗಳನ್ನು ತಪ್ಪಿಸಬಹುದೆಂದು ನನಗೆನಿಸುತ್ತದೆ. ಏಕೆಂದರೆ ಮೊದಲು ಹಡಗಗಳಿಂದ ಧಾನ್ಯಗಳನ್ನಿಳಿಸಿ ಯಾವುದಾದರೊಂದು ಕೇಂದ್ರ ಸಂಗ್ರಹಾಲಯಕ್ಕೆ ಒಯ್ದು, ಆ ಮೇಲೆ ಅವುಗಳನ್ನು ಪ್ರಾಂತಿಕಕೇಂದ್ರಗಳಿಗೆ ಕಳಿಸುವುದೂ ಅಲ್ಲಿಂದ ತಿರುಗಿ ಬೇರೆ ಬೇರೆ ವಿತರಣಕೇಂದ್ರಗಳಿಗೆ ಹಂಚುವುದೂ ಸರಕಾರದ ಸಾಮಾನ್ಯ ಸಂಪ್ರದಾಯ. ನಾನು ನಿಶ್ಚಿತವಾಗಿ ಹೇಳಲಾರೆನಾದರೂ ಸರಕಾರದ ಕೊಳ್ಳುವ ಮತ್ತು ಮಾರುವ ಧಾರಣೆಗಳಲ್ಲಿರುವ ಅಂತರಕ್ಕೆ ಪೂರ್ಣವಾಗಿ ಅಲ್ಲದಿದ್ದರೂ ಅಂಶತಃ ಇದೇ ಕಾರಣವಾಗಿರಬಹುದು. ಸರಕಾರವು ಆಹಾರ ಧಾನ್ಯದ ವ್ಯಾಪಾರದ ಸರಿಯಾದ ಪರಿಶೋಧಿಸಿದ (ಆಡಿಟ್ ಮಾಡಿದ) ಲೆಕ್ಕಗಳನ್ನು ಪ್ರಕಟಿಸುವುದವಶ್ಯ. ಅದರಲ್ಲಿ ಧಾನ್ಯದ ಸಮ್ಮ [illegible] ಈಗ ಬಂದು ಬೀಳುವಾಗಿನ ಬೆಲೆಯನ್ನು ಅಂದರೆ ಅದಕ್ಕಾಗಿ ವಿದೇಶೀಯರಿಗೆ ತೆತ್ತ ಮೂಲ ಬೆಲೆ, ಸಾರಿಗೆ ವೆಚ್ಚ, ವಿಮಾ ವೆಚ್ಚ, ಜೋಪಾನದ ವೆಚ್ಚ, ಸವಕಳಿ, ಸಾಗಾಟದಲ್ಲಿನ ನಷ್ಟ ಮೊದಲಾದ ವಿವರಗಳನ್ನು ಒದಗಿಸಬೇಕು. ಬದಿಗೂ ಇನ್ನೊಂದು ಬದಿಗೆ ಮಾರಿದ್ದರಿಂದ ದೊರೆತ ಹಣ ಮತ್ತು ಕೊನೆಗೆ ಉಳಿದ ಶಿಲ್ಕನ್ನೂ ತೋರಿಸಬೇಕು. ಈ ಲೆಕ್ಕವನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಪ್ರಕಟಿಸಬೇಕು, ವರ್ಷಗಟ್ಟಳೆ ಕಳೆದ ಮೇಲೆ, ಆಡಳಿತ ಶಾಖೆಯ ದಾಖಲೆಗಾಗಿ ಮಾತ್ರ ಪ್ರಕಟಿಸಿದರೆ ಪ್ರಯೋಜನವಿಲ್ಲ. (ಅಪೂರ್ಣ)

# ಸೆಪ್ಟೆಂಬರ ೫ ರಿಂದ ೧೧ ರ ವರೆಗೆ

[ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಭಿಡೆ, ಬೆಳಗಾಂವಿ]

### ಮೇಷ

ಈ ವಾರದಲ್ಲಿ ನಿಮಗೆ ಸರ್ವ ವಿಧದಿಂದಲೂ ಎಚ್ಚರಿಕೆಯಿಂದಿರಲು ಹೇಳಬೇಕಾಗಿದೆ. ನಿಮ್ಮ ಆರೋಗ್ಯವೂ ಅಷ್ಟಿಷ್ಟು ಕೆಡಬಹುದಾದರೂ ಹೆಂಡತಿಯದು ಚಿಂತಾಜನಕವಾಗಬಹುದು. ಮಕ್ಕಳೂ ಈಗ ಅನೇಕ ದಿನಗಳಿಂದ ನಿಮಗೆ ನಾನಾ ಕಷ್ಟಗಳನ್ನು ತಂದೊಡ್ಡುತ್ತಿದ್ದಾರೆ. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ಮಾನ ವಿಲ್ಲದ ಧನಕ್ಕೆ ಏನೂ ಬೆಲೆಯಿಲ್ಲವೆ? ಅನವಶ್ಯಕ ವಾಗಿ ಶತ್ರುಗಳ ಸಂಖ್ಯೆ ಹೆಚ್ಚಿಸಿಕೊಳ್ಳ ಬೇಡಿರಿ. ಮಿತ್ರರೂ ನಿಮಗೊಂದು ಕೈ ತೋರಿಸಲು ಸಿದ್ಧರಾಗಬಹುದು. ವ್ಯಾಜ್ಯ ಮೊದಲಾದ ವಿವಾದಗಳಲ್ಲಿ ನಿಮಗೆ ಗೆಲವು ದೊರೆತರೂ ಶತ್ರುಗಳು ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳಲಾರರು. ನೀವೂ ನಿಶ್ಚಿಂತೆ ಯಿಂದ ಇರಬೇಡಿರಿ. ಪ್ರವಾಸ ಉತ್ತಮ. ಭೆಟ್ಟಿ ಪತ್ರವ್ಯವಹಾರ ಅಷ್ಟಕ್ಕಷ್ಟೆ. ಅಶ್ವಿನಿಯ ೪ ನೆ ಮತ್ತು ಭರಣಿಯ ಮೊದಲ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೬, ೭, ೧೧ ಅನುಕೂಲ.

### ವೃಷಭ

ಪ್ರಕೃತಿ ಸ್ವಸ್ಥ. ಮಕ್ಕಳಲ್ಲೊಬ್ಬನ ಉತ್ಕರ್ಷ. ದೂರದ ಆಪ್ತರೂ ಮನೆಯ ನೌಕರ ಚಾಕರರೂ ತುಂಬ ತಲೆ ಕೆಡುವ ರೀತಿ ಯಲ್ಲಿ ಕಾಡಬಹುದು. ವಾಹನ ಮತ್ತು ಜಾನ ವಾರುಗಳು ಮುರಿಯುವದು ಮತ್ತು ಜಡ್ಡಾ ಗುವದೇ ಮೊದಲಾದ ಕಾರಣಗಳಿಂದ ಸ್ವಲ್ಪ ಕಾರ್ಯ ಹಾನಿ. ಉದ್ಯೋಗದಲ್ಲಿ ಲಾಭವೂ ಪ್ರತಿಷ್ಠೆಯೂ ಉತ್ತಮವಾಗಿರುವುದಲ್ಲದೆ ಅಕಸ್ಮಾತ್ ಧನಲಾಭವಾಗುವ ಸಂಭವವೂ ಇದೆ. ವ್ಯಾಜ್ಯ ಸ್ಪರ್ಧೆ ಮೊದಲಾದ ವ್ಯವಹಾರಗಳಲ್ಲಿ ನೀವು ಸೀದಾ ದಾರಿ ಹಿಡಿಯುವುದು ಲೇಸೆಂದು ಸೂಚನೆಯಿದೆ. ದುರ್ಬುದ್ಧಿ ಮಾಡಿದರೆ ಅದು ನಿಮಗೇ ಹೊಡೆತ ಕೊಟ್ಟೀತು. ಮಿತ್ರಸುಖ ಉತ್ತಮ. ಪ್ರವಾಸದ ಗೊಡವೆ ಬೇಡ, ಭೆಟ್ಟಿ ಪತ್ರವ್ಯವಹಾರಗಳು ಸರಾಗವಾಗಿ ಫಲಿಸುವವು. ಕೃತ್ತಿಕೆಯ ೪ ನೆ ಮತ್ತು ರೋಹಿಣಿಯ ಮೊದಲ ಮೂರು ಚರಣಗಳಿಗೆ ಅನಿಷ್ಟ ಕಡಿಮೆ. ತಾ. ೬, ೭, ೮ ಅನುಕೂಲ.

### ಮಿಥುನ

ಮಕ್ಕಳು ಮತ್ತು ದಾಯಾದ್ಯರಿಂದ ನಿಮಗುಂಟಾಗುವ ತೊಂದರೆಗಳನ್ನು ಎದುರಿಸಲು ನಿಮ್ಮ ಆರೋಗ್ಯವೂ ಪತ್ನಿಯ ಪೂರ್ಣ ಸಹಕಾರವೂ ನಿಮಗೆ ಅನುಕೂಲವಾಗುವದೆಂದು ಹೇಳಲು ಸಂತೋಷವಾಗುತ್ತದೆ. ಉದ್ಯೋಗದಲ್ಲಿ ತೋಟ ಸಿಂಗಾರ ಒಳಗೆ ಗೋಳೀ ಸೊಪ್ಪು ಎಂದ ಹಾಗೆ ಪ್ರತಿಷ್ಠೆಗೆ ತಕ್ಕ ಲಾಭವಿಲ್ಲ. ಸ್ಥಿರಾಸ್ತಿಯಲ್ಲಿ ಅನುಕೂಲ ಘಟನೆಗಳು ಜರಗುವವು. ಮಿತ್ರರು ಮಾತ್ರ ಮನನೋಯಿಸುವಂತೆ ಆಡುವರು. ಅಲ್ಲದೆ ಶತ್ರುಗಳು ತುಂಬ ಜೋರು ಮಾಡುವರು. ಆದರೂ ಜಯಲಕ್ಷ್ಮಿಯ ಒಲವು ನಿಮ್ಮ ಕಡೆಗೇ ಎಂದು ಹೇಳಲಡ್ಡಿಯಿಲ್ಲ. ಸ್ವಲ್ಪ ಅನಿರೀಕ್ಷಿತ ಲಾಭವೂ ದೊರಕೀತು. ವಾಹನಯೋಗವೂ ಇದೆ. ಪ್ರವಾಸಕ್ಕೆ ಅನುಕೂಲ ಕಾಲವಿದಲ್ಲ. ಭೆಟ್ಟಿ ಮತ್ತು ಪತ್ರವ್ಯವಹಾರ ಅಡ್ಡಿಯಿಲ್ಲ. ಮೃಗಶಿರದ ೪ ನೆ ಮತ್ತು ಆರ್ದ್ರೆಯ ಮೊದಲ ೩ ಚರಣಗಳಿಗೆ ಅಷ್ಟು ತೊಂದರೆಯಿಲ್ಲ. ತಾ. ೮, ೯, ೧೦, ೧೧ ಅನುಕೂಲ.

### ಕರ್ಕ

ಸ್ವಂತಕ್ಕೆ ಶೈತ್ಯಪಿತ್ತದಿಂದಲೂ ಹೆಂಡತಿಗೆ ಉಷ್ಣವಾತದಿಂದಲೂ ಸ್ವಲ್ಪ ಕ್ಲೇಶವಾಗುವ ಸಂಭವವುಂಟು. ಮಕ್ಕಳಲ್ಲಿ ಒಬ್ಬರ ಉನ್ನತಿ. ಪ್ರಾಪಂಚಿಕಸುಖ ಅರ್ಧಮರ್ಧ. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಅಷ್ಟಕ್ಕಷ್ಟೆ. ದಾಯಾದ್ಯರೂ ಮಿತ್ರರೂ ನಿಮ್ಮನ್ನು ದಪೋರ್ಕ್ತಿಗಳಿಂದ ತೆಗಳಬಹುದು. ಆದರೆ ಅದನ್ನೆಲ್ಲ ತಲೆಯಲ್ಲಿ ಹಾಕಿಕೊಳ್ಳದಷ್ಟು ಮನೋಧೈರ್ಯ ನಿಮಗಿದೆಯೆಂದು ಭರವಸೆಯುಂಟು. ಒಬ್ಬನ ಮೇಲೆ ಸ್ವತಂತ್ರ ಧಂದೆ ಮಾಡುವವರಿಗಿಂತ ನೌಕರಿಮಾಡುವವರಿಗೆ ತೊಂದರೆ ಕಡಿಮೆ. ಶತ್ರುಗಳೂ ಅವರ ಸಖ್ಯದಿಂದ ಹೊಸ ಹೊಸ ಶತ್ರುಗಳೂ ನಿಮ್ಮನ್ನು ಕಾಡಲು ಹವಣಿಸಬಹುದು. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರವೇ ಲೇಸು. ಪುಷ್ಯದ ೪ ನೆ ಮತ್ತು ಆಶ್ಲೇಷೆಯ ಮೊದಲ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೫, ೧೦, ೧೧ ಅನುಕೂಲ.

### ಸಿಂಹ

ನಿಮ್ಮ ಆರೋಗ್ಯ ನೆಟ್ಟಗೆ; ಹೆಂಡತಿಗೆ ಹೊಸ ಕಾಯಿಲೆಗಳು ಬರುವ ಸಂಭವವುಂಟು ಬೇರೆ ವಿಚಾರಗಳಲ್ಲಿ ಪ್ರಾಪಂಚಿಕ ಸೌಖ್ಯಕ್ಕೆ ಲೋಪವಿಲ್ಲ. ಉದ್ಯೋಗದಲ್ಲಿ ಪ್ರತಿಷ್ಠೆ ಕುಂದದಂತೆ ನೋಡಿಕೊಳ್ಳಿರಿ ಲಾಭ ಯಥೇಷ್ಟ ದೊರಕುವುದು. ಹೊಸ ಹೊಸ ವಸ್ತುಗಳನ್ನು ಕೈಸೇರಿಸಿಕೊಳ್ಳುವಿರಿ. ವ್ಯಾಜ್ಯ ಮೊದಲಾದ ವ್ಯವಹಾರಗಳಲ್ಲಿ ಸ್ಪರ್ಧೆಗೆ ಬಿದ್ದು ದುಸ್ಸಾಹಸ ಮತ್ತು ವೆಚ್ಚಕ್ಕೆ ಕೈಹಾಕದಿರುವುದೇ ಮೇಲು. ಬರಬಹುದಾದ ಸೋಲಿನಿಂದ ಆದಷ್ಟು ಕಡಿಮೆ ಹಾನಿಯಾಗುವಂತೆ ನೋಡಿಕೊಳ್ಳುವುದು ನಿಮ್ಮ ಮುಖ್ಯ ಕಾರ್ಯ. ಅನುಕೂಲ ಪ್ರಸಂಗವಿಲ್ಲದಾಗ ಸೈನ್ಯವನ್ನು ಹಿನ್ನಡೆಸಿ ಇದ್ದ ಶಕ್ತಿಯನ್ನು ಕಾಪಾಡಿಕೊಳ್ಳುವ ಸೇನಾಪತಿಯಂತೆ ನೀವು ನಡೆದುಕೊಳ್ಳಿರಿ. ಪ್ರವಾಸ ಬೇಡ. ಭೆಟ್ಟಿ ಪತ್ರವ್ಯವಹಾರಕ್ಕೆ ಅಡ್ಡಿಯಿಲ್ಲ. ಮಘೆಯ ಕೊನೆಯ ಮತ್ತು ಪೂರ್ವಾದ ಮೊದಲ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೬, ೭, ೧೧ ಅನುಕೂಲ.

### ಕನ್ಯಾ

ನಿಮ್ಮ ನು ಮತ್ತು ಪತ್ನಿಯ ಆರೋಗ್ಯ ಉತ್ತಮ. ಮಕ್ಕಳಿಗೆ ಸ್ವಲ್ಪ ಅಸ್ವಸ್ಥವಾಗಬಹುದು. ಉಳಿದ ವಿಚಾರಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ ಒಳ್ಳೆಯದೇ ಎನ್ನಬಹುದು. ಉದ್ಯೋಗದಲ್ಲಿ ಪ್ರತಿಷ್ಠೆಯಂತೆ ಲಾಭವೂ ಚನ್ನಾಗಿದ್ದರೂ ಕಂಡಾಬಟ್ಟೆ ಖರ್ಚುಕೂಡ ಬರುವಕಾರಣ ಕೈಕಟ್ಟದಂತಾದೀತು. ವಾಜ್ಯ ಮೊದಲಾದ್ದರಲ್ಲಿ ಹೇಳತಕ್ಕ ಮಾತೇನೂ ಘಟಿಸುವುದಿಲ್ಲ. ಮಿತ್ರಸುಖ ಉತ್ತಮ. ಪ್ರವಾಸಕ್ಕಿಂತ ಭೆಟ್ಟಿ ಪತ್ರವ್ಯವಹಾರಗಳು ಲೇಸು. ಉತ್ತರೆಯ ೪ ನೆ ಮತ್ತು ಹಸ್ತದ ಮೊದಲ ೩ ಚರಣಗಳಿಗೆ ಅಷ್ಟು ತೊಂದರೆಯಿಲ್ಲ. ತಾ. ೫, ೮, ೯, ೧೦ ಅನುಕೂಲ.

### ತುಲಾ

ನಿಮ್ಮ ಮತ್ತು ಹೆಂಡತಿಯ ಆರೋಗ್ಯ ಬಹಳ ಕೆಡುವದು ಮಕ್ಕಳು ಮೇಲಿಂದಮೇಲೆ ನಿಮ ವಿರುದ್ಧ ವರ್ತಿಸುವದು. ಎಲ್ಲ ವಿಷಯಗಳಲ್ಲಿಯೂ ಪ್ರಾಪಂಚಿಕಸುಖ ಮಧ್ಯಮ ಸ್ಥಾವರದಲ್ಲಿ ಹೊಸ ಸಂಗ್ರಹವು ಅಲ್ಪಾಯಾಸದಿಂದ ಆಗುವದು. ಉದ್ಯೋಗದಲ್ಲಿ ಪ್ರಗತಿ ಕಡಮೆಯಾದರೂ ಲಾಭ ಬಹಳ ಉತ್ತಮ. ವೆಚ್ಚ ವಿಪರೀತವಾದರೂ ಅದರಲ್ಲಿಯ ಹೇತು ಮಾತ್ರ ಸಾಧ್ಯವಾಗುವದು. ಮಿತ್ರರು ದ್ವೇಷ ಮೂಲಕವಾಗಿ ವರ್ತಿಸುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸ್ವತಃ ನಿಮಗೆ ಯಶಸ್ಸು ಸಾಮಾನ್ಯದೊರೆತರೂ ಶತ್ರುಗಳಿಗೆ ಬಹಳ ಹಾನಿ ಪಂಛಾರೆ ಆಗುವ ಸಂಭವ ಪ್ರವಾಸ ಮತ್ತು ಪತ್ರವ್ಯವಹಾಕ್ಕಿಂತ ಭೆಟ್ಟಿ ಉತ್ತಮ ಚಿತ್ತ್ರಾದ ೪ ನೆ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೬, ೭, ೧೧ ಅನುಕೂಲ.

### ವೃಶ್ಚಿಕ

ನಿಮ್ಮ ಹೆಂಡತಿಯ ಮತ್ತು ಮಕ್ಕಳ ಆರೋಗ್ಯವು ಸಾಧಾರಣವೆ. ಆದರೆ ಉಳಿದ ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಪ್ರಿಯಜನರ ಸಹವಾಸ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಅತಿ ಉತ್ತಮ. ಆದರೆ ಪ್ರತಿಷ್ಠೆಗೆ ದೊಡ್ಡದೊಂದು ಆಘಾತವುಂಟಾಗುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಅನುರಾಧೆಯ ೪ ನೆ ಮತ್ತು ಜ್ಯೇಷ್ಠದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೫, ೮, ೯, ೧೦ ಅನುಕೂಲ.

### ಧನು

ನಿಮ್ಮ ಮತ್ತು ಹೆಂಡತಿಯ ಆರೋಗ್ಯ ಉತ್ತಮ. ಆದರೆ ಮಕ್ಕಳಲ್ಲಿ ಒಬ್ಬರಿಗೆ ಬಹಳ ಕ್ಲೇಶ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ ಅನುಕೂಲ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ಮತ್ತು ಉತ್ತಮ ಪ್ರತಿಷ್ಠೆ. ಆದರೆ ಆ ಮಾನದಿಂದ ಲಾಭ ಕಡಮೆ. ಮಿತ್ರರು ವಿಪರೀತ ತೊಂದರೆ ಕೊಡುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ, ಧಾರ್ಮಿಕ ಕೃತ್ಯಗಳಲ್ಲಿ ವಿಘ್ನ. ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಮೂಲದ ೪ ಮತ್ತು ಪೂರ್ವಾಷಾಢದ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು ತಾ. ೫, ೬, ೭, ೧೧ ಅನುಕೂಲ.

### ಮಕರ

ನಿಮ್ಮಗಿಂತ ಹೆಂಡತಿಯ ಮತ್ತು ಮಕ್ಕಳ ಪ್ರಕೃತಿ ಅನುಕೂಲ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ ಅನುಕೂಲ. ಅತ್ತೆಯಮನೆಯವರಲ್ಲಿ ಒಬ್ಬರಿಗೆ ಬಹಳ ಕ್ಲೇಶ. ಒಂದು ವೇಳೆ ಅವರ ವಿಯೋಗವೂ ಆಗುವ ಅಂಜಿಕೆಯುಂಟು. ಉದ್ಯೋಗದಲ್ಲಿ ಉತ್ತಮ ಪ್ರಗತಿ ಆದರೆ ಪ್ರತಿಷ್ಠೆ ಮತ್ತು ಲಾಭ ಬಹಳ ಕಡಮೆ. ಬಹುತರ ಎಲ್ಲ ವಿಷಯಗಳಲ್ಲಿ ವಿಪರೀತ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಉತ್ತರಾಷಾಢದ ೪ ನೆ ಮತ್ತು ಶ್ರವಣದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೪, ೬, ೭, ೮ ಅನುಕೂಲ.

### ಕುಂಭ

ನಿಮ್ಮ ಪ್ರಕೃತಿ ಸಾಧಾರಣವೆ. ಆದರೆ ಹೆಂಡತಿಯ ಮತ್ತು ಮಕ್ಕಳ ಆರೋಗ್ಯ ಉತ್ತಮ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಬಹಳ ಕಡಮೆ. ನಿಮ್ಮ ವಿಷಯಕ್ಕೆ ಜನಾಭಿಪ್ರಾಯ ಒಮ್ಮೆಲೆ ಕೆಡುವ ಚಮತ್ಕಾರಕ ಘಟನೆಗಳು. ಆದರೆ ಲಾಭ ಅನುಕೂಲ. ಸ್ವಲ್ಪ ಅವಚಿತ ಲಾಭದ್ದೂ ಸಂಭವ. ಸ್ವಲ್ಪ ಶುಭಸೂಚಕ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅಲ್ಪ ಯಶಸ್ಸು ಮಿತ್ರ ಸುಖ ಉತ್ತಮ. ಪ್ರವಾಸಾದಿ ಕೆಲಸ ಅಲ್ಪಸ್ವಲ್ಪ ಮನಸ್ಸಿನ ವಿರುದ್ಧ. ಧನಿಷ್ಠೆಯ ೪ ನೆ ಮತ್ತು ಶತತಾರಕೆಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೬, ೭, ೮, ೯ ಅನುಕೂಲ.

### ಮೀನ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಮಕ್ಕಳು ವಿಶೇಷ ಸಮಾಧಾನದಿಂದ ವರ್ತಿಸುವರು. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ಮತ್ತು ದೊಡ್ಡ ಪ್ರತಿಷ್ಠೆ. ಆದರೆ ಲಾಭ ಕಡಮೆ. ಪ್ರಿಯ ಜನರ ಸಹವಾಸ. ಮಿತ್ರರಲ್ಲಿ ಬಹಳ ವ್ಯತ್ಯಯ ಬರುವಂತಹ ಅನುಚಿತ ಪ್ರಕರಣ ಸಂಭವಿಸುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಸರಕಾರಿ ಕೆಲಸ ಮನಸ್ಸಿನಂತೆ ಸಂಭವಿಸುವ ಯೋಗ. ಪ್ರವಾಸ ಸಾಧಾರಣವೆ. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಉತ್ತರಾಭಾದ್ರಪದದ ೪ ನೆ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೫, ೮, ೯, ೧೦ ಅನುಕೂಲ.


## ರೂಪಾಯಿ ೧೦,೦೦೦ ಮುಫತ್ತು



**ಚಿನ್ನ ತೊಲ ಒಂದಕ್ಕೆ ರೂ.೨—೮—೦**

**"ಅಮೇರಿಕನ್ ಹೊಸ ಚಿನ್ನ"ದ ಅದ್ಭುತ ಪ್ರಖ್ಯಾತಿ**

ಒಂದು ಸಲ ಪರೀಕ್ಷಿಸಿರಿ! ಸಂತುಷ್ಟರಾಗುವಿರಿ!

**ಪಥನ್‌ಕೋಟೆಯ ಶ್ರೀ ಹಜಾರಿಲಾಲ್ ಜಾವಲರ ಅಭಿಪ್ರಾಯ :**

"ನೀವು ಕಳುಹಿಸಿದ 'ಅಮೇರಿಕನ್ ನ್ಯೂ ಗೋಲ್ಡ್'ನ ಪಾರ್ಸಲ್ ತಲುಪಿತು ತುಂಬಾ ಉಪಕಾರಿ, ಚಿನ್ನಕ್ಕೆ ಸರಿಸಮಾನವಾಗಿದೆ ಎಂದು ತಿಳಿಸಲು ತುಂಬಾ ಹರ್ಷವಾಗುತ್ತೆ. ಈ ಕಾಗದ ತಲುಪಿದ ಕ್ಷಣ ೬ ತೊಲ ಚಿನ್ನವನ್ನು ಕಳುಹಿಸಿಕೊಡಿ. ಇನ್ನಷ್ಟು ಆರ್ಡರುಗಳನ್ನು ಕಳುಹಿಸಲಿರುವೆವು."

ವಜ್ರ ಕಲ್ಲು ಕಟ್ಟದಕ್ಕೆ ಈ ಚಿನ್ನವು ಅಪ್ಪಟ ಚಿನ್ನದಷ್ಟೇ ಹೊಳಪು ಕೊಡುವುದು ಈ ಚಿನ್ನವನ್ನು ತಂತಿಯಾಗಿ ಎಳೆಯಬಹುದಲ್ಲದೆ ತಟ್ಟೆಯಾಗಿಯೂ ಹೊಡೆಯಬಹುದು ಎಲ್ಲ ಬಗೆಯ ಆಭರಣಗಳನ್ನೂ ತಯಾರಿಸಬಹುದು. ಅನುಭವಿಯಾದ ಒಡವೆ ವ್ಯಾಪಾರಿಗೂ ಪರೀಕ್ಷಿಸಿ ಹೇಳಲಸಾಧ್ಯ. ಮೇಲೆ ನಮೂದಿಸಿದ ಸರ್ಟಿಫಿಕೇಟ್ ತಪ್ಪೆಂದು ರುಜುವಾತು ಮಾಡುವವರಿಗೆ ರೂ. ೧೦,೦೦೦ ಬಹುಮಾನ. ಈ ಚಿನ್ನದ ಪ್ರಚಾರಕ್ಕಾಗಿ ಪ್ರತಿ ಚಿನ್ನವು ತೊಲ ೧ ಕ್ಕೆ ರೂ. ೨-೮-೦, ೩ ತೊಲಕ್ಕೆ ರೂ. ೭, ೬ ತೊಲಕ್ಕೆ ರೂ. ೧೩ ಮತ್ತು ೧೦ ತೊಲಕ್ಕೆ ರೂ. ೨೦ ರಂತೆಯೂ ಕೊಡಲಾಗುತ್ತೆ. ಅಂಚೆಯ ವೆಚ್ಚ ಪ್ರತ್ಯೇಕ ಒಪ್ಪಿಗೆಯಾಗದಿದ್ದಲ್ಲಿ ಹಣ ವಾಪಸ್.

ಮುಫತ್ತು:— ೩ ತೊಲ ಚಿನ್ನ ಕೊಳ್ಳುವವರಿಗೆ, ನವೀನ ಮಾದರಿಯ ೨ ಜೊತೆ ಬಳೆ. ೬ ತೊಲ ಕೊಳ್ಳುವವರಿಗೆ ೨ ಜೊತೆ ನೂತನ ಬಗೆ ಬಳೆಗಳು ಮತ್ತು ಒಂದು ಜೊತೆ ಕಿವಿಯಾಭರಣ ೧೦ ತೊಲಕೊಳ್ಳುವವರಿಗೆ ಆಧುನಿಕ "ನೆಕ್‌ಲೇಸ್" ಮುಫತ್ತುಕೊಡಲಾಗುತ್ತೆ.

THE IMPERIAL COMMERICIAL COMPANY. REGD:
( K. V. H. ) JULLUNDUR CITY.

## ರೂ ೩,೦೦೦ ಉಚಿತ ಬಹುಮಾನ



ನಿರಾಶರಾದ ಪ್ರೇಮಿಗಳು ತಮ್ಮ ಇಷ್ಟಾರ್ಥಗಳನ್ನು ನಮ್ಮ ಮಹಾಕಾಳಿ ಯಂತ್ರವನ್ನು ತರಿಸಿಕೊಳ್ಳುವದರ ಮೂಲಕ ಪೂರೈಸಿಕೊಳ್ಳಬಹುದು. ನಿಮ್ಮ ಮನಸ್ಸಿನಲ್ಲಿ ಪ್ರೀತಿಸುವವರು, ನೆನೆಸಿಕೊಳ್ಳುವವರು, ಅವರು ಎಷ್ಟೇ ಕಲ್ಲಿನಂತಹ ಕಠಿಣ ಹೃದಯಿಗಳಾಗಿರಲಿ, ಈ ಯಂತ್ರ ನಿಮ್ಮ ಬಳಿಯಲ್ಲಿದ್ದರೆ ಅವರು ತಾವೇ ತಾವಾಗಿ ನಿಮ್ಮ ಸ್ವಾಧೀನರಾಗುತ್ತಾರೆ. ನಿಮ್ಮನ್ನು ಭೆಟ್ಟಿಯಾಗಲು ಅವರು ಬಹು ಕಾತುರರಾಗಿರುತ್ತಾರೆ. ನಿಮ್ಮನ್ನು ಪ್ರೀತಿಸಲು ಆರಂಭಿಸುತ್ತಾರೆ. ಅನೇಕಾನೇಕ ದಿನಗಳಿಂದ ಈಡೇರದಿದ್ದ ನಿಮ್ಮ ಇಷ್ಟಾರ್ಥಗಳೆಲ್ಲ ಕೆಲವೇ ಕೆಲವು ದಿನಗಳಲ್ಲಿ ಅಸಲಿ ಮಹಾಕಾಳಿ ಯಂತ್ರವನ್ನು ನಿಮ್ಮ ಬಳಿ ಇಟ್ಟುಕೊಳ್ಳುವುದರಿಂದ ನಿಸ್ಸಂಶಯವಾಗಿ ಈಡೇರುವವು. ಪ್ರತಿಯೊಂದು ಯಂತ್ರದ ಬೆಲೆ ರೂ.೧-೪-೦ ೩ ಯಂತ್ರಗಳ ರಿಯಾಯಿತಿ ಬೆಲೆ ರೂ. ೩-೮-೦ ಬಹು ಶೀಘ್ರ ಕಾರ್ಯಸಿದ್ಧಿ ಮಾಡಿಕೊಡುವ ಸ್ಪೆಷಲ್ ಮಹಾಕಾಳಿ ಯಂತ್ರದ ರಿಯಾಯಿತಿ ಬೆಲೆ ೩-೧೫-೦ ಒಂದರಿಂದ ಮೂರು ಯಂತ್ರಗಳ ಅಂಚೆ ವೆಚ್ಚ ೦-೪-೦ ಲಾಭದಾಯಕವಾಗದಿದ್ದರೆ ಬೆಲೆ ವಾಪಸ್ ಮಾಡಲಾಗುತ್ತದೆ. ಇದು ಸುಳ್ಳೆಂದು ಸಾಬೀತ ಮಾಡುವವರಿಗೆ ೩೦೦ ರೂ ನಗದು ಬಹುಮಾನ. ಯಂತ್ರಗಳನ್ನು ಈ ಕೆಳಕಂಡ ವಿಳಾಸದಿಂದ ಪಡೆಯಬಹುದು.

The Bengal Mesmerism House (K V. H.) Hoshiarpur

## ಹೊಸ ಪುಸ್ತಕಗಳು

### ಗುರುಚರಿತೆ

ಕ್ರೌನ ಅಷ್ಟಪತ್ರದ ೪೦೦ ಪುಟಗಳ ಪುಸ್ತಕ. ಬೆಲೆ ೪ ರೂಪಾಯಿ. ಲೇಖಕರು ಮತ್ತು ಪ್ರಕಾಶಕರು ಶ್ರೀ. ಎಚ್. ಕೆ. ವೇದವ್ಯಾಸಾಚಾರ್ಯ ಎಂ.ಎ. ಕಾರ್ಯದರ್ಶಿ ಶ್ರೀ ಪರಿಮಳ ಮುದ್ರಣ ಮತ್ತು ಪ್ರಕಾಶನ ಮಂದಿರ ಡಿ. ಸುಬ್ಬಯ್ಯ ರಸ್ತೆ, ಮೈಸೂರು.

ಗುರು ಸಾರ್ವಭೌಮರಾದ ಶ್ರೀಮದ್ರಾಘವೇಂದ್ರ ಸ್ವಾಮಿಗಳ ಚರಿತ್ರೆಯನ್ನು ಈ ಮೊದಲು ಅನೇಕರು ಪ್ರಸಿದ್ಧಿಸಿದ್ದುಂಟು. ದಿ. ಬೇಲೂರು ಕೇಶವದಾಸರೂ ಇತ್ತೀಚೆ ರಾಯರ ಚರಿತ್ರೆಯನ್ನು ವಿವರವಾಗಿ ಪ್ರಸಿದ್ಧಿಸಿದ್ದಾರೆ. ಹೀಗಿದ್ದರೂ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಪರಂಪರೆಯಲ್ಲಿ ಬಂದ ಶ್ರೀ ಸುವ್ರತೀಂದ್ರ ಸ್ವಾಮಿಗಳ ಪೂರ್ವಾಶ್ರಮದ ಮಕ್ಕಳಾದ ಶ್ರೀ ವೇದವ್ಯಾಸಾಚಾರ್ಯರು ಬರೆದ ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದ ಶ್ರೀ ವ್ಯಾಸರಾಯ ಮಠದ ಸದ್ಯದ ಸ್ವಾಮಿಗಳಾದ ಶ್ರೀ ವಿದ್ಯಾಪ್ರಸನ್ನತೀರ್ಥ ಶ್ರೀ ಪಾದಂಗಳವರು ಅಪ್ಪಣೆ ಕೊಡಿಸಿದಂತೆ "ಇಂತಹ ಮಹನೀಯರ ಚರಿತೆಯನ್ನು ಆಧುನಿಕ ಪ್ರಪಂಚಕ್ಕೆ ಮನತಟ್ಟುವಂತೆ ಬರೆಯಲು ಉಭಯ ಭಾಷಾ ಪಾಂಡಿತ್ಯವನ್ನು ಪಡೆದ ಶ್ರೀ ವೇದವ್ಯಾಸಾಚಾರ್ಯರಿಗಿಂತ ಅರ್ಹತೆಯು ಬೇರೊಬ್ಬರಿಗಿರಲಾರದು." ಎಂಬುದು ಯಥಾರ್ಥವಾಗಿದೆ. ಗ್ರಂಥಕರ್ತರಾದರೋ ಅಪ್ರಾಮಾಣಿಕವಾದ ದಂತಕಥೆಗಳನ್ನು ಬೆರಸದೆ ಶ್ರೀಮಠದ ಪೀಳಿಗೆ, ತಾಮ್ರಶಾಸನ ಮತ್ತು ಮೂಲ ಗ್ರಂಥವನ್ನು ಅನುಸರಿಸಿ ಪ್ರಸ್ತುತ ಚರಿತೆಯನ್ನು ಬರೆದಿದ್ದಾರೆ. ಅಂತೆಯೇ ಶ್ರೀ ರಾಘವೇಂದ್ರಸ್ವಾಮಿಗಳ ಮಠದ ಸದ್ಯದ ಪೀಠಸ್ಥರಾದ ಶ್ರೀಸುಯಮೀಂದ್ರತೀರ್ಥಶ್ರೀಪಾದಂಗಳವರು, 'ಗುರುರಾಜರಭಕ್ತರಾದ ನಿಮ್ಮಿಂದ ವಿರಚಿತವಾದ ಈ ಗ್ರಂಥವು ಬಹು ಪ್ರಮಾಣಗರ್ಭಿತವೂ ಪರಂಪರಾಕ್ರಮಕ್ಕೆ ಅನುಸರಿಸಿಯೂ ಪ್ರಾಜ್ಞಸಮ್ಮತವೂ ಮನೋರಂಜಕವೂ ಆಗಿದೆ. ಇದನ್ನು ಓದುವದರಿಂದ ಸಜ್ಜನರಿಗೆ ಗುರುರಾಜರಲ್ಲಿ ಭಕ್ತಿಯುಂಟಾಗದಿರದು' ಎಂದು ಅನುಗ್ರಹ ವಚನಗಳನ್ನು ನುಡಿದಿದ್ದಾರೆ.

ಗುರುರಾಜರ ಚರಿತ್ರೆಯನ್ನು ವಿಶದವಾಗಿ ಬರೆಯ ಹೊರಟ ಲೇಖಕರು ಪ್ರಸ್ತುತ ಗ್ರಂಥದಲ್ಲಿ ಶ್ರೀ ಮನ್ಮಧ್ವಾಚಾರ್ಯರು ಅವತಾರ ಮಾಡುವಾಗಿನ ಕಾಲದ ಪರಿಸ್ಥಿತಿಯನ್ನು ಮೊದಲು ಮಾಡಿ ಸದ್ಯದ ಶ್ರೀಗಳವರೆಗಿನ ಮಧ್ವಾಚಾರ್ಯರ ಮುಖ್ಯಮಠದ ಅನೇಕ ಸ್ವಾಮಿಗಳ ಚರಿತ್ರೆಯನ್ನು ಸಂಕ್ಷೇಪತಃ ಕೊಟ್ಟಿದ್ದಾರೆ. ಅಲ್ಲದೆ ಪ್ರಲ್ಹಾದಾಂಶರೆಂದು ಪ್ರಸಿದ್ಧರಾದ ಶ್ರೀ ವ್ಯಾಸರಾಯ ಸ್ವಾಮಿಗಳ ಚರಿತ್ರೆಯನ್ನೂ ಅಯಾ ಸ್ವಾಮಿಗಳ ಕಾಲಕ್ಕೆ ಆದ ಮತಭೇದವನ್ನೂ ಅದರ ಕಾರಣಗಳನ್ನೂ ತಿಳಿಸಿದ್ದಾರೆ. ಮೊದಲಿನ ಎರಡು ಪ್ರಕರಣದಲ್ಲಿ ಆಗಿನ ಪರಿಸ್ಥಿತಿಯ ಹಿನ್ನೆಲೆಯನ್ನೂ ಆಚಾರ್ಯರ ಪೂರ್ವಜರು ಎಂತ ಧರ್ಮವನ್ನು ಪಾಲಿಸಿಕೊಳ್ಳುತ್ತ ಬಂದರೆಂಬುದನ್ನೂ ವಿವರಿಸಿದ್ದಾರೆ. ಮೂರನೇಪ್ರಕರಣದಲ್ಲಿ ಆಚಾರ್ಯರ ಅವತಾರವನ್ನೂ ಅವತಾರದ ನಂತರ ಅವರು ಮಾಡಿದ ಧರ್ಮಕಾರ್ಯವನ್ನೂ ವಾದಿಗಳನ್ನು ನಿಗ್ರಹಿಸಿ ಸತ್ಸಿದ್ಧಾಂತವನ್ನು ಸ್ಥಾಪನ ಮಾಡಿ ಮೂವತ್ತೇಳು ಮೂಲ ಗ್ರಂಥಗಳನ್ನು ಬರೆದು ಮಧ್ವಮತವನ್ನು ಸ್ಥಾಪಿಸಿದ್ದನ್ನೂ ವರ್ಣಿಸಿದ್ದಾರೆ. ಆಚಾರ್ಯರ ಅವತಾರಕಾಲದ ಪರಿಸ್ಥಿತಿಯನ್ನು ವರ್ಣಿಸುವಾಗ ಲೇಖಕರು, "ಕಾಲ ಎಂತಹದನ್ನಾದರೂ ಹಣ್ಣು ಮಾಡಿ ಬಿಡುತ್ತದೆ..... ಇಂತಹ ತಿಕ್ಕಾಟವೇ ಕಾಲದ ಸ್ವಾರ್ಥ. ಇಂತಹ ಹೋರಾಟವನ್ನು ಎದುರಿಸಿ ಉಳಿದುದು ಸನಾತನ ಧರ್ಮ. ಅದು ಕಾಲ ಧರ್ಮಕ್ಕೆ ವಶವಾಗಿ ತನ್ನ ರೂಪರೇಷೆಯೇ ಅಳಿಸಿ ಹೋಗುವಂತೆ ಲುಪ್ತಪ್ರಾಯವಾದರೂ ಸೂಕ್ಷ್ಮ ರೀತಿಯಿಂದ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಇದ್ದೇ ಇರುತ್ತದಲ್ಲದೆ ಮತ್ತೆ ಅನುಕೂಲವಾದ ಸನ್ನಿವೇಶವನ್ನು ಒದಗಿಸಿಕೊಂಡು ಹೊಸದಾಗಿ ರೂಪುಗೊಳ್ಳುತ್ತದೆ. ಇದು ವರೆಗೆ ಅದು ಎಷ್ಟೇ ವಿಧವಾದ ದಬ್ಬಾಳಿಕೆಗಳನ್ನು ಎದುರಿಸಿ ಸಹಿಸಿ ಅದರೊಡನೆ ಹೋರಾಡಿ ಜಯಗಳಿಸಿದೆ. ಅದ್ದರಿಂದಲೆ ಅದು ಅನಾದಿ ನಿತ್ಯವಾದದ್ದು ಸನಾತನವಾದದ್ದು" ಎಂದು ಅಭಿಪ್ರಾಯಪಟ್ಟದ್ದುಂಟು. ೮೦೦ ವರ್ಷಗಳ ತರುವಾಯ ಈಗ ಮತ್ತೆ ಸನಾತನ ಧರ್ಮಕ್ಕೆ ಅಂಥದೇ ಕುತ್ತು ಒದಗಿ ಬಂದದ್ದು ಅದರೊಳಗಿಂದ ಅದೆಂತು ಪಾರಾಗಿ ತನ್ನ ಅನಾದಿನಿತ್ಯತ್ವವನ್ನು, ಸನಾತನತ್ವವನ್ನು ರಕ್ಷಿಸಿಕೊಂಡು ಜಯಶೀಲವಾಗಬಲ್ಲುದೋ ಎಂಬ ವಿವಂಚನೆ ಸನಾತನ ಧರ್ಮಾಭಿಮಾನಿಗಳನ್ನೆಲ್ಲ ಬಾಧಿಸುವದು ಸ್ವಾಭಾವಿಕ- ಶ್ರೀ ಮಧ್ವ ವಿಜಯ ವಾಯುಸ್ತುತಿ, ಶಿಲಾ ಲೇಖ ಮೊದಲಾದವುಗಳ ಆಧಾರದಿಂದ ಶ್ರೀ ಮಧ್ವಾಚಾರ್ಯರ ಅವತಾರ ಕಾರ್ಯವನ್ನು ಸಂಕ್ಷೇಪತಃ ಈ ಪ್ರಕರಣದಲ್ಲಿ ವರ್ಣಿಸಿದ್ದಾಗಿದೆ. ನಾಲ್ಕನೆಯ ಪ್ರಕರಣದಲ್ಲಿ ಆಚಾರ್ಯರ ಶಿಷ್ಯರ ಚರಿತ್ರೆಯನ್ನು ಶ್ರೀ. ರಾಮಚಂದ್ರತೀರ್ಥರ ವರೆಗೆ ವಿವರಿಸಿದ್ದಾರೆ.

ಅನಂತರ ಮಹಾ ಸಂಸ್ಥಾನದ ಪರಂಪರೆಯು ಶ್ರೀ ವಿಬುಧೇಂದ್ರ ತೀರ್ಥರಿಂದ ಪ್ರಾರಂಭವಾಗುತ್ತದೆ. ಶ್ರೀ ರಾಮಚಂದ್ರ ತೀರ್ಥರು ಸಂಚಾರದಲ್ಲಿ ಇದ್ದಾಗ ಶ್ರೀ ರಘುನಾಥಭಟ್ಟರೆಂಬ ಉದ್ದಾಮ ಪಂಡಿತರ ಭೆಟ್ಟಿಯಾಯಿತು. ಅಂತಹ ಪಂಡಿತರನ್ನು ತಮ್ಮ ಶಿಷ್ಯರನ್ನಾಗಿಮಾಡಿಕೊಂಡು "ಶಿಷ್ಯಾದಿಚ್ಛೇತ್ ಪರಾಜಯಂ" ಎಂಬ ಉಕ್ತಿಯನ್ನು ಸಾರ್ಥಕಗೊಳಿಸಬೇಕೆಂದು ರಾಮಚಂದ್ರತೀರ್ಥರು ಹಂಬಲಿಸಿ ಶ್ರೀ ರಘುನಾಥ ಭಟ್ಟರ ಮನವೊಲಿಸಿ ಅವರಿಗೆ ಸಂನ್ಯಾಸಾಶ್ರಮವನ್ನು ಕೊಟ್ಟು ಶ್ರೀ ವಿಬುಧೇಂದ್ರರೆಂಬ ನಾಮಕರಣ ಮಾಡಿ ಶ್ರೀ ದಿಗ್ವಿಜಯರಾಮ ಪ್ರತಿಮೆಯನ್ನು ಕೊಟ್ಟು ವಾದಿ ದಿಗ್ವಿಜಯಕ್ಕಾಗಿ ಉತ್ತರ ದೇಶಕ್ಕೆ ಕಳಿಸಿ ಕೊಟ್ಟರು. ಉತ್ತರದಲ್ಲೆಲ್ಲ ಶ್ರೀ ವಿಬುಧೇಂದ್ರರು ವಾದಿನಿಗ್ರಹ ಮಾಡುತ್ತ ಸಂಚರಿಸ ಹತ್ತಿದರು. ಶ್ರೀ ರಾಮಚಂದ್ರ ತೀರ್ಥರಾದರೊ ಸಂಚಾರತ್ವೇನ ಮಳಖೇಡದ ಹತ್ತಿರದ ಎರಗೋಳ ಗ್ರಾಮಕ್ಕೆ ಬಂದರು. ಅಲ್ಲಿ ಅವರ ಅವಸಾನಕಾಲ ಸಮೀಪಿಸಲು ಪ್ರಮುಖರನ್ನೆಲ್ಲ ಕರೆಸಿ ಸಂಸ್ಥಾನದ ಪ್ರತಿಮಾ ಮತ್ತು ಇತರ ಅಮೂಲ್ಯ ಪದಾರ್ಥಗಳನ್ನು ಅವರಿಗೆ ಕೊಟ್ಟು ಶ್ರೀ ವಿಬುಧೇಂದ್ರ ತೀರ್ಥರು ಬಂದ ಕೂಡಲೆ ಅವರಿಗೆ ಅವನ್ನು ಒಪ್ಪಿಸಬೇಕೆಂದು ಹೇಳಿ ವೃಂದಾವನಸ್ಥರಾದರು. ಶ್ರೀ ವಿಬುಧೇಂದ್ರತೀರ್ಥರಿಗೆ ಈ ಸುದ್ದಿ ತಿಳಿದ ಕೂಡಲೆ ಅವರು ಬಹಳ ದುಃಖಿತರಾಗಿ ಅಲ್ಲಿಂದ ಯರಗೋಳಕ್ಕೆ ಹೊರಟರು. ಅಷ್ಟರಲ್ಲಿ ಉಡುಪಿಯ ಶಿರೂರ ಮಠದ ಶ್ರೀ ವಿದ್ಯಾನಿಧಿಗಳೆಂಬವರೊಬ್ಬರು ಅಲ್ಲಿಗೆ ಬಂದು ಮಹಾ ಸಂಸ್ಥಾನದ ಶ್ರೀ ಮೂಲ ಸೀತಾರಾಮ ಪ್ರತಿಮೆಗಳಿರುವದನ್ನು ತಿಳಿದುಕೊಂಡು ಅವನ್ನು ಕೆಲ ಕಾಲ ಪೂಜಿಸಬೇಕೆಂದು ಬಗೆದರು. ಶ್ರೀ ರಾಮಚಂದ್ರ ತೀರ್ಥರು ವೃಂದಾವನಸ್ಥರಾಗುವಾಗ ಅವರಿಗೆ ತುಳುವ ಸನ್ಯಾಸಿಗಳು ಶಿಷ್ಯರಾಗಿದ್ದರೆಂಬುದಕ್ಕೆ ಯಾವ ಆಧಾರಗಳೂ ಇಲ್ಲ. ಅದ್ದರಿಂದ ಅನಂತರ ಸಂಚಾರತ್ವೇನ ಅಲ್ಲಿಗೆ ಬಂದ ಶ್ರೀ ವಿದ್ಯಾನಿಧಿ ತೀರ್ಥರು ಶ್ರೀರಾಮಚಂದ್ರತೀರ್ಥರು ಕಾಲವಾಗುವಾಗ ಅವರ ಪರಿವಾರದಲ್ಲಿದ್ದ ಅರವತ್ತು ಮೂರು ಜನ ನೋಕರರನ್ನು ಆಶ್ರಯಿಸಿ, ಸಂಚಾರದಲ್ಲಿ ಬರುವ ವರಮಾನವನ್ನೆಲ್ಲ ಅವರಿಗೆ ಕೊಡುವದಾಗಿ ಭರವಸೆ ಕೊಟ್ಟು ಆ ದೇವರನ್ನು ಪಡೆದು ಯರಗೋಳದಿಂದ ಮುಂದೆ ಹೊರಟರು. ಅಲ್ಲಿಂದ ಹೊರಟ ಮೇಲೆ ಅವರು ತಮ್ಮದೇ ಆದ ಸಂಪ್ರದಾಯವನ್ನು ಆರಂಭಿಸಿದರು. ಸ್ವಾಮಿಗಳ ಸಹಾಯಕರಾದ ೬೩ ಜನರು ಮತ್ತು ಸ್ವಾಮಿಗಳು ಹೀಗೆ ೬೪ ಜನ ಪರಿವಾರದವರಿಗೆ ಮಠದ ವರಮಾನದಲ್ಲೆಲ್ಲ ಪಾಲು ದೊರೆಯಹತ್ತಿತು. ಆ ಪರಿವಾರದವರೇ ಮುಂದೆ ಶ್ಯಾನುಭೋಗರೆಂದು ಹೆಸರಾಗಿ ಮಠದಲ್ಲಿ ಸ್ವಾಯುತ್ತತೆಯನ್ನು ಸ್ಥಾಪಿಸಿಕೊಂಡು ಸ್ವಾಮಿಗಳ ಸ್ವಾತಂತ್ರ್ಯವನ್ನೇ ಅಪಹರಿಸಿಬಿಟ್ಟರು. ಈಚೆಗೆ ಆಗಿಹೋದ ಶ್ರೀ ಸತ್ಯಧ್ಯಾನಯತಿಗಳು ಈ ಶ್ಯಾನುಭೋಗರ ಹುಟ್ಟಡಗಿಸಿ ಮಠದಲ್ಲಿ ಶಾಂತಿಯನ್ನು ಪ್ರಸ್ಥಾಪಿಸಿದರು. ಶ್ರೀ ವಿದ್ಯಾನಿಧಿತೀರ್ಥರು ತಮ್ಮ ಶಿರೂರು ಮಠಕ್ಕೆ ಕೆಲ ಗೌರವಗಳನ್ನು ಸಲ್ಲಿಸಿದ್ದಲ್ಲದೆ ಮಂತ್ರಾಕ್ಷತೆ ಮುಂತಾದ ಕೆಲ ಪದ್ಧತಿಗಳನ್ನು ಆ ಮಠದಲ್ಲಿ ಇದ್ದಂತೆ ಏರ್ಪಡಿಸಿಕೊಂಡರು. ಶ್ರೀ ವಿಬುಧೇಂದ್ರತೀರ್ಥರು ಇದನ್ನೆಲ್ಲ ತಿಳಿದುಕೊಂಡು ಶ್ರೀ ವಿದ್ಯಾನಿಧಿಯವರಲ್ಲಿ ದ್ವೇಷಭಾವನೆಯನ್ನು ತಾಳದೆ ಶ್ರೀ ಮೂಲರಾಮರ ಪೂಜೆಮಾಡುವಯೋಗ ತಮಗಿಲ್ಲೆಂದು ಬಗೆದು ಆಚಾರ್ಯರ ಸದ್ಗ್ರಂಥಗಳ ಪ್ರಚಾರ ಮಾಡುವಲ್ಲಿಯೆ ನಿರತರಾದರು. ಶ್ರೀ ವಿಬುಧೇಂದ್ರತೀರ್ಥರು ಬೇಕಾದಷ್ಟು ಭೂಮಿ ಸೀಮೆಗಳನ್ನು ದಾನವಾಗಿ ಪಡೆದರು. ಶ್ರೀ ವಿದ್ಯಾನಿಧಿತೀರ್ಥರ ಮಠವೇ ಉತ್ತರಾದಿ ಮಠವೆಂದು ಪ್ರಸಿದ್ಧವಾಯಿತು. ಇವರು ತೌಳವರಾದ್ದರಿಂದ ತಾವು ಪ್ರಾರಂಭಿಸಿದ ಮಠಕ್ಕೆ ಉತ್ತರಾದಿಮಠವೆಂದು ಕರೆಯುವದು ಸಹಜವಿದೆ. ಮೂಲಮಠವಾದ್ದರಿಂದ ಉತ್ತರಾದಿ ಮಠವೆಂದು ಹೆಸರು ಉಳಿದಿದೆಯೆಂದು ಹೇಳುವದು ಅಷ್ಟೊಂದು ಸಮಂಜಸ ತೋರುವದಿಲ್ಲ ಆದೇನೇ ಇದ್ದರೂ ಅತಿ ಸಣ್ಣ ವಿಚಾರವಾದ ಮಠದ ಹೆಸರಿಗಾಗಿ ಹೊಡೆದಾಡುವದನ್ನು ಬಿಟ್ಟು ಎಲ್ಲರೂ ಮಠಗಳ ಐಕಮತ್ಯಕ್ಕಾಗಿ ದುಡಿದರೆ ಅದರಿಂದ ಮಾಧ್ವ ಸಮಾಜಕ್ಕೇ ಮಹೋಪಕಾರವಾಗುವದು ಖಂಡಿತ ಎಂದು ಲೇಖಕರು ಹೇಳಿದ್ದು ಅತ್ಯಂತ ಸಮರ್ಪಕವಾಗಿದೆ. ಶ್ರೀ ಮಧ್ವಾಚಾರ್ಯರ ಪರಂಪರೆಯಲ್ಲಿ ಬಂದ ಎಲ್ಲ ಮಠಗಳೂ ಅಷ್ಟೇ ಮಹತ್ವದ್ದು ಮತ್ತು ಒಂದೇ ಬಗೆಯ ಧ್ಯೇಯಧೋರಣಗಳನ್ನು ಇಟ್ಟುಕೊಂಡು ಕಾರ್ಯಪ್ರವೃತ್ತವಾದುವೆಂಬುದನ್ನು ನೆನೆದು ಎಲ್ಲ ಮಠದವರೂ ಅವರ ಶಿಷ್ಯರೂ ನಡೆದುಕೊಂಡರೆ ಮಾಧ್ವಮತದ ಪ್ರಚಾರ ಭರದಿಂದ ನಡೆಯುವದರಲ್ಲಿ ಸಂದೇಹವಿಲ್ಲ.

ಈ ರೀತಿ ಪ್ರಸ್ತುತ ಲೇಖಕರು ತಮಗೆ ದೊರೆತ ಆಧಾರಗಳ ಮೇಲಿಂದ ಮಠಭೇದ ವೃತ್ತಾಂತವನ್ನು ನಿರೂಪಿಸಿ ಅನಂತರ ಶ್ರೀ ರಾಘವೇಂದ್ರಸ್ವಾಮಿಗಳವರೆಗಿನ ಶ್ರೀಗಳವರ ಚರಿತ್ರೆಯನ್ನು ಸಂಕ್ಷೇಪತಃ ಕೊಟ್ಟಬಳಿಕ ಶ್ರೀ ರಾಯರ ಚರಿತ್ರೆಯನ್ನು ವಿವರವಾಗಿ ಕೊಟ್ಟಿದ್ದಾರೆ. ಶ್ರೀ ಮೂಲರಾಮಚಂದ್ರ ದೇವರ ಪ್ರತಿಮೆ ಶ್ರೀ ರಾಯರಮಠಕ್ಕೆ ಹೇಗೆ ಬಂದಿತೆಂಬ ಐತಿಹ್ಯವನ್ನೂ ಲೇಖಕರು ಆಧಾರ ಸಹಿತ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಶ್ರೀ ವ್ಯಾಸರಾಯರು ಶ್ರೀ ಸುರೇಂದ್ರ ತೀರ್ಥ ಶ್ರೀಪಾದಂಗಳವರನ್ನು ಸಂದರ್ಶಿಸಿದಾಗ ನಡೆದ ಘಟನೆಗಳನ್ನೂ ನಿರೂಪಿಸಿರುವರು. ಶ್ರೀ ರಾಯರ ನಂತರ ಶ್ರೀ ಮಠದಲ್ಲಿ ಆಗಿಹೋದ ಶ್ರೀಪಾದಂಗಳವರ ಚರಿತ್ರೆಯನ್ನೂ ಇದರಲ್ಲಿ ನಿರೂಪಿಸಲಾಗಿದೆ. ಈರೀತಿಯಾಗಿ ಮಾಧ್ವಸಂಪ್ರದಾಯದಲ್ಲಿಯ ಬಹುಶಃ ಎಲ್ಲ ಶ್ರೀಗಳವರ ಜೀವನ ಚರಿತೆಯನ್ನೂ ಅವರ ತತ್ವಗಳನ್ನೂ ಲೇಖಕರು ಈ ಪುಸ್ತಕದಲ್ಲಿ ಪ್ರತಿಪಾದಿಸಿದ್ದಾರೆ. ಶ್ರೀ ವಿದ್ಯಾಪ್ರಸನ್ನ ತೀರ್ಥರು ಅಪ್ಪಣೆ ಕೊಡಿಸಿದಂತೆ ಅನೇಕ ಗ್ರಂಥ ಮತ್ತು ಪ್ರಾಚೀನ ಶಾಸನಾದಿಗಳ ಆಧಾರದ ಮೇಲಿಂದಲೂ ಪರಂಪರೆಯಿಂದ ಬಂದ ವಿಷಯಗಳಿಂದಲೂ ಉತ್ಪ್ರೇಕ್ಷಾದ್ಯಲಂಕಾರಗಳಿಗೆ ಸ್ಥಾನವಿಲ್ಲದ ರೀತಿಯಲ್ಲಿ ಬರೆಯಲ್ಪಟ್ಟ ಈ ಗ್ರಂಥವು ಸಮಸ್ತ ಆಸ್ತಿಕರಿಂದಲೂ ಆದರಣೀಯವಾಗಲೆಂದು ನಾವು ಹಾರಯಿಸುತ್ತೇವೆ.

---

## ಕೊನೆಯ ನಾಟ್ಯ

(೨ನೆಯ ಪುಟದಿಂದ)

ಇದೇ ಕಥಾನಕದಿಂದ ಆಷಾಢಭೂತಿಯು ಸುಂದರ ನಾಟಕವೊಂದನ್ನು ರಚಿಸಿದನು. ಯೋಗ್ಯ ಪಾತ್ರಗಳನ್ನಾರಿಸಿ ಅವರಿಗೆ ಉಚಿತ ಶಿಕ್ಷಣವನ್ನು ಕೊಟ್ಟನು. ನಾಟಕಭವನವನ್ನು ನಿರ್ಮಿಸಿ ಅಭಿನಯದ ದಿನವನ್ನು ನಿಶ್ಚಯಿಸಿಯೂ ಆಯಿತು. ಆಷಾಢಭೂತಿಯು ಈಗಾಗಲೇ ಪ್ರಸಿದ್ಧ ನಟನೆಂದು ಖ್ಯಾತಿಗೊಂಡಿದ್ದ. ಇದು ಅವನ ಕೊನೆಯ ನಾಟಕ! ಕೊನೆಯ ಅಭಿನಯ!! ದೀರ್ಘಕಾಲದ ವರೆಗೆ ತಯಾರಿ ನಡೆದಿತ್ತು. ಕಾರಣ ರಾಜಾಧಿರಾಜರುಗಳೂ ಶ್ರೇಷ್ಠಿಗಳೂ ಬಹುಸಂಖ್ಯಾಕರಾಗಿ ದರ್ಶಕರಾಗಿದ್ದರು. ನಾಟಕ ಭವನವು ಕಿಕ್ಕಿರಿದು ತುಂಬಿತ್ತು.

ಆಷಾಢಭೂತಿಯು ಸ್ವತಃ ನಾಯಕನಾಗಿದ್ದನು–ಭರತನ ಅಭಿನಯವನ್ನು ಮಾಡುತ್ತಿದ್ದನು. ಇವನ ಅಭಿನಯವನ್ನು ನೋಡಿ ಜನರು ಬೆರಗಾಗುತ್ತಿದ್ದರು. ಪಾರಿತೋಷಕವೆಂದು ಆಭರಣಗಳ ಹಾಗೂ ಸ್ವರ್ಣಮುದ್ರೆಗಳ ಮಳೆಗರೆಯಲಾರಂಭಿಸಿತು.

ಕೊನೆಯ ದೃಶ್ಯ ಪ್ರಾರಂಭವಾಯಿತು. ಕನ್ನಡಿಯ ಮಹಲಿನ ಪರದೆಯು ಎತ್ತಲ್ಪಟ್ಟಿತು. ಚಕ್ರವರ್ತಿ ಭರತನ ವೇಷದಲ್ಲಿ ಆಷಾಢಭೂತಿಯು ಪ್ರವೇಶಿಸಿದ. ನಾಲ್ಕೂ ದಿಕ್ಕುಗಳಲ್ಲೂ ವಿಶಾಲವಾದ ನಿಲುಗನ್ನಡಿಗಳಿದ್ದವು. ದಿವ್ಯ ವೇಷ-ಭೂಷಣಗಳಿಂದ, ಪ್ರಕಾಶದಿಂದ ಭವನವೆಲ್ಲವೂ ಝಗಝಗಿಸುತ್ತಿತ್ತು. ರಾಜಕೀಯ ಐಶ್ವರ್ಯ ಹಾಗೂ ಪ್ರಭುತ್ವದ ಗರ್ವದಿಂದ ಭರತನು ಗಂಭೀರವಾಗಿ ಹೆಜ್ಜೆಗಳನ್ನಿಡುತ್ತಿದ್ದನು. ತನ್ನ ದಿವ್ಯ ಪ್ರತಿಬಿಂಬವನ್ನು ನೋಡಿ ಆನಂದಸಾಗರದಲ್ಲಿ ತೇಲಾಡುತ್ತಿದ್ದನು. ಇಷ್ಟರಲ್ಲಿ ಉಂಗುರ ಕಳಚಿಬಿದ್ದಿತು. ಬೆರಳು ನಿಸ್ತೇಜವಾಯಿತು. "ಇದೇನು! ಈ ಸೌಂದರ್ಯವೆಲ್ಲ ಇದರದೇ?" - ಆಶ್ಚರ್ಯ ಹಾಗೂ ವ್ಯಾಕುಲತೆಯಿಂದ ಪ್ರಶ್ನಿಸಿದ.

ಕ್ರಮವಾಗಿ ಅನ್ಯ ಆಭರಣಗಳನ್ನು ತೆಗೆದನು. ಅವಯವಗಳ ಸೌಂದರ್ಯವು ಇಳಿಯಿತು. ಮುಕುಟವನ್ನು ತೆಗೆದಿಟ್ಟನು- ಭಾಲ ಪ್ರದೇಶವು ನಿಸ್ತೇಜವಾಯಿತು. ಶರೀರದ ಸೌಂದರ್ಯವೇ ನಷ್ಟವಾಗಿಹೋಯಿತು.

ಭರತನು ಸ್ವತಃ ಅಂದುಕೊಂಡ- "ಇದೇನು! ನಾನು ಯಾವ ದೇಹವನ್ನು ನೋಡಿ ಆನಂದಿಸುತ್ತಿದ್ದೆನೋ ಅದು ಕ್ಷಣದಲ್ಲಿಯೇ ಮಾಯವಾಯಿತು! ಇದರಿಂದಲೇ ನಾನು ಮುಗ್ಧನಾಗಿದ್ದೇನೆ. ಕಿರೀಟವನ್ನು ತೆಗೆಯುತ್ತಲೇ ತೇಜವು ನಶಿಸಿತು. ಈ ಮುಂಚೆ ಇದ್ದ ತೇಜವು ಈ ಕಿರೀಟದ್ದೇ? ಸ್ವತಃ ನನ್ನದು ಏನೂ ಇಲ್ಲವೇ? ಅಂದ ಮೇಲೆ ಈ ವೇಷ ಭೂಷಣಗಳೆಲ್ಲವೂ ಅಸ್ಥಿರ. ಇವು ಯಾವಾಗಲೂ ನನ್ನನ್ನು ಸುಂದರನನ್ನಾಗಿಡಲಾರವು. ಭೌತಿಕ-ವಸ್ತುಗಳು ಎಷ್ಟು ಪರಿವರ್ತನಶೀಲವಾದವುಗಳು! ಕ್ಷಣದಲ್ಲಿಯೇ ಏನಿದ್ದದ್ದು ಏನಾಗಿಬಿಟ್ಟಿತು? ಆನೆ, ಕುದುರೆ, ರಥಗಳೆಲ್ಲವೂ ಅಶಾಶ್ವತ. ಪ್ರಪಂಚವೇ ಅನಿತ್ಯವಾದುದು. ಅಂತ್ಯಕಾಲದಲ್ಲಿ ಇವು ನನ್ನನ್ನು ಉಳಿಸಲಾರವು. ನನ್ನ ಸಾಮ್ರಾಜ್ಯ, ನನ್ನರಮನೆ, ಪ್ರಾಕಾರ, ಕೋಟೆ ಎಲ್ಲವೂ ನಶ್ವರ! ನನ್ನ ಈ ಶರೀರವೂ ಅನಿತ್ಯವಾದುದು. ಆತ್ಮವೊಂದೇ ನಿತ್ಯವಾದದ್ದು-ಸತ್ಯ-ಸ್ಥಿರವಾದದ್ದು. ಅಂದಮೇಲೆ ಆತ್ಮವನ್ನೇಕೆ ನಾನು ಪಡೆಯಬಾರದು? ಶಾಶ್ವತ ಸುಖದ ಅಪೇಕ್ಷೆಯಿದ್ದಲ್ಲಿ ಆತ್ಮವನ್ನು ಪಡೆಯಬೇಕು. ಭೌತಿಕ ವಸ್ತುಗಳೊಡನೆ ಸಂಬಂಧವನ್ನು ಕಡಿದುಕೊಳ್ಳಬೇಕು. ಅವುಗಳಿಗೆ ಶರಣುಹೊಡೆಯಬೇಕು.


ಈ ಸಮಯದಲ್ಲಿಯೇ ಭರತನಿಗೆ ಜ್ಞಾನೋದಯವಾಯಿತು. ಅದೇ ವೇಷದಲ್ಲಿಯೇ ಭರತ ವೇಷಧಾರಿ ಆಷಾಢಭೂತಿಯು ನಾಟಕ ಭವನದಿಂದ ಹೊರಹೊರಟನು. ಅವನ ಹಿಂದೆ ಐದು ನೂರು ರಾಜಕುಮಾರರಿದ್ದರು.

ಮಗಧದ ಚಕ್ರವರ್ತಿಯು ಕೇಳಿದ – "ಭಗವನ್! ಈಗ ನಾಟಕ ಮುಗಿಯಿತು; ತಾವೆಲ್ಲಿಗೆ ಹೊರಟಿರಿ?"

"ಭರತ ಚಕ್ರವರ್ತಿಯು ಹೋದಲ್ಲಿಗೆ. ನಮ್ಮ ನಾಟಕವೂ ಅಲ್ಲಿಗೆ ತಲುಪಿದ ಮೇಲೆಯೇ ಸಮಾಪ್ತವಾಗುವದು."

ಆಷಾಢಭೂತಿಯು ಮತ್ತೆ ಹಿಂತಿರುಗಲಿಲ್ಲ.

"ಜ್ಞಾನೋದಯ"
'ಮಾಯಾ' ದಿಂದ

ಹುಬ್ಬಳ್ಳಿ ಸ್ಟಾಕಿಸ್ಟರು—ಹುಬ್ಬಳ್ಳಿ ಫಾರ್ಮಸಿ

# ಪೂರಕ ಆಹಾರದ ಬಗ್ಗೆ ಎಚ್ಚರ

ಬಾಳೇಹಣ್ಣು, ಆಲೂಗಡ್ಡೆ, ಗೆಣಸು ಮೊದಲಾದ ಪೂರಕ ಆಹಾರ ಪದಾರ್ಥಗಳನ್ನು ಹಚ್ಚೋಗಿಸಿ ಆಹಾರಧಾನ್ಯಗಳ ಬಳಕೆಯನ್ನು ಸ್ವಲ್ಪ ಕಡಮೆಮಾಡಬೇಕೆಂದು ಮುಂದಾಳುಗಳು ಜನತೆಗೆ ಬಿನ್ನವಿಸಿಕೊಳ್ಳುತ್ತಿರುವರು. ಈ ಬಗೆಯಾಗಿ ಉಪದೇಶಮಾಡುವವರು ಆಹಾರ ಪದಾರ್ಥಗಳ ಉತ್ಪಾದನೆಗೆ ಆಘಾತಕವಾಗಿದೆ ಎಂಬ ಗಂಡಾಂತರದ ಪೂರ್ಣಪರಿಜ್ಞಾನವು ಇವರಿಗೆ ಆಗಿರಲಿಕ್ಕಿಲ್ಲ. ಈ ಗಂಡಾಂತರದತ್ತ ಅಕ್ಷ್ಯವನ್ನು ಸೆಳೆಯುತ್ತ ಹಕ್ತಿಮ ಹಿಂದುಸ್ತಾನದ ಪತ್ರಿಕಾಲೇಖಕರೊಬ್ಬರು ಈ ರೀತಿ ಬರೆಯುತ್ತಾರೆ.

“ ಒಳ್ಳೆ ಫಲವತ್ತಾದ ನೂರಾರು ಎಕರೆ ನೀರಾವರಿಭೂಮಿಯನ್ನು ಈ ಪೂರಕ ಆಹಾರಪದಾರ್ಥಗಳನ್ನು ಬೆಳೆಸುವದಕ್ಕಾಗಿ ಮಾರ್ಪಡಿಸಲಾಗಿದೆ. ಸಣ್ಣ ಸ್ವಾವಲಂಬಿ ಕೃಷಿಕನೊಬ್ಬ ತನಗೆ ಬೇಕಾಗುವಷ್ಟು ಈ ಆಹಾರ ಪದಾರ್ಥಗಳನ್ನೂ ಪೂರಕ ಪದಾರ್ಥಗಳನ್ನೂ ಬೆಳೆಸಬಲ್ಲನು. ಆದರೆ ದೊಡ್ಡ ಪ್ರಮಾಣದಲ್ಲಿ ಇವನ್ನು ಬೆಳೆಸುವವರು ವ್ಯಾಪಾರಕ್ಕಾಗಿ ಉತ್ಪಾದನಮಾಡತಕ್ಕವರು. ನೂರಾರು ಮೈಲುದೂರ ಇರುವ ಪೇಟೆಗಳಿಗಾಗಿ ಈ ಪದಾರ್ಥಗಳನ್ನು ಬೆಳೆಯುತ್ತಾರೆ. ಮತ್ತು ಬಹಳ ಲಾಭವನ್ನು ಪಡೆಯುವದಕ್ಕಾಗಿ ಅತಿ ಸುಭಿಕ್ಷ ಭೂಮಿಗಳನ್ನೂ ಪಡೆಯುವಲ್ಲಿ ತತ್ಪರರಾಗುವರು. ಕಬ್ಬಿನ ಬೆಳೆಗಾಗಿಯೂ ಒಳ್ಳೆ ಫಲವತ್ತಾದ ನೀರುಣ್ಣುವ ಭೂಮಿಯನ್ನು ಉಪಯೋಗಿಸಲಾಗುತ್ತದೆ.

“ ಸೀಡಾ ಪದ್ಧತಿಯು ಜಾರಿಯಲ್ಲಿ ಬಂದ ಬಳಕ, ಅದು (೬-೮-೧೦-೧೨ ಜೆಂಸು) ಬಹಳ ಕಡಿಮೆಯಿರುವದರಿಂದ ಈ ಪೂರಕ ಆಹಾರ ಪದಾರ್ಥಗಳ ಬೇಡಿಕೆ ಹೆಚ್ಚಿದೆ. ಮತ್ತು ಹೆಚ್ಚೆಚ್ಚು ಭೂಮಿಯನ್ನು ಈ ಬೆಳೆಗಳಿಗಾಗಿ ಉಪಯೋಗಿಸಲಾಗುತ್ತದೆ. ಪ್ರಚಾರಕಾರ್ಯವನ್ನು ಭರದಿಂದ ಸಾಗಿಸಿ ಸೌಕರ್ಯಗಳನ್ನು ಒದವಿಸಿ ಕೊಟ್ಟದ್ದಾದರೆ ಧಾನ್ಯಗಳನ್ನು ಬೆಳೆಯುವದರ ಕಡೆ ಹೆಚ್ಚು ಗಮನಕೊಡಲಾಗುತ್ತದೆ.

“ಇವೆಲ್ಲ ಪೂರಕ ಪದಾರ್ಥಗಳ ಮೇಲೆ ನಿಯಂತ್ರಣಗಳಿಲ್ಲ; ರೈತನ ಭೂಮಿಯಲ್ಲಿ ಬೆಳೆಯುವ ಆಹಾರ ಪದಾರ್ಥಗಳಿಗಿಂತ ಬಹಳ ಹೆಚ್ಚು ಹಣವು ಈ ಪೂರಕ ಪದಾರ್ಥಗಳ ಮಾರಾಟದಿಂದ ಅವನಿಗೆ ದೊರೆವುದು. ಕೆಲವೊಂದು ತರದ ನೀರಾವರಿ ಜಮೀನುಗಳನ್ನು ಮಾತ್ರ ಈ ರೀತಿ ಪೂರಕ ಆಹಾರ ಪದಾರ್ಥಗಳನ್ನು ಬೆಳೆಸುವ ಭೂಮಿಯನ್ನಾಗಿ ಮಾರ್ಪಡಿಸಲಾಗದು. ಯಾವಾಗಲೂ ನೀರುಣ್ಣುವ ಇಂಥ ಭೂಮಿಗಳಲ್ಲಿ ಆಹಾರ ಧಾನ್ಯಗಳಿಗಿಂತ ಕಬ್ಬು ಮತ್ತು ಇಂಥ ಪೂರಕ ಪದಾರ್ಥಗಳು ಹೆಚ್ಚು ಬೆಳೆಯುವವು. ”

ಗುಜರಾಥದಿಂದ ಮತ್ತೊಬ್ಬ ಪತ್ರಿಕಾ ಲೇಖಕರು ಇಂತು ಬರೆಯುತ್ತಾರೆ.

“ಬಾರಡೋಲಿಯು ಬಾಳೇಹಣ್ಣುಗಳನ್ನು ಬೆಳೆಯುವ ಕ್ರಮ ಕೈಕೊಂಡು ಕ್ರಮಶಃ ಅವನ್ನು ಹೆಚ್ಚಿಸುತ್ತ ಈಗ ೧೨-೧೫ ಲಕ್ಷ ರೂಪಾಯಿಗಳ ಹಣ್ಣನ್ನು ಹೊರಗೆ ಕಳಿಸುತ್ತದೆ. ಆಹಾರ ಧಾನ್ಯಗಳನ್ನು ಬೆಳೆಯುವದಕ್ಕಿಂತ ಬಾಳೇಹಣ್ಣನ್ನು ಬೆಳೆಯುವದು ಹೆಚ್ಚು ಲಾಭಕರವೆಂದು ಎನಿಸಿದ್ದರಿಂದ ಒಕ್ಕಲಿಗರು ಅದರ ಕಡೆಗೇ ಹೆಚ್ಚು ಲಕ್ಷ್ಯವನ್ನು ಪೂರಯಿಸಹತ್ತಿರುವರು. ಮತ್ತು ಎಂಜಿನ್ನಿನಿಂದ ಕಳ್ಳ ಕಟ್ಟಡವನ್ನು ಕಟ್ಟಲು ಹಾಗು ಎಂಜಿನು ಕಳ್ಳಪೇಟೆಯಲ್ಲಿ ಕೊಳ್ಳಲು ಬೇಕಾಗುವ ಹಣವನ್ನು ಸಾಲವಾಗಿ ಪಡೆಯಲು ಕೂಡ ಅವರು ಹಿಂಜರಿಯುವದಿಲ್ಲ. ಆಹಾರ ಪದಾರ್ಥಗಳನ್ನು ಕನಿಷ್ಠ ಅರ್ಧದಷ್ಟು ಭೂಮಿಯಲ್ಲಿಯಾದರೂ ಬಿತ್ತಬೇಕೆಂದು ಕಾಯದೆ ಇದೆ. ಆದರೆ ಕಾಯದೆಯನ್ನು ಮುರಿಯುವದಕ್ಕೆ ಎಲ್ಲರೂ ಒಂದುಗೂಡುವರು. ಸುಮಾರು ಶೇಕಡ ೭೦ ರಿಂದ ೭೫ ರಷ್ಟು ಭೂಮಿಯಲ್ಲಿ ಹತ್ತಿಯನ್ನು ಬಿತ್ತಲಾಗುತ್ತದೆ. ಮತ್ತು ಉಳಿದ ಭೂಮಿಯಲ್ಲಿ ಜೋಳವನ್ನು ಬಿತ್ತಲಾಗುತ್ತದೆ. ಬೇಡಾ ಜಿಲ್ಹೆಯಲ್ಲಿ ಮಳೆಗಾಲ ಪ್ರಾರಂಭವಾದ ಕೂಡಲೆ ಭೂಮಿಯಲ್ಲಿ ಭತ್ತವನ್ನು ಬಿತ್ತುವ ಫಾಸ್ಟರ್ ಒಕ್ಕಲಿಗನು ಮಾಡುತ್ತಾನೆ. ಮತ್ತು ಮೂರು ನಾಲ್ಕಾಂಶದಷ್ಟು ಭೂಮಿಯನ್ನು ಆಹಾರ ಪದಾರ್ಥಗಳಿಗಾಗಿ ಕಾಯ್ದಿಡಲಾಗಿದೆಂದು ಬರೆಸುತ್ತಾನೆ. ಆದರೆ ಅನಂತರ ಭತ್ತದ ಪೈರನ್ನು ಕಿತ್ತಿ ಅದೇ ಪ್ರದೇಶದಲ್ಲಿ ತಂಬಾಕನ್ನು ಬಿತ್ತುತ್ತಾನೆ. ಧಾನ್ಯಗಳಿಗಿಂತ ತಂಬಾಕಿಗೆ ಹೆಚ್ಚು ಬೆಲೆ ಬರುವದಾದ್ದರಿಂದ ಹೀಗೆ ಮಾಡಲಾಗುತ್ತದೆ.”

ಆಹಾರ ಕಮಿಶನರರೂ ಪೂರಕ ಆಹಾರ ಪದಾರ್ಥಗಳ ಪ್ರಚಾರಕರೂ ಇದರಿಂದ ಎಚ್ಚರಾಗಲಿ.

ವರ್ಧಾ ಕಿ. ಘ. ಮಶ್ರೂವಾಲಾ
೧೦-೮-೪೯

## ಅಜ್ಞಾನದ ಬೆಲೆ

ಶಿಕ್ಷಣ ಎಂಬ ಶುಷ್ಕಯಂತ್ರ ಬೇಕಾದದ್ದುಂಟು. ಆದರೆ ಇತಿಹಾಸದ ಮೌಲ್ಯಗಳನ್ನು ನೋಡಿದರೆ ಅಜ್ಞಾನವೇ ಅದಕ್ಕಿಂತ ಕುಟ್ಟೆಯೆಂದು ಗೊತ್ತಾಗುತ್ತದೆ. ಅಂಥ ಅಜ್ಞಾನ ಅಪ್ಪ ಜಗಗಗಳಲ್ಲಿ ಹಬ್ಬುತ್ತದೆ. ಅವನ್ನು ಕೆಲವು ಜನರ ವ್ಯಾಪಸ್ಯಗಳನ್ನು ರೂಢಿಸುವ ಮತ್ತು ವ್ಯಾಪಾರಿಗಳ ಕೈಯೊಳಗಿನ ಪತ್ರಿಕೆಗಳಲ್ಲಿ ಜಾಹೀರಾತು ಮಾಡುವ ಮೂಲಕ ಪ್ರಚಾರಗೊಳಿಸಲಾಗುತ್ತದೆ. ಅವು ಉತ್ತಮ ಪಾಕುಗಳನ್ನು ತಪ್ಪಿ ಒಂದು ಹೊಟ್ಟನ್ನು ಗಟ್ಟಿಯಾಗಿ ಹಿಡಿದುಕೊಳ್ಳಲು ಕಲಿಸುತ್ತದೆ. ಹೀಗೆ ಒಗೆದ ವಸ್ತುಗಳನ್ನು ಸುಂದರವಾದ ಅಪ್ಪುಗಳನ್ನು ನಾನಾ ರೂಪಗಳಿಗೆ ಪರಿವರ್ತಿಸಿ ಬೇರೆ ಬೇರೆ ನಾಮಕರಣ ಮಾಡಿ ತಿರುಗಿ ಅತಿ ಕುಟ್ಟೆಯಾಗಿ ನಮಗೆ ಮಾರಲಾಗುವದು. ಹೀಗೆ ಅಜ್ಞಾನಿಯಾದ ಗಿರಾಕಿ ಅದಕ್ಕೆ ಇಮ್ಮಡಿ ಬೆಲೆ ತೆರುತ್ತಾನೆ. ಒಮ್ಮೆ ಅನೋಕೂಲವಾದುದನ್ನು ಒಗೆಯುವಾಗ ಮತ್ತು ಇನ್ನೊಮ್ಮೆ ಅವನ್ನು ಕೊಳ್ಳುವಾಗ. ಈ ಕುಟ್ಟೆಯಾದ ಅಜ್ಞಾನ ಹೆಚ್ಚಾಗಿ ಸುಶಿಕ್ಷಿತರಾದ ನಗರವಾಸಿಗಳಲ್ಲೇ ಕಂಡುಬರುತ್ತದೆ. ಅದಕ್ಕೆ ವ್ಯಾಪಾರಿಗಳ ಬೆಂಬಲದಿಂದ ಸರಕಾರದ ಉತ್ತೇಜನವಿದೆ. ತಮ್ಮ ಅವಶ್ಯಕತೆಗಳನ್ನೂ ಗಮನಿಸದೆ ಕೇವಲ ಹಾಂಗಿಕತೆಯನ್ನು ಪೂರೈಸುವ ವ್ಯಾಪಸ್ಯಗಳನ್ನು ಹೊರಡಿಸುವ ಮೂಲಕ ಇಂಥ ಅಜ್ಞಾನವನ್ನು ಹಬ್ಬಿಸಲಾಗುತ್ತದೆ.

ಅಂಥ ಅಜ್ಞಾನಕ್ಕೆ ಉತ್ತಮ ವಿಹಾರಭೂಮಿಯೆಂದರೆ ಆಹಾರಕ್ಷೇತ್ರ. ಪ್ರಕೃತಿ ಉತ್ಪಾದಿಸಿದ ಹಿತಕರವಾದ ಆಹಾರವನ್ನು ಕೃತ್ರಿಮ ಪ್ರಣಾಲಿಯಿಂದ ಹಾಳುಗೆಡಹಲಾಗುತ್ತದೆ. ಗಿರಾಕಿಗಳು ಪೋಷಣಾಭಾವದಿಂದ ಬಳಲುತ್ತಾರೆ. ಆಗ ವೈದ್ಯ ಜನರ ಬೆಂಬತ್ತಿ ವ್ಯಾಪಾರಿಗಳು ಸಹಾಯಕ್ಕೆ ಬರುತ್ತಾರೆ. ಅವರಿಗೆ ಅನುಕೂಲವಾಗಿ ಪ್ರಚಾರವೂ ಜಾಹಿರಾತುಗಳೂ ಪ್ರಕಟವಾಗುತ್ತವೆ. ಈ ಪದ್ಧತಿಯಿಂದ ಧನಹಾನಿ ಮಾತ್ರ ಆಗದೆ ಆರೋಗ್ಯ ದೃಷ್ಟಿಯಿಂದಲೂ ಅನರ್ಥವಾಗುವದು. ಈ ಬಗೆಯ ಶೋಷಣೆಯನ್ನು, ಶಾಲೆಗಳಲ್ಲಿ ಯೋಗ್ಯವಾದ ಆಹಾರದ ತತ್ವಾವಶ್ಯಕತೆಯನ್ನು ಕಲಿಸುವದರಿಂದ ಮಾತ್ರವೇ ತಡೆಯಬಹುದು. ಆಹಾರದ ಕೊರತೆಯಿದ್ದರೂ ಅಕ್ಕಿಯನ್ನು ಪಾಲಿಶ್ ಮಾಡಲಿ-ಮೈದಾ ತಯಾರಿಸಲಿ ಸರಕಾರ ಅವಕಾಶ ಕೊಡುತ್ತಿದೆ, ಈ ಪ್ರಕಾರ ನಾವು ಪುಷ್ಟಿಕರವಾದ ಬಹಳ ಆಹಾರವನ್ನು ಕೆಗೆದೊಗೆದು ಅನಾರೋಗ್ಯವನ್ನೂ ಪ್ರಾಣಹಾನಿಯನ್ನೂ ಉಂಟುಮಾಡುತ್ತಿದ್ದೇವೆ.

ಅಕ್ಕಿಯನ್ನು ಕೊಳಸಿದಾಗ ಬರುವ ತೌಡಿನಲ್ಲಿ ಪ್ರತಿಪೌಂಡಿಗೆ ೧೪೬೦ ಅಂಕ ಪುಷ್ಟಿಯಿದೆಯೆಂದು ಗೊತ್ತಾಗುತ್ತದೆ. ಈ ತೌಡಿನಲ್ಲಿ ಪೌಷ್ಟಿಕಾಂಶಗಳು ಹೀಗಿವೆ.

| | | |
|---|---|---|
| ೧ ಪ್ರೊಟೀನ | ಶೇಕಡಾ | ೧೪.೦ |
| ೨ ನೆಣ (ಕೊಬ್ಬು) | ,, | ೨೦.೦ |
| ೩ ಕಾರ್ಬೊಹೈಡ್ರೇಟ | ,, | ೪೨.೦ |
| ೪ ಲವಣಗಳು | ,, | ೮.೩ |
| ೫ ಹಿಪ್ಪೆ | ,, | ೧.೦ |
| ೬ ಜೇಡ | ,, | ೫.೩ |

ಇದನ್ನು ನೋಡಿದರೆ ಅಕ್ಕಿಯನ್ನು ಪಾಲಿಶ ಮಾಡುವಾಗ ನಾವು ಅನೋಕೂಲವಾದ ದ್ರವ್ಯಗಳನ್ನು ಚೆಲ್ಲಿಕೊಡುತ್ತೇವೆಂದು ಖಚಿತವಾಗುತ್ತದೆ.

ಇಷ್ಟಕ್ಕೇ ಮುಗಿದರೆ, ಪೋಷಣಹಾನಿಗಿಂತ ಹೆಚ್ಚಿನ ಶೋಷಣೆಯೇನೂ ಇದರಲ್ಲಿಲ್ಲವೆನ್ನಬಹುದಾಗಿತ್ತು. ಜನರಿಗೆ ನಿಸ್ಸಾರ ಆಹಾರದಿಂದ ಜಾಡ್ಯವಾದರೆ ಆಗ ವೈದ್ಯರೂಪಿಯಾದ ಸಂಚಾರಿ ವ್ಯಾಪಾರ ಅವನ ನೆರವಿಗೆ ಬಂದು ಬಗೆಬಗೆಯ ಔಷಧ ಚುಚ್ಚುಮದ್ದುಗಳನ್ನು ಕೊಟ್ಟು ಅವರಿಗೆ ಕ್ಲೇಶವನ್ನೂ ಕಷ್ಟವನ್ನೂ ಉಂಟುಮಾಡುವದಲ್ಲದೆ ರೊಕ್ಕವನ್ನೂ ಸೆಳೆಯುತ್ತಾನೆ.

ವ್ಯಾಪಾರಿಯೀಗ ಜೀವಾತು (ವಿಟಾಮಿನ್) ಮಿಶ್ರಿತ ಅಕ್ಕಿಯನ್ನು ತಯಾರಿಸುವ ಹೊಸ ವೇಷ ತೆಗೆದಿದ್ದಾನೆ. ಅಕ್ಕಿಯನ್ನು ಪಾಲಿಶ ಮಾಡಿದಾಗ ಅದರ ಸಾರಹಾನಿಯನ್ನು ಪುನಃ ಆ ಪಾಲಿಶ ಅಕ್ಕಿಗೆ ಮರಳಿಸಿ ಕೊಡಲು ಅದಕ್ಕೆ ಜೀವಾತು ಅಕ್ಕಿಯನ್ನು ಬೆರಸಲಾಗುತ್ತಿದೆ. ಇದೇ ಈಗ ಅಂಥದೊಂದು ಕಾರಖಾನೆ ಸಿಂಗಾಪುರದಲ್ಲಿ ಸ್ಥಾಪಿತವಾಗುತ್ತಿದೆ. ಇವೆಲ್ಲ ವ್ಯಾಪಾರಿ ಪ್ರಪಂಚಗಳಿಗೇಕೆ ಬೇಕಾಗುತ್ತವೆ? ಕೃತಕ ಪ್ರಣಾಲಿಯಿಂದ ನೀರುಬಗೆಗೊಳಿಸಲ್ಪಟ್ಟ ಹಿಮಥವಲ ಅಕ್ಕಿಯು ಅನ್ನವನ್ನು ಬಡಿಸುವ ಧ್ಯಾಶನ್ನು ಪ್ರಚುರಗೊಳಿಸಲ್ಪಟ್ಟಿದ್ದರಿಂದ.

ಆದುದರಿಂದ, ಜೀವನದ ಮಟ್ಟವನ್ನು ಹೆಚ್ಚಿಸುವ ಈ ಪದ್ಧತಿಯಿಂದ ವೆಚ್ಚ ಹೆಚ್ಚೀತೇ ಹೊರತು ಜನರ ಅವಶ್ಯಕತೆಗಳು ಪೂರ್ಣವಾಗಲಾರವು. ಇದರ ಸ್ವಾಭಾವಿಕ ಪರಿಣಾಮವೆಂದರೆ ಇದಕ್ಕೆ ಬಲಿಯಾದವನು ಹೆಚ್ಚು ಹೆಚ್ಚು ವೆಚ್ಚ ಮಾಡಿ ಕಡಿಮೆ ಕಡಿಮೆ ನಿಜ ಸಮಾಧಾನವನ್ನು ಪಡೆಯುವದು. ಕೇಂದ್ರ ಸರಕಾರದ ಮಧ್ಯಮವರ್ಗೀಯ ನೌಕರರ ಗೃಹಕೃತ್ಯದ ಆಯವ್ಯಯ ವಿಚಾರಣೆಯಿಂದ ಇದೇ ಮಾತು ಹೊಗಬಟ್ಟಿದೆ. ಈ ವಿಚಾರಣೆಯಿಂದ ಸಂಯುಕ್ತ ಪ್ರಾಂತ, ಪಂಜಾಬ, ಬಿಹಾರ, ಓಡಿಸಾ, ಮಧ್ಯಪ್ರಾಂತ ಮತ್ತು ಮದ್ರಾಸ್ ನಗರಗಳಲ್ಲಿ ನೂರಕ್ಕೆಂಭತ್ತರಷ್ಟು ಕುಟುಂಬಗಳ ಗೃಹಕೃತ್ಯದಲ್ಲಿ ಆಯಕ್ಕಿಂತ ವ್ಯಯವೇ ಹೆಚ್ಚೆಂದೂ ಇದರ ಪರಿಣಾಮವಾಗಿ ದಿಲ್ಲಿಯಲ್ಲಿ ಶೇಕಡಾ ೪೦ ಮತ್ತು ಕಲಕತ್ತೆಯಲ್ಲಿ ಶೇಕಡಾ ೬೫ ಕುಟುಂಬಗಳು ಸಾಲದಲ್ಲಿ ತೊಳಲುತ್ತಿವೆಯೆಂದೂ ಗೊತ್ತಾಯಿತು. ಆದುದರಿಂದ ನಮಗೆ ಬೇಕಾಗಿರುವುದು ನಿಜವಾದ ಗುಣಾವಗುಣಗಳ ಅಭಿಜ್ಞಾನವೇ ಹೊರತು ವ್ಯಾಪಾರಿಗಳಿಂದ ಹಬ್ಬಿಸಲ್ಪಡುವ “ಜೀವನಮಟ್ಟ”ದ ಎತ್ತರಿಕೆಯಲ್ಲ. ಜನರನ್ನು ನಿಷ್ಪ್ರಯೋಜಕವಾದ ಶೋಷಣೆಯಿಂದಲೂ ಅರ್ಥವಿಲ್ಲದ ವೆಚ್ಚಗಳಿಂದಲೂ ಉಳಿಸಲು ಅವರಿಗೆ ವಿವೇಕಪೂರ್ಣವಾದ ಶಿಕ್ಷಣವನ್ನು ಕೊಡುವುದು ರಾಷ್ಟ್ರೀಯ ಸರಕಾರದ ಕರ್ತವ್ಯ.

—ಜೆ. ಸಿ. ಕುಮಾರಪ್ಪ

## ಉಪ್ಪಿನ ಕರ

ಪ್ರಶ್ನೆ: ಮೊದಲು ಘಟನೆಯಲ್ಲಿ ಸೇರ್ಪಡೆ ಮಾಡಿದ್ದ ಉಪ್ಪಿನ ಕರದ ಮೇಲಿನ ಬಹಿಷ್ಕಾರವನ್ನು ಉಲ್ಲೇಖಿಸದೆ ಬಿಟ್ಟುದರಿಂದ ಘಟನಾ ಸಮಿತಿಯು ಲೋಕೇಚ್ಛೆಗೂ ಗಾಂಧಿಯವರು ಸಾಧಿಸಲು ಸೊಂಟಕಟ್ಟಿನಂತ ಗುರಿಗೂ ಭಂಗ ತಂದಂತಾಗಲಿಲ್ಲವೆ?

ಉತ್ತರ:

ಇದಕ್ಕಾಗಿ ಘಟನಾಸಮಿತಿಯನ್ನು ನಿಂದಿಸುವುದು ತಪ್ಪೆನಿಸುತ್ತದೆ. ಆ ಬಹಿಷ್ಕಾರದ ಅನುಲ್ಲೇಖಕ್ಕೆ ಶಾಸನಕರ್ತರಿಗೆ ಉಪ್ಪಿನ ಮೇಲೆ ಕರ ಹೇರಲು ಆಮಂತ್ರಿಸಲಾಗಿದೆ ಎಂದು ಅರ್ಥವಾಗುವುದಿಲ್ಲ. ಪಂಡಿತ ಜವಾಹರಲಾಲ ನೆಹರು ಹೇಳಿದಂತೆ ಉಪ್ಪಿನ ಕರದ ಹಿಂದಿರುವ ಇತಿಹಾಸವು ಯಾವ ಸರಕಾರಕ್ಕಾಗಲಿ ಅದನ್ನು ಪುನಃ ಹೇರುವುದಕ್ಕೆ ಮುಂಚೆ ಬಹಳ ವಿಚಾರ ಮಾಡಲು ಹಚ್ಚುತ್ತದೆ. ಆದರೆ ಆ ಕರವನ್ನು ಮತ್ತೆ ಹೇರುವಂಥ ಸಂದರ್ಭ ಮುಂದೆಲ್ಲಿಯಾದರೂ ಬಂದರೆ, ಮುಂದಿನ ಪೀಳಿಗೆಯವರು ಹಾಗೆ ಮಾಡದಂತೆ ಅವರ ಕೈಕಟ್ಟಿಹಾಕುವದು ಅಯುಕ್ತವೇ ಸರಿ. ಯಾಕೆಂದರೆ, ಒಬ್ಬ ಸದಸ್ಯರು ಎಂದುದನ್ನೇ ಈಗ ಉದಾಹರಣೆಗೆ ತೆಗೆದುಕೊಳ್ಳೋಣ: ಅದು ಕರಮುಕ್ತವಾಗಿರುವದರಿಂದ ಭಾರತದಲ್ಲಿಯ ಉಪ್ಪಿನ ತಯಾರಿಕೆಯ ಮೇಲೆ ವಿದೇಶೀಯ ಉಪ್ಪು ಒಮ್ಮೆ ಗದಾಭಿಘಾತ ಮಾಡಿಬಿಡಬಹುದು; ಆಗ ಭಾರತದ ಉಪ್ಪಿಗಾಗಿಯೋ ವಿದೇಶೀಯ ಉಪ್ಪಿನ ಮೇಲೆ ಕರ ಹೊರಿಸಬೇಕಾಗಬಹುದು. ಅದೇ ಮೇರೆಗೆ ಈ ವಿಧದ ಕರವನ್ನು ಸಮರ್ಥಿಸುವ ಇನ್ನಿತರ ಅಕಲ್ಪಿತ ಸನ್ನಿವೇಶಗಳು ಒದಗಿಬರಬಹುದು. ಯಾವ ಸರಕಾರವಾದರೂ ಗಂಭೀರವಾಗಿ ವಿಚಾರ ಮಾಡದೆ ಈ ಕರವನ್ನು ಹೇರುವ ಕೆಲಸಕ್ಕೆ ಕೈಹಾಕದು. ೧೯೩೦ ರಲ್ಲಿ ಗಾಂಧಿಯವರು ಹೂಡಿದ ಚಳವಳಿಯ ದೆಸೆಯಿಂದ ಮಾತ್ರ ಉಪ್ಪಿನ ಕರದಬಗ್ಗೆ ವಿರೋಧ ಭಾವನೆ ಜನರಲ್ಲಿ ಉಂಟಾಯಿತು ಮತ್ತು ಕೇವಲ ಗಾಂಧಿಯವರಿಗಾಗಿಯೋ ಈ ಆಹಾರಪದಾರ್ಥವು ಕರರಹಿತವಾಗಬೇಕು ಎಂದು ಇಂದಿನ ಪೀಳಿಗೆ ತಿಳಿದುಕೊಂಡಿರಬಹುದು. ಇದು ತಪ್ಪು ಅಭಿಪ್ರಾಯ. ಉಪ್ಪಿನ ಕರ ಎಂದಿನಿಂದಲೂ ಅಪ್ರಿಯವಾದುದೇ ಆಗಿತ್ತು. ಅದನ್ನು ಮೊದಲನೆಯ ಜಾರಿಗೆ ಹೇರಿದ್ದು ೧೮೬೦ ರಲ್ಲಿ. ಅಂದಿನಿಂದಲೂ ಅದು ಅಸಂತೋಷಕರವೆನಿಸುತ್ತ ಬಂದಿದೆ. ಇದಕ್ಕಾಗಿ ನಾಡಿನ ನಾನಾ ಭಾಗಗಳಲ್ಲಿ ಗಂಭೀರವಾದ ದಂಗೆಗಳೆದ್ದವು. ವಕೀಲಿಯಲ್ಲಿ ಸರ್ ಫಿರೋಜ್‌ಶಾ ಮೇಥಾ ಅವರಿಗೆ ಪ್ರಮುಖಸ್ಥಾನವನ್ನು ಕೊಟ್ಟ ಸೂತ್ರಿನ ಖಟ್ಲೆಗಳಾದರೂ ಹೊಸದಾಗಿ ಹಾಕಿದ ಉಪ್ಪಿನಕರದ ಗಲಭೆಗಳಿಗೆ ಸಂಬಂಧಿಸಿದುವೇ ಆಗಿದ್ದವು. ಅದನ್ನು ಅರ್ಧದಷ್ಟಕ್ಕಾದರೂ ಇಳಿಸಲು ಸುಮಾರು ೬೦ ವರ್ಷಗಳೂ ಪೂರ್ತಿಯಾಗಿ ತೆಗೆದು ಹಾಕಲು ಮತ್ತೆ ೧೫ ವರ್ಷಗಳೂ ಹಿಡಿದವು. ಸ್ವಾತಂತ್ರ್ಯದ ಹಾದಿ ಎಷ್ಟು ಹೊಂಡ ಗುಂಡಿ ತಿರುತಗ್ಗುಗಳಿಂದ ಕೂಡಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಸ್ವಾತಂತ್ರ್ಯ ಸಂಗ್ರಾಮದ ಸತ್ಯಾಗ್ರಹಿ ಯೋಧನಿಗೆ ಚಿಂತಿಸಲು ಕಾರಣವಿಲ್ಲ. ಸಮರ್ಥನೀಯ ಕಾರಣಗಳಿಲ್ಲದೆ ಅದನ್ನು ಮತ್ತೆ ಹೊರಿಸಲು ಮುಂದಿನ ಸರಕಾರವೊಂದು ಬಯಸಿದರೆ ಅವನು ಪುನಃ ಪುನಃ ಆ ರಣಾಹ್ವಾನವನ್ನು ಸ್ವೀಕರಿಸಲು ಸಿದ್ಧನಿರಬೇಕು.

ವರ್ಧಾ, ೧೬-೮-೪೯ ಕಿ. ಘ. ಮಶ್ರೂವಾಲಾ

## ವ್ಯಾಪಾರ ಪ್ರಪಂಚ

### ಮುಂಬಯಿ ಶೇರಪೇಟೆ

| | ರಾ. ೧ |
|---|---|
| ಮುಂಬಯಿ ಡಾಯಿಂಗ್ | ೧೨೯೫-೦ |
| ಕೋಹಿನೂರು | ೩೪೪-೦ |
| ಸ್ವದೇಶಿ | ೩೫೦-೦ |
| ಗೋಕಾಕ | ೩೯೭-೩ |
| ಸೆಂಚುರಿ | ೨೩೦-೧೪-೦ |
| ಸಿಂಪ್ಲೆಕ್ಸ | ೧೭೯-೦-೦ |
| ಟಾಟಾ ಸ್ಟೀಲ ಡೆಫರ್ಡ | ೧೪೦೦-೦ |
| ಇಂಡಿಯನ್ ಅಯರ್ನ್ | ೨೯-೯ |
| ಅಸೋ. ಸಿಮೆಂಟ್ಸ | ೦೯೩-೦ |
| ಸೆಂಟ್ರಲ ಬ್ಯಾಂಕ್ | ೭೮-೦ |
| ಇಂಪೀರಿಯಲ್ (ಪೂರ್ಣ) | ೧೭೭೫-೦ |

### ಚಿನ್ನ ಬೆಳ್ಳಿ

| | ರಾ. ೦ |
|---|---|
| ತಯಾರಿ ಬೆಳ್ಳಿ | ೧೬೨-೮ |
| ತಯಾರಿ ಚಿನ್ನ | ೧೦೩-೯ |
| ಸಾವರಿನ್ | ೭೫-೯ |

### ಅರಳೆ

| | |
|---|---|
| ಸೆಪ್ಟೆಂಬರ(ಅನಧಿಕೃತ) | ೬೨೫-೧೩ |

### ಎಣ್ಣೆಕಾಳು

| | |
|---|---|
| ಶೇಂಗಾ | ೨೧೮-೨ |
| ಅಗಸೆ ಎಣ್ಣೆ | ೩೨-೦ |
| ಅಗಸೆ ಎಣ್ಣೆ | ೧೯-೪ |

### ಶಿವಮೊಗ್ಗೆ ಅಡಿಕೆ ಪೇಟೆ

ರಾ. ೦

ಶಿವಮೊಗ್ಗೆ ಪೇಟೆಯಲ್ಲಿ ಅಡಿಕೆ ಧಾರಣೆ ಬಂದರ ಈ ರೀತಿ ಇದೆ:—

| | |
|---|---|
| ದೇಶಾವರ ನಂ. ೧ | ೪೨-೪೯ |
| ,, ೨ | ೩೦-೪೨ |
| ನಂ. ೩ | ೨೮-೩೨ |
| ರಾಜಾ ಅಲವು | ೨೬-೪೦ |
| ತೊರಸಾಲು | ೨೯-೩೬ |
| ಬೆಟ್ಟವಂತಿ | ೨೦-೨೨ |
| ಬೆಟ್ಟ | ೧೭-೧೯ |

ಬೇಡಿಕೆ ಚನ್ನಾಗಿದೆ.

### ಹುಬ್ಬಳ್ಳಿ

( ಅ. ಪ್ರೊ. ಮಾರ್ಕೆಟ ಕಮೀಟ ಹುಬ್ಬಳ್ಳಿ)

ರಾ. ೦

| | | | |
|---|---|---|---|
| ಜ. ಹೊ. ಹತ್ತಿ (ನಗಕ್ಕೆ) | | ೪೫೦-೦-೦ | ರಿಂದ ೪೯೫ |
| ಜಿನ್ ಅರಳೆ | ,, | ೨೯೫-೦-೦ | ೩೦೮ |
| ಡಬಲ್ ರೋಲ ಅರಳೆ | ,, | ೨೮೦-೨೯೦ | |
| ಕುಸುಬಿ (ಬ. ಮಣಕ್ಕೆ) | | ೧೬-೧೪-೦ | ೧೭-೧೦-೦ |
| ಅಗಸಿ (ಚೀಲಕ್ಕೆ) | | ೪೩-೦-೦ | ೪೪-೦-೦ |
| ಔಡಲ | ,, | ೩೬-೦-೦ | ೩೮-೦-೦ |
| ಜ. ಹೆಸರು | ,, | ೪೨-೦-೦ | ೪೪-೦-೦ |
| ಕರಿ ಎಳ್ಳು | ,, | ೬೦-೦-೦ | ೬೨-೦-೦ |
| ಬಿಳಿ ಎಳ್ಳು | ,, | ೭೬-೦-೦ | ೭೮-೦-೦ |
| ಕಡಲೆ | ,, | ೫೩-೦-೦ | ೫೫-೦-೦ |
| ಉದ್ದು | ,, | ೩೬-೦-೦ | ೪೨-೦-೦ |
| ಜ. ತೊಗರಿ | ,, | ೨೮-೦-೦ | ೩೦-೦-೦ |
| ಹುರಳಿ | ,, | ೩೨-೦-೦ | ೩೩-೦-೦ |
| ಕೆಂ. ಅಲಸಂದಿ | ,, | ೫೧-೦-೦ | ೫೪-೦-೦ |
| ಬಿ. ಅಲಸಂದಿ | ,, | ೪೨-೦-೦ | ೪೬-೦-೦ |
| ಬೆಲ್ಲ (ಹೇರಿಗೆ ೮ ಮಣ) | | ೬೮-೦-೦ | ೭೨-೦-೦ |
| ಶೇಂಗಾ (ಹೇರು) | | ೪೮-೦-೦ | ೫೦-೦-೦ |
| ಹೊಸ ಶೇಂಗಾ | | ೨೮-೦-೦ | ೩೩-೦-೦ |
| ಶೇಂಗಾ ಕಾಳು | | ೮೦-೦-೦ | ೮೬-೦-೦ |